
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 29 ಶನಿವಾರ 2025
46
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 221 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4









ಮೈಸೂರಿನಲ್ಲಿ ಅಂಗವಿಕಲರ ಗೋಳು ಕೇಳೋರಿಲ್ಲ

ವಾಹನ ನಿಲುಗಡೆಗೆ ವಿಶೇಷ ಚೇತನರ ಪರದಾಟ



ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ ಅಂಗವಿಕಲರ ವಾಹನ ನಿಲುಗಡೆಗೆ ಸಂಚಾರಿ ಪೊಲೀಸರು ನಿಗದಿ ಮಾಡಿರುವ ಸ್ಥಳವನ್ನು ದ್ವಿಚಕ್ರ ವಾಹನ ಸವಾರರು ಅತಿಕ್ರಮಿಸಿಕೊಂಡಿರುವುದು.

ಮೈಸೂರು, ನ.28(ಬಿಎಲ್‌ಯು)– ಮೈಸೂರಿನಲ್ಲಿ ಅಂಗವಿಕಲರು ತಮ್ಮ ವಾಹನಗಳ ನಿಲುಗಡೆಗೆ ಸಂಚಾರಿ ಪೊಲೀಸರು ಸ್ಥಳವನ್ನೇನೋ ನಿಗದಿ ಮಾಡಿದ್ದಾರೆ. ಆದರೆ ಇದರ ಅರಿವು ಇಲ್ಲದ ದ್ವಿಚಕ್ರ ವಾಹನ ಸವಾರರು ಆ ಜಾಗವನ್ನು ಅತಿಕ್ರಮಿಸಿಕೊಳ್ಳುತ್ತಿದ್ದು, ತಮ್ಮ ವಾಹನ ನಿಲುಗಡೆಗೆ ಅಂಗವಿಕಲರು ಪರದಾಡುವ ದೃಶ್ಯ ಸಾಮಾನ್ಯವಾಗಿದೆ.

ಮೈಸೂರಿನ ದೇವರಾಜ ಅರಸ್ ರಸ್ತೆ, ಒಂಟಿ ಕೊಪ್ಪಲ್, ವಿ.ವಿ.ಮೊಹಲ್ಲಾ ಸೇರಿದಂತೆ ಇತರೆಡೆ ಅಂಗವಿಕಲರ ವಾಹನಗಳ ನಿಲುಗಡೆಗೆ ಸಂಚಾರಿ ಪೊಲೀಸರು ಸ್ಥಳ ನಿಗದಿ ಮಾಡಿದ್ದಾರೆ. ಅಲ್ಲದೆ 'ಇಲ್ಲಿ ಅಂಗವಿಕಲರ ವಾಹನಗಳ ನಿಲುಗಡೆಗೆ ಮಾತ್ರ ಅವಕಾಶ' ಎಂದು ಫಲಕ ಕೂಡ ಹಾಕಿ ಎಚ್ಚರಿಸಿದ್ದಾರೆ.

ಆದರೆ ಅಂಗವಿಕಲರ ವಾಹನಗಳ ನಿಲುಗಡೆ ಸ್ಥಳವನ್ನು ಅತಿಕ್ರಮಿಸಿಕೊಳ್ಳುವ ಸಾಮಾನ್ಯ ದ್ವಿಚಕ್ರ ವಾಹನ ಸವಾರರು ಅಲ್ಲಿ ತಮ್ಮ ವಾಹನ ನಿಲುಗಡೆ ಮಾಡಿ ಬೇಜವಾಬ್ದಾರಿ ಮೆರೆಯುತ್ತಿದ್ದಾರೆ.

ದೇವರಾಜ ಅರಸ್ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು, ಉದ್ದಕ್ಕೂ ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ಕೆಲವು ಬಾರಿ ದ್ವಿಚಕ್ರ ವಾಹನ ನಿಲ್ಲಿಸಲು ಜಾಗವಿಲ್ಲದೆ ದೇವರಾಜ ಅರಸ್ ರಸ್ತೆ ಆರಂಭ ದಿಂದ ಕೊನೆ ತನಕ ಹುಡುಕಿದರೂ ಸಣ್ಣ ಜಾಗ ಕೂಡ ಸಿಗುವುದಿಲ್ಲ. ಇದರಿಂದ ದಿವಾನ್ಸ್ ರಸ್ತೆ ಹಾಗೂ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ವಾಹನ ನಿಲ್ಲಿಸಿ ತಮ್ಮ ಕೆಲಸ ಕಾರ್ಯಗಳಿಗೆ ಹೋಗುತ್ತಾರೆ.

ದ್ವಿಚಕ್ರ ವಾಹನ ಸವಾರರಿಗೆ ಈ ರೀತಿಯ ತೊಂದರೆಯಾಗಿದೆ. ಇನ್ನು ಅಂಗವಿಕಲರಿಗೆ ಇದರಿಂದ ಮತ್ತಷ್ಟು ತೊಂದರೆಯಾಗಿದೆ. ಮೂರು ಚಕ್ರದ ವಾಹನ ನಿಲ್ಲಿಸಲು ಅಂಗವಿಕಲರಿಗೆ ಸ್ವಲ್ಪ ಜಾಗ ಹೆಚ್ಚಾಗಿಬೇಕು. ಆದರೆ ತಮಗೆ ಸೀಮಿತವಾಗಿರುವ ಸ್ಥಳದಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸುವ ಕಾರಣ ತಮ್ಮ ವಾಹನ ನಿಲುಗಡೆಗೆ ಅವಕಾಶವಿಲ್ಲದೆ ಪರದಾಡುವ ದೃಶ್ಯ ಸಾಮಾನ್ಯವಾಗಿದೆ.

ಅಂಗವಿಕಲರ ವಾಹನ ನಿಲುಗಡೆ ಸ್ಥಳದಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ ಸಂಚಾರ ನಿಯಮ ಉಲ್ಲಂಘಿಸುವವರಿಗೆ ಸಂಚಾರಿ ಪೊಲೀಸರು ದಂಡ ವಿಧಿಸುತ್ತಿದ್ದಾರೆ. ಆದರೂ ಬಹಳಷ್ಟು ಜನ ಬುದ್ಧಿ ಕಲಿತಿಲ್ಲ. ಅಂಗವಿಕಲರಿಗೆ ತೊಂದರೆ ನೀಡಬಾರದೆಂಬ ಕನಿಷ್ಠ ಮಾನವೀಯತೆ ಇಲ್ಲದಂತಾಗಿದೆ.

ಎಲ್ಲಾ ಲೋಪಗಳಿಗೆ ಪೊಲೀಸರನ್ನು ದೂಷಿಸುವುದು ಸರಿಯಲ್ಲ. ಪ್ರತಿಯೊಂದು ಕಾನೂನು ನಿಯಮ ಜಾರಿ ಮಾಡಲು ದಂಡಾಸ್ತ್ರ ಒಂದೇ ಪರಿಹಾರವಲ್ಲ. ಜನ ಸಾಮಾನ್ಯರು ತಮ್ಮ ಜವಾಬ್ದಾರಿ ಅರಿಯಬೇಕು. ಆಗ ಮಾತ್ರ ಶಿಸ್ತು ಬದ್ಧ ಸಂಚಾರ ವ್ಯವಸ್ಥೆ ಜಾರಿಯಲ್ಲಿರಲು ಸಾಧ್ಯ.

ಆಧುನೀಕರಣಗೊಂಡ ವಿದ್ಯಾರಣ್ಯಪುರಂ ಕಾಂಪೋಸ್ಟ್ ಘಟಕ

ಡಿಸೆಂಬರ್‌ನಿಂದ ಕಾರ್ಯಾರಂಭ



ಮೈಸೂರು, ನ.28(ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆಯಿಂದ ಆಧುನೀಕರಣಗೊಳಿಸಿರುವ ವಿದ್ಯಾರಣ್ಯಪುರಂನ ಸುಯೇಜ್ ಫಾರಂನಲ್ಲಿರುವ ಕಾಂಪೋಸ್ಟ್ ಘಟಕವು ಡಿಸೆಂಬರ್‌ನಿಂದ ಕಾರ್ಯಾರಂಭಗೊಳ್ಳಲಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಈ ಹಿಂದೆ ಖಾಸಗಿ ಸಂಸ್ಥೆಯವರು ನಡೆಸುತ್ತಿದ್ದ ಎಕ್ಸಲ್ ಪ್ಲಾಂಟ್ ಅನ್ನು 2022ರಲ್ಲಿ ಸ್ಥಗಿತಗೊಳಿಸಲಾಗಿತ್ತು. ಇದೀಗ ಪಾಲಿಕೆಯಿಂದಲೇ ಘಟಕದಲ್ಲಿ ಹೊಸ ಯಂತ್ರೋಪಕರಣಗಳನ್ನು ಅಳವಡಿಸಿ ನವೀಕರಿಸಲಾಗಿದೆ ಎಂದರು.



ಶೇಖ್ ತನ್ವೀರ್ ಆಸಿಫ್

ಮೈಸೂರು ನಗರದಲ್ಲಿ ಮನೆ ಮನೆಯಿಂದ ಸಂಗ್ರಹಿಸುವ ಕಸವನ್ನು ಬೇರ್ಪಡಿಸಿ ಮೂರು ಹಂತದಲ್ಲಿ ಸಂಸ್ಕರಣೆ ಮಾಡಿದ ಬಳಿಕ ಅಂತಿಮವಾಗಿ ಕಾಂಪೋಸ್ಟ್ ಗೊಬ್ಬರ ತಯಾರಿಸುವ ವಿದ್ಯಾರಣ್ಯಪುರಂ ಕಾಂಪೋಸ್ಟ್ ಪ್ಲಾಂಟ್‌ನಲ್ಲಿ ದಿನಕ್ಕೆ 200 ಟನ್ ಘನ ತ್ಯಾಜ್ಯವನ್ನು ಸಂಸ್ಕರಿಸುವ ಉದ್ದೇಶ ಹೊಂದಲಾಗಿದೆ. ಸ್ವಚ್ಛ ಭಾರತ್ ಮಿಷನ್ (ಎಸ್‌ಬಿಎಂ) ಅಡಿ 10 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಿರುವ ಘಟಕದಲ್ಲಿ ಸಿವಿಲ್ ಕಾಮಗಾರಿ ಹಾಗೂ ವಾಹನಗಳಿಗೆ 7.5 ಕೋಟಿ ರೂ. ಮತ್ತು ಯಂತ್ರೋಪಕರಣ ಖರೀದಿ ಮತ್ತು ಸ್ಥಾಪನೆ 2.9 ಕೋಟಿ ರೂ. ವ್ಯಯ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಘಟಕವನ್ನು ಪಾಲಿಕೆಯಿಂದಲೇ ನಿರ್ವಹಣೆ ಮಾಡಲಿದ್ದು, ಕಾರ್ಮಿಕರನ್ನು ಮಾತ್ರ ಟೆಂಡರ್ ಪ್ರಕ್ರಿಯೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲಾಗುವುದು. ಇದೀಗ ಘಟಕಕ್ಕೆ ವಿದ್ಯುತ್, ನೀರಿನ ಸಂಪರ್ಕ ಹಾಗೂ ಇನ್ನಿತರ ಸೌಲಭ್ಯವನ್ನು ಶಾಶ್ವತವಾಗಿ ಕಲ್ಪಿಸಲಾಗಿದ್ದು ಕಾರ್ಯಾರಂಭಕ್ಕೆ ಸರ್ವ ರೀತಿಯಲ್ಲಿ ಸಜ್ಜುಗೊಳಿಸಲಾಗಿದೆ ಎಂದ ಅವರು, ಈಗ್ಗೆ ಮೂರು ತಿಂಗಳ ಹಿಂದೆಯೇ ಘಟಕ ಕಾರ್ಯಾರಂಭ ಮಾಡಬೇಕಾಗಿತ್ತಾದರೂ ಕೆಲ ತಾಂತ್ರಿಕ ಕಾರಣಗಳಿಂದಾಗಿ ವಿಳಂಬವಾಗಿತ್ತು ಎಂದರು.

1996 ರಿಂದ 2022ರವರೆಗೆ ಮುಂಬೈ ಮೂಲದ ಎಕ್ಸಲ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯು ಮೈಸೂರಿನ ವಿದ್ಯಾರಣ್ಯಪುರಂನ ಸುಯೇಜ್ ಫಾರಂನಲ್ಲಿ ಎಕ್ಸಲ್ ಪ್ಲಾಂಟ್ ನಿರ್ಮಿಸಿ ತ್ಯಾಜ್ಯ ಸಂಸ್ಕರಣ ಕಾರ್ಯ ನಡೆಸುತ್ತಿತ್ತು. ಅಲ್ಲಿ ಉತ್ಪಾದಿಸಲಾದ ಗೊಬ್ಬರವನ್ನು ಚೀಲದಲ್ಲಿ ಪ್ಯಾಕ್ ಮಾಡಿ ಮಾರಾಟ ಮಾಡಲಾಗುತ್ತಿತ್ತು. ಪ್ರತಿದಿನ ಆರಂಭದಲ್ಲಿ ಮೈಸೂರು ನಗರದಾದ್ಯಂತ ಪ್ರತಿದಿನ ಸರಾಸರಿ 400 ರಿಂದ 450 ಟನ್‌ನಷ್ಟು ತ್ಯಾಜ್ಯ ಉತ್ಪಾದನೆಯಾಗುತ್ತಿತ್ತು. ಈಗ ದಿನಕ್ಕೆ 550 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ.

ಕಾಂಪೋಸ್ಟ್ ಘಟಕದಲ್ಲಿ ಕೇವಲ 200 ಟನ್ ತ್ಯಾಜ್ಯವನ್ನು ಮಾತ್ರ ಸಂಸ್ಕರಿಸಲಾಗುತ್ತಿದೆ, ಉಳಿದ ತ್ಯಾಜ್ಯವನ್ನು ಸುಯೇಜ್ ಫಾರಂ, ಕೆಸರೆ ಹಾಗೂ ರಾಯನಕೆರೆ ಘಟಕಗಳಿಗೆ ಸುರಿಯಲಾಗುತ್ತಿದೆ. ಸುಯೇಜ್ ಫಾರಂನಲ್ಲಿ ಬೆಟ್ಟದಂತೆ ಬೆಳೆದಿರುವ ತ್ಯಾಜ್ಯವನ್ನು ತೆರವುಗೊಳಿಸಲು ಗುಜರಾತ್ ಮೂಲದ ಸಂಸ್ಥೆಯೊಂದಕ್ಕೆ ನೀಡಲಾಗಿದ್ದು 2026ರ ಅಂತ್ಯದೊಳಗೆ ಸಂಪೂರ್ಣವಾಗಿ ತೆರವುಗೊಳಿಸುವ ನಿರೀಕ್ಷೆಯಿದೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾದರೆ ದಲಿತ ಸಮುದಾಯಕ್ಕೆ ಅವಕಾಶ ಕೊಡಿ

ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹ



ಮೈಸೂರು,ನ.28(ಜಿಎ)–ಒಕ್ಕಲಿಗ, ಲಿಂಗಾಯಿತ, ಹಿಂದುಳಿದ ವರ್ಗ, ಅತೀ ಹಿಂದುಳಿದ ವರ್ಗ, ಕುರುಬ ಸಮುದಾಯ ಸೇರಿದಂತೆ ಬಹುತೇಕ ಎಲ್ಲಾ ಸಮುದಾಯ ವು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾರೆ. ಈ ಬಾರಿ ದಲಿತ ಸಮುದಾಯವರಿಗೆ ಅವಕಾಶ ನೀಡಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಗಲಾಟೆ ಜೋರಾಗಿ ನಡೆಯುತ್ತಿದೆ. ಸ್ವಾತಂತ್ರ್ಯ ನಂತರ ದಲಿತ ಸಮುದಾಯ ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದೆ. ಆದರೆ, ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂಬಂತೆ ಈವರೆಗೂ ದಲಿತರು ಮುಖ್ಯಮಂತ್ರಿ ಆಗಲು ಸಾಧ್ಯವಾಗಿಲ್ಲ. ಈ ಬಾರಿ ಮುಖ್ಯಮಂತ್ರಿ ಬದಲಾವಣೆ ಆದರೆ, ದಲಿತರಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಈ ಹಿಂದೆ ಎನ್.ರಾಚಯ್ಯ, ಬಿ.ರಾಚಯ್ಯ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮುಖ್ಯಮಂತ್ರಿ ಅವಕಾಶ ತಪ್ಪಿದೆ. ಆದ್ದರಿಂದ ರಾಜ್ಯದಲ್ಲಿರುವ ಡಾ.ಜಿ. ಪರಮೇಶ್ವರ್, ಡಾ.ಹೆಚ್.ಸಿ.ಮಹದೇವಪ್ಪ, ಕೆ.ಹೆಚ್.ಮುನಿಯಪ್ಪ ಅವರಿಗೆ ಅವಕಾಶ ಕೊಡಿ ಅಥವಾ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ವರ್ಷದ ಅವಧಿ ಪೂರ್ಣಗೊಳಿಸಿದರೆ ನಮ್ಮ ಅಭ್ಯಂತರವಿಲ್ಲ. 2028ಕ್ಕೆ ದಲಿತ ಮುಖ್ಯಮಂತ್ರಿ ಎಂದು ಘೋಷಿಸಿ ಎಂದರು.

ಈಗಾಗಲೇ ರಾಜ್ಯದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವಂತೆ ಒಕ್ಕಲಿಗರ ಸಂಘ ಪ್ರತಿಭಟನೆ ಮಾಡುತ್ತಿದೆ. ಸಮುದಾಯದ ಸ್ವಾಮೀಜಿಗಳು ಬೆಂಬಲಕ್ಕೆ ನಿಂತಿದ್ದಾರೆ. ಅದು ಅವರ ಹಕ್ಕು. ನಾವು ಹೋರಾಟ ಮಾಡಿಕೊಂಡು ಬಂದಿರುವವರು ನಮಗೂ ಬೀದಿಯಲ್ಲಿ ನಿಂತು ಹೋರಾಟ ಮಾಡಲು ಬರುತ್ತದೆ. ಆದರೆ, ಗೌರವ ದಿಂದ ಅಧಿಕಾರ ಪಡೆದುಕೊಳ್ಳಬೇಕು ಎಂದು ಸುಮ್ಮನೆ ಇದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಿದ್ದಸ್ವಾಮಿ, ವಿಷಕಂಠ ಉಪಸ್ಥಿತರಿದ್ದರು.

ಡಿ.4ಕ್ಕೆ ರಮೇಶ್ ಉತ್ತಪ್ಪರ ಕೃತಿಗಳ ಬಿಡುಗಡೆ

ಮೈಸೂರು,ನ.28(ಜಿಎ)– ಮೈಸೂರು ಕಲ್ಚರಲ್ ಅಸೋಸಿಯೇಷನ್ ಹಾಗೂ ಕಲಿಸು ಫೌಂಡೇಷನ್ ವತಿಯಿಂದ ಡಿ.4ರಂದು ಬೆಳಗ್ಗೆ 10.30ಕ್ಕೆ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ 'ಸಾವಿನ ಸತ್ಯ–ಅರ್ಜುನ ನಿನ್ನ ಕೊಂದದ್ದು ಮದಗಜವಲ್ಲ ಪಾಪಿ ಮನುಷ್ಯ' ಮತ್ತು 'ದಸರಾ ಆನೆಗಳು– ಭೀಮ ಹಾಗೂ ಇತರರು' ಕೃತಿಗಳ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದಾರೆ. ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜು ಗೌಡ, ಕಾಂಗ್ರೆಸ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಕೃತಿಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಸಂದರ್ಭ ಅರಣ್ಯ ಇಲಾಖೆಯಲ್ಲಿ ಸಾಕಷ್ಟು ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಪಶು ವೈದ್ಯಾಧಿಕಾರಿ ಡಾ.ಮುಜೀಬ್ ಉರ್ ರೆಹಮಾನ್ ಹಾಗೂ ಅರ್ಜುನನ ಅಭಿಮಾನಿ ಶ್ರೀಮತಿ ಕೆ.ಆರ್. ಸತ್ಯಪ್ರಭಾ ಅವರನ್ನು ಸನ್ಮಾನಿಸಲಾಗುವುದು.

ಕಾರ್ಯಕ್ರಮಕ್ಕೆ ಅರ್ಜುನನ ಅಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕಲ್ಚರಲ್ ಅಸೋಸಿಯೇಷನ್‌ನ ಅಧ್ಯಕ್ಷ ಎ.ಪಿ.ನಾಗೇಶ್ ಹಾಗೂ ಕಲಿಸು ಫೌಂಡೇಷನ್‌ನ ಸಹ ಸಂಸ್ಥಾಪಕ ಎಂ.ಎಂ.ನಿಖಿಲೇಶ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ನಾಳೆ ಸಂವಿಧಾನ 75ರ ಸಂಭ್ರಮ ವಾಕಥಾನ್

ಮೈಸೂರು,ನ.28(ಜಿಎ)–ಮೈಸೂರಿನ ಭೀಮ ಬಲ ಬಳಗದ ವತಿಯಿಂದ ಸಂವಿಧಾನದ 75ರ ಸಂಭ್ರಮ ಹಿನ್ನೆಲೆ ನ.30ರಂದು ಬೆಳಗ್ಗೆ 7.30ಕ್ಕೆ ನಗರದ ಮೈಸೂರು ವಿವಿ ಕ್ರಾಫರ್ಡ್ ಭವನದಿಂದ ಟೌನ್ ಹಾಲ್ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ ವಾಕಥಾನ್ ಹಮ್ಮಿಕೊಂಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಸದಸ್ಯ ಶರತ್ ಸತೀಶ್ ಈ ವಿಷಯ ತಿಳಿಸಿ, ಕ್ರಾಫರ್ಡ್ ಭವನದ ನಾಲ್ವಡಿ ಪ್ರತಿಮೆ ಬಳಿ ಉಪ ಪೊಲೀಸ್ ಆಯುಕ್ತ ಸುಂದರ್‌ರಾಜ್, ವಿವಿ ವಿದ್ಯಾರ್ಥಿಗಳ ಕ್ಷೇಮ ಪಾಲನಾ ನಿರ್ದೇಶಕ ಗುರು ಸಿದ್ದಯ್ಯ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ವಾಕಥಾನ್‌ಗೆ ಚಾಲನೆ ನೀಡಲಿದ್ದಾರೆ. ಈ ವೇಳೆ ಬಳಗದ 75 ಮಂದಿ ಸದಸ್ಯರು ಡಾ.ಬಿ.ಆರ್. ಅಂಬೇಡ್ಕರ್ ಚಿತ್ರದ ಟೀ ಶರ್ಟ್ ಧರಿಸಿ ಮುಂಚೂಣಿಯಲ್ಲಿರಲಿದ್ದಾರೆ. ವಿವಿಧ ಸಂಘಟನೆಗಳ ಸದಸ್ಯರು, ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಡನಹಳ್ಳಿ ಸುರೇಶ್, ಡಾ.ಪ್ರತಾಪ್, ಡಾ.ಕಿರಣ್, ಪುಷ್ಪ ಉಪಸ್ಥಿತರಿದ್ದರು.

ಮಹಿಳಾ ಕೌಶಲ್ಯ, ವ್ಯವಹಾರ ಜ್ಞಾನ ಮೆರೆದ 'ಸ್ನೇಹ ಸಂತೆ' ಪ್ರದರ್ಶನ–ಮಾರಾಟ



ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ವತಿಯಿಂದ ಆಯೋಜಿಸಿದ್ದ 'ಸ್ನೇಹ ಸಂತೆ' ಆಕರ್ಷಕ ವಸ್ತುಗಳ ಪ್ರದರ್ಶನ.

ಮೈಸೂರು, ನ.28(ಎಂಟಿವೈ)– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ವತಿಯಿಂದ ಆಯೋಜಿಸಿದ್ದ 'ಸ್ನೇಹ ಸಂತೆ' ಗಮನ ಸೆಳೆಯಿತು.

ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಲಘು ಉದ್ಯಮಿಗಳು ವಿವಿಧ ಬಗೆಯ ಸೀರೆ, ಆಭರಣಗಳು, ಅಲಂಕಾರಿಕಾ ವಸ್ತಗಳು, ಲೈಫ್‌ಸ್ಟೈಲ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದಿಂದ ಗ್ರಾಹಕರ ಮೆಚ್ಚುಗೆಗೆ ಪಾತ್ರರಾದರು. ಸಣ್ಣ ವ್ಯಾಪಾರಿಗಳು ಮತ್ತು ಮಹಿಳಾ ಉದ್ಯಮಿಗಳಿಗೆ ವೇದಿಕೆ ನೀಡುವ ಮೂಲಕ ಅವರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಆಯೋಜಿಸಿದ್ದ ವಸ್ತು ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಈ ವಸ್ತು ಪ್ರದರ್ಶನಕ್ಕೆ ಡಾ. ಹೇಮಾ ಮಾಲಿನಿ ಲಕ್ಷ್ಮಣ್ (ಫಾರ್ಮರ್ ಮಿಸೆಸ್ ಇಂಡಿಯಾ ಯುನಿವರ್ಸ್), ವಿನ್ಯಾಸಕರಾದ ಜಯಂತಿ ಬಲ್ಲಾಳ್ ಹಾಗೂ ಇನ್ನಿತರರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ದಾವಣಗೆರೆಯ ಸ್ವಾತಿ ತಿಪ್ಪೇಸ್ವಾಮಿ, ಪ್ರತಿಭಾ ನಾಯಕ್, ಸ್ಮಿತಾ ಬಾಲು, ರಮ್ಯಾ ಗೌಡ, ಡಾ. ವರ್ಷಾ ಜೈನ್, ನೀಲಂ ಜೈನ್ ಹಾಗೂ ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ನಿವೃತ್ತ ಎಆರ್‌ಎಸ್‌ಐ ಮಹದೇವ್ ನಿಧನ



ಮೈಸೂರು, ನ.28–ಮೈಸೂರಿನ ಸರ್ದಾರ್ ವಲ್ಲಭ ಭಾಯ್ ಪಟೇಲ್ ನಗರ ನಿವಾಸಿ, ಸಶಸ್ತ್ರ ಮೀಸಲು ಪಡೆಯ ನಿವೃತ್ತ ಸಬ್ ಇನ್ಸ್‌ಪೆಕ್ಟರ್ ಮಹದೇವ್ (68) ಅವರು ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ನಾಳೆ (ಶನಿವಾರ) ಮಧ್ಯಾಹ್ನ ಲಲಿತಾದ್ರಿಪುರಂನಲ್ಲಿರುವ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.11.2025 ಶನಿವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜುವೆಲರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ :** ಅಂತರ ಶಾಲಾ ಜಾನಪದ ನೃತ್ಯ ಸ್ಪರ್ಧೆ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಕೆ. ರಾಮಮೂರ್ತಿರಾವ್, ಸ್ಥಳ : ಶಾಲೆ ಆವರಣ, ಸಿದ್ದಾರ್ಥನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ದೊಡ್ಡಮ್ಮತಾಯಿ ಸೇವಾ ಟ್ರಸ್ಟ್ :** ದೊಡ್ಡಮ್ಮತಾಯಿ ಅಮ್ಮನವರ ಪೂಜಾ ವಾರ್ಷಿಕೋತ್ಸವ, ಉಪಸ್ಥಿತರು : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸ್ಥಳ: ದೊಡ್ಡಮ್ಮತಾಯಿ ದೇವಸ್ಥಾನ, ಬೆಳಗ್ಗೆ 10 ರಿಂದ.

■ **ಗೋಪಾಲಸ್ವಾಮಿ ಶಿಶುವಿಹಾರ :** ಡಾ. ಎಂ.ವಿ. ಗೋಪಾಲಸ್ವಾಮಿ ಸ್ಮಾರಕ ಅಂತರ ಶಾಲಾ ಸ್ಪರ್ಧೆ, ಮುಖ್ಯ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಪ್ರೌಢಶಾಲೆ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಫಾರ್ ವುಮೆನ್ :** 70ನೇ ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು : ಭರತನಾಟ್ಯ ಗುರು ಡಾ. ವಸುಂಧರಾ ದೊರೆಸ್ವಾಮಿ, ಉಪಸ್ಥಿತರು : ಗೀತಾ ಶಿಶು ಶಿಕ್ಷಣ ಸಂಘದ ಕಾರ್ಯದರ್ಶಿ ಶ್ರೀಮತಿ ಅನುಪಮಾ ಬಿ. ಪಂಡಿತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರ್.ಕೆ. ಭರತ್, ಪ್ರಿನ್ಸಿಪಾಲ್ ಡಾ. ಎಂ. ಶಿವಕುಮಾರ್, ಸ್ಥಳ: ಎಂ. ಗೋವಿಂದರಾವ್ ಸ್ಮಾರಕ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಲಾ ಗೈಡ್ ಬಳಗ, ಮೈಸೂರು :** ಬೆಳಗ್ಗೆ 10.30ಕ್ಕೆ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಬೆಳ್ಳಿ ಸಂಭ್ರಮ, ಕ್ಯಾಲೆಂಡರ್, ಡೈರಿ ಬಿಡುಗಡೆ ಸಮಾರಂಭ, ಕ್ಯಾಲೆಂಡರ್, ಡೈರಿ ಬಿಡುಗಡೆ : ಹೈಕೋರ್ಟ್ ನ್ಯಾಯಾಧೀಶರಾದ ಶ್ರೀಮತಿ ಎಂ.ಜಿ. ಉಮಾ, ಮುಖ್ಯ ಅತಿಥಿಗಳು : ನಿವೃತ್ತ ಐಜಿಪಿ ಡಿ.ಎನ್. ಮುನಿಕೃಷ್ಣ, ಮಾಜಿ ಸಚಿವ ಎ. ಮಂಜು, ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜ್, ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಪ್ರಾದೇಶಿಕ ಜಂಟಿ ಸಾರಿಗೆ ಆಯುಕ್ತ ವಸಂತ್ ಈಶ್ವರ್ ಚೌಹಾಣ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ.

■ **ಮೈಸೂರು ಹಿಮೋಫಿಲಿಯಾ ಸೊಸೈಟಿ :** ಸಂಸ್ಥಾಪಕರ ದಿನಾಚರಣೆ ಮತ್ತು ಪ್ರತಿಬಂಧಕ ಪರೀಕ್ಷೆ ಮತ್ತು ಭೌತಚಿಕಿತ್ಸೆಯ ಶಿಬಿರ, ಅತಿಥಿಗಳು : ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಡಾ. ಬಿ. ಮಲ್ಲಿಕಾ, ಕೆ.ಆರ್. ಆಸ್ಪತ್ರೆ ಆರ್‌ಎಂಒ ಡಾ. ನಯಾಜ್ ಪಾಷಾ, ಎಚ್‌ಒಡಿ ಬ್ಲಡ್ ಬ್ಯಾಂಕ್–ಕೆ.ಆರ್. ಆಸ್ಪತ್ರೆಯ ಡಾ. ಕುಸುಮಾ, ಕಾಮಾಕ್ಷಿ ಆಸ್ಪತ್ರೆಯ ಟ್ರಸ್ಟಿ ಮಹೇಶ್ ಶೆಣೈ, ನಾರಾಯಣಸ್ವಾಮಿ, ಸ್ಥಳ: ಕಾಮಾಕ್ಷಿ ಆಸ್ಪತ್ರೆ, ಜೆ.ಪಿ.ನಗರ, ಬೆಳಗ್ಗೆ 10.30 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ನೂತನ ವಿದ್ಯಾರ್ಥಿಗಳಿಗೆ ಪರಿಚಯ ಕಾರ್ಯಕ್ರಮ, ಉದ್ಘಾಟನೆ : ಸಾಹಿತಿ ಪ್ರೊ. ಜಿ. ಚಂದ್ರಶೇಖರ್, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಪ್ರೊ. ಎಂ. ರಾಮನಾಥಂ ನಾಯುಡು, ಡಾ. ಸಿ.ಎಸ್. ಆನಂದಕುಮಾರ್, ಪ್ರಾಸ್ತಾವಿಕ ನುಡಿ : ಡೀನ್ ಡಾ. ಎನ್.ಆರ್. ಚಂದ್ರೇಗೌಡ, ಸ್ಥಳ: ಸ್ಟುಡಿಯೋ ವಿಭಾಗ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ :** ವಿಶ್ವ ನಗರ ಯೋಜನಾ ದಿನ, ವಿಶ್ವ ನಗರೀಕರಣ ದಿನ ಹಾಗೂ ವಿಶ್ವ ಪರಂಪರಾ ವಾರಾಚರಣೆ, ಮುಖ್ಯ ಅತಿಥಿಗಳು : ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಕರ್ನಾಟಕ ರೀಜನಲ್ ಚಾಪ್ಟರ್ ಅಧ್ಯಕ್ಷ ಕೆ.ಎನ್. ನಾರಾಯಣಗೌಡ, ಸ್ಥಳ: ಡಾ. ಕೆ.ಎಸ್. ರಂಗಪ್ಪ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ ವ್ಯವಹಾರ ಆಡಳಿತ ಅಧ್ಯಯನ ವಿಭಾಗ :** ಗೋಲ್ಡನ್ ಜ್ಯೂಬಿಲಿ ಆಚರಣೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಪ್ರೊ. ಡಿ. ಆನಂದ್, ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜ, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಅಧ್ಯಕ್ಷತೆ : ಬಿಐಎಂಎಸ್ ಅಧ್ಯಕ್ಷ ಪ್ರೊ. ಆರ್. ಮಹೇಶ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ರಾಜ್ಯ ದಲಿತ ಹಿಂದುಳಿದ ಅಲ್ಪಸಂಖ್ಯಾತ ವೇದಿಕೆ :** ಮುಖ್ಯಮಂತ್ರಿ ಸಿದ್ದರಾಮಯ್ಯನವರು 5 ವರ್ಷ ಪೂರೈಸಲೆಂದು ಹೋಮ, ಉಪಸ್ಥಿತರು : ಅಹಿಂದ ಮುಖಂಡರಾದ ಜಯರಾಜ್ ಹೆಗಡೆ, ಎನ್.ಚೇತನ್‌ರಾಜ್, ಪೌರಕಾರ್ಮಿಕ ಅಧ್ಯಕ್ಷ ನಾಗರಾಜ್, ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲ, ಶ್ರೀಕಾಂತ್ ಯಾದವ್, ಸವಿತಾ ಸಮಾಜದ ಕಿರಾಳು ಸತ್ಯರಾಜ್, ಸಂತೋಷ್, ಸ್ಥಳ: ಶ್ರೀ ದೊಡ್ಡಮ್ಮತಾಯಿ ದೇವಸ್ಥಾನ, ದತ್ತನಗರ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೊಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಡಿ. ಪುರುಷೋತ್ತಮ್ ಹಾಗೂ ಕೆ. ಶ್ರೇಯಾ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯತ್ರಿ ವೆಂಕಟರಾಘವನ್ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, ಮಕ್ಕಳ ಸಾಹಿತ್ಯ ರಂಗ–ಮಕ್ಕಳ ಬರಹಗಳನ್ನಾಧರಿಸಿದ ಕಾರ್ಯಕ್ರಮ, 4.00 ನಾಟಕ–ಅಂಗುಲಿ ಮಾಲಾ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಕೆ.ಆರ್. ಪೇಟೆ ತಾಲ್ಲೂಕು ಮಡುವಿನಕೋಡಿ ಗ್ರಾಮದ ಕೃಷಿಕ ಆರ್.ಸುರೇಶ್ ಅವರೊಂದಿಗೆ ಸಂದರ್ಶನ. ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸದಾಶಿವ್ ಐಹೊಳಿ–ಹಾಡುಗಾರಿಕೆ, ಖಯಾಲ್

■ **ಆಪ್ಟಿಕೇರ್ ವಾಕ್ ಮತ್ತು ಶ್ರವಣ ಕ್ಲಿನಿಕ್ :** ಉಚಿತ ವಾಕ್ ಮತ್ತು ಶ್ರವಣ ಶಿಬಿರ, ಸ್ಥಳ: ಆಪ್ಟಿಕೇರ್ ಆಸ್ಪತ್ರೆ, ಸಯ್ಯಾಜಿರಾವ್ ರಸ್ತೆ, ಅಗ್ರಹಾರ, ಬೆಳಗ್ಗೆ 11 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಜೆಎಸ್‌ಎಸ್ ರಂಗೋತ್ಸವ, ಮೈಸೂರು ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಡಾ. ವೈದೇಹಿಯವರ "ಧಾಂ... ಧೂಂ... ಸುಂಟರಗಾಳಿ" ನಾಟಕ ಪ್ರದರ್ಶನ, ಸಮಾರೋಪ ಸಮಾರಂಭ, ಅಧ್ಯಕ್ಷತೆ : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಗೌರಿಶಂಕರ ನಂದಿಧ್ವಜ ಸಂಘದ ಅಧ್ಯಕ್ಷ ಮಹದೇವಪ್ಪ ಉಡಿಗಾಲ, ಸಮಾರೋಪ ಭಾಷಣ : ನೂಪುರ ಟ್ರಸ್ಟ್‌ನ ನಿರ್ದೇಶಕರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಕೆ. ರಾಮಮೂರ್ತಿರಾವ್ ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 11.15 ಗಂಟೆಗೆ

■ **ಶ್ರೀ ಶಾಂತಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ ಸಮಿತಿ, ಸಕಲ ಜೈನ ಸಮಾಜ :** ಶ್ರೀ ಶಾಂತಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ, ದಿವ್ಯ ಉಪಸ್ಥಿತರು : 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರು, ಶ್ರೀ ಕ್ಷೇತ್ರ ಕಂಬದಹಳ್ಳಿ ಜೈನ ಮಠದ ಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀ ಕ್ಷೇತ್ರ ಹೊಂಬುಜ ಜೈನಮಠದ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ, ಮುಖ್ಯ ಅತಿಥಿಗಳು : ಮಾಜಿ ಸಚಿವ ಹೆಚ್. ವಿಶ್ವನಾಥ್, ಸನ್ಮಾನಿತರು : ಶಿಲ್ಪಿ ಡಾ. ಅರುಣ್ ಯೋಗಿರಾಜ್, ಸ್ಥಳ: ಕೋಟೆ ಶ್ರೀ ಶಾಂತಿನಾಥ ಬಸದಿ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ದಿ ಅನಾಥಾಲಯ :** ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆ, ಉಪನ್ಯಾಸಕರು : ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಅಧ್ಯಕ್ಷತೆ : ಅನಾಥಾಲಯ ಅಧ್ಯಕ್ಷ ಸಿ.ವಿ. ಗೋಪಿನಾಥ್, ಸ್ಥಳ: ಅನ್ನಪೂರ್ಣ ನಿಲಯ, ಅನಾಥಾಲಯ, ಸಂಜೆ 4.15ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 908, ಕಥೆ ಹೇಳುವವರು: ಬಾಲಕೃಷ್ಣಯ್ಯ ಬಿ, ನಿವೃತ್ತ ಶಿಕ್ಷಕರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಇಲಾಖೆ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಸುಯೋಗ್ ಆಸ್ಪತ್ರೆ, ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ :** ಸುಯೋಗ್ ಸಕ್ಕರೆ ಕಾಯಿಲೆ ಮತ್ತು ಸೂಪರ್ ಸ್ಪೆಷಾಲಿಟಿ ಕೇಂದ್ರದ ಉದ್ಘಾಟನಾ ಸಮಾರಂಭ, ಸಕ್ಕರೆ ಕಾಯಿಲೆ ಪೂರ್ಣ ವಾಸಿ ಸಾಧ್ಯವೇ ಕುರಿತು ಉಪನ್ಯಾಸ, ಉದ್ಘಾಟನೆ : ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತ ಎಚ್. ಬಸವರಾಜೇಂದ್ರ, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಮುಖ್ಯ ಅತಿಥಿಗಳು : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಬಿ. ರಾಘವೇಂದ್ರ, ಸ್ಥಳ: ಐಎಂಎ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 4.30ಕ್ಕೆ.

■ **ಕೃಷ್ಣೇ ಡ್ಯಾನ್ಸ್ ಸ್ಕೂಲ್ :** ಚಿಗಿರೆ ವರ್ಷಂ–2025 ಸಾಂಸ್ಕೃತಿಕ ಉತ್ಸವ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಭರತನಾಟ್ಯ ಕಲಾವಿದರಾದ ಡಾ. ತುಳಸಿ ರಾಮಚಂದ್ರ, ಚಲನಚಿತ್ರ ನಟ ಶಿವರಾಜ್ ಕೆ.ಆರ್. ಪೇಟೆ, ಗೌರವ ಸಮರ್ಪಣೆ : ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ, ಕರ್ನಾಟಕ ಸಂಗೀತ ಗಾಯಕಿ ವಿದುಷಿ ಸಿ.ಎಸ್. ಲಕ್ಷ್ಮೀ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ವಿಶೇಷ ರೂಪಕ ಅಪೂರ್ವ ಸಾಧಕ, ರಚನಕಾರ, ಊತ್ತುಕ್ಕಾಡು ವೆಂಕಟಸುಬ್ಬ ಅಯ್ಯರ್ 'ಗೇಯ–ನೃತ್ಯ–ನಾಟಕ', ವಿಶೇಷ ಆಹ್ವಾನಿತರು : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಗೇಯ ನೃತ್ಯ ನಾಟಕದ ಪರಿಕಲ್ಪನೆ : ವಿದುಷಿ ಡಾ. ಸುಕನ್ಯಾ ಪ್ರಭಾಕರ್, ಸ್ಥಳ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ ಮಾಲಿಕೆಯ 331ನೆಯ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆಕಾಶವಾಣಿಯ ನಿವೃತ್ತ ಹಿರಿಯ ಉದ್ಘೋಷಕರಾದ ಪ್ರಭುಸ್ವಾಮಿ ಚ. ಮಳಿಮಠ ಅವರಿಂದ ವಚನಕಾರರ ದೃಷ್ಟಿಯಲ್ಲಿ ಮಾಯೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ನಿವೃತ್ತ ಆರಕ್ಷಕ ಉಪನಿರೀಕ್ಷಕ ಹೆಚ್.ಪಿ. ದೇವಪ್ಪ, ಸ್ಥಳ: ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದ ಇಡ್ಲಿಕಟ್ಟೆ ಹತ್ತಿರದ 2ನೇ 80 ಅಡಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 29 ಶನಿವಾರ 2025

ಸಂಪುಟ: 46 | ಸಂಚಿಕೆ: 221 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನೀವಿಬ್ಬರೂ ಮಾತಾಡಿ...!

● ಸಿಎಂ, ಡಿಸಿಎಂಗೆ ಕಾಂಗ್ರೆಸ್ ವರಿಷ್ಠರ ಸೂಚನೆ ● ಇಂದು 'ಕಾವೇರಿ'ಯಲ್ಲಿ ಉಪಾಹಾರ ಕೂಟ ಚರ್ಚೆ ● ಸಿಎಂ ಕುರ್ಚಿ ಬಿಕ್ಕಟ್ಟು ಇಲ್ಲಿ ಬಗೆಹರಿಯದಿದ್ದರೆ ದೆಹಲಿ ವರಿಷ್ಠರ ಅಂಗಳಕ್ಕೆ ವಿವಾದ



ಬೆಂಗಳೂರು, ನ.28(ಕೆಎಂಶಿ)– ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಪಟ್ಟಕ್ಕಾಗಿ ನಡೆಯುತ್ತಿರುವ ಮೇಲಾಟಗಳು ಮುಕ್ತಾಯದ ಹಂತ ತಲುಪಿದಂತಿದೆ. ಹೈಕಮಾಂಡ್ ಸೂಚನೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ (ನ.29) ಮುಖಾಮುಖಿ ಮಾತುಕತೆ ನಡೆಸಲಿದ್ದಾರೆ.

ಮುಖ್ಯಮಂತ್ರಿ ಕುರ್ಚಿ ವಿಚಾರವಾಗಿ ಉಂಟಾಗಿರುವ ಬಿಕ್ಕಟ್ಟು ಶಮನಗೊಳಿಸುವ ನಿಟ್ಟಿನಲ್ಲಿ ಹೈಕಮಾಂಡ್, ಉಭಯ ನಾಯಕರಿಗೂ ಪರಸ್ಪರ ಭೇಟಿಯಾಗಿ ಮಾತುಕತೆ ನಡೆಸುವಂತೆ ಸೂಚನೆ ನೀಡಿದೆ. ಅದರಂತೆ ಶನಿವಾರ ಬೆಳಗ್ಗೆ 9.30ಕ್ಕೆ ಕಾವೇರಿ ನಿವಾಸಕ್ಕೆ ಬನ್ನಿ ಎಂದು ಸ್ವತಃ ಸಿದ್ದರಾಮಯ್ಯನವರೇ ಆಹ್ವಾನಿಸಿದ್ದು, ಇದಕ್ಕೆ ಡಿ.ಕೆ.ಶಿವಕುಮಾರ್ ಒಪ್ಪಿದ್ದಾರೆ.

ಅಧಿಕಾರ ಹಸ್ತಾಂತರ ವಿಚಾರವಾಗಿ ಕ್ಷಣ ಕ್ಷಣದ ಬೆಳವಣಿಗೆ ಗಮನಿಸುತ್ತಿದ್ದ ಹೈಕಮಾಂಡ್, ಸೂಕ್ತ ಸಮಯಕ್ಕೆ ಕಾದಿತ್ತು. ಆದರೆ ಕೊಟ್ಟ ಮಾತಿನ ಬಗ್ಗೆ ಸಿಎಂ–ಡಿಸಿಎಂ ಪೋಸ್ಟ್ ಹಂಚಿಕೊಳ್ಳುವ ಮೂಲಕ ನೇರಾನೇರ ಅಖಾಡಕ್ಕಿಳಿಯುವ ಸಂದೇಶ ರವಾನಿಸಿದ್ದರು. ಪರಿಸ್ಥಿತಿಯ ಸೂಕ್ಷ್ಮತೆ ಅರಿತ ಹೈಕಮಾಂಡ್, ಮುಖಾಮುಖಿಯಾಗಿ ಕುಳಿತು ಮುಕ್ತವಾಗಿ ಮಾತುಕತೆ ನಡೆಸುವಂತೆ ಉಭಯ ನಾಯಕರಿಗೂ ಸೂಚನೆ ನೀಡಿದೆ. ಒಂದು ವೇಳೆ ಈ ಪ್ರಯತ್ನ ಫಲಿಸದಿದ್ದರೆ ದೆಹಲಿಯಲ್ಲಿ ಮಾತುಕತೆ ನಡೆಸಲು ನಿರ್ಧರಿಸಿದೆ.

ಈ ವಿಚಾರವಾಗಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ಪಕ್ಷದ ವರಿಷ್ಠರು ನನಗೆ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಕರೆ ಮಾಡಿ ನೀವಿಬ್ಬರೂ ಭೇಟಿ ಮಾಡಿ, ■ 6ನೇ ಪುಟಕ್ಕೆ

ನಾನು ಯಾವುದಕ್ಕೂ ಆತುರ ಪಡಲ್ಲ; ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸುತ್ತದೆ

ಬೆಂಗಳೂರು, ನ.28– ನನಗೇನೂ ಬೇಡ, ಆತುರಪಡಲು ಬಯಸುವುದಿಲ್ಲ ಮತ್ತು ಪಕ್ಷದ ಹೈಕಮಾಂಡ್ ಸಿಎಂ ಹುದ್ದೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುನರುಚ್ಚರಿಸಿದ್ದಾರೆ.

ಅಧಿಕಾರಕ್ಕಾಗಿ ಬಣ ಬಡಿದಾಟಗಳ ನಡುವೆ ಒಕ್ಕಲಿಗ ಸಮುದಾಯದ ನಂಜಾವಧೂತ ಸ್ವಾಮೀಜಿ ಅವರೊಂದಿಗಿನ ಭೇಟಿಯ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ಕಾಂಗ್ರೆಸ್ ನನ್ನ ಸಮುದಾಯವಾಗಿದ್ದು, ರಾಜ್ಯದ ಎಲ್ಲಾ ಸಮುದಾಯಗಳನ್ನು ಸಮಾನವಾಗಿ ನೋಡುವುದಾಗಿ ಹೇಳಿದರು. ನಾನು ಯಾವುದಕ್ಕೂ ಆತುರಪಡುತ್ತಿಲ್ಲ. ನನ್ನ ಪಕ್ಷ ನಿರ್ಧಾರ ತೆಗೆದುಕೊಳ್ಳುತ್ತದೆ. ನಾನು ಯಾವುದೇ ಒಂದು ಸಮುದಾಯಕ್ಕೆ ಸೇರಿಲ್ಲ. ಕಾಂಗ್ರೆಸ್ ನನ್ನ ಸಮುದಾಯ. ಸಮಾಜದ ಎಲ್ಲಾ ವರ್ಗಗಳನ್ನು ನಾನು ಪ್ರೀತಿಸುತ್ತೇನೆ ಎಂದರು.

ಖಂಡಿತವಾಗಿ ದೆಹಲಿಗೆ ಹೋಗ್ತೀನಿ: ಕಾಂಗ್ರೆಸ್‌ಗೆ ದೀರ್ಘ ಇತಿಹಾಸವಿದ್ದು, ದೆಹಲಿ ಯಾವಾಗಲೂ ನಮಗೆ ಮಾರ್ಗದರ್ಶನ ನೀಡುತ್ತದೆ. ಅವರು ನನ್ನನ್ನು, ಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಯನ್ನು ಕರೆದಾಗ ನಾವು ಹೋಗುತ್ತೇವೆ ಎಂದರು.


ಡಿಕೆಶಿ ಭೇಟಿಯಾದ ಶಾಸಕರು: ಈ ಮಧ್ಯೆ ಮಾಲೂರು, ಕೋಲಾರ, ಮುಳಬಾಗಿಲು ಮತ್ತು ಕುಣಿಗಲ್ ಶಾಸಕರು ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದು, ರಾಜ್ಯ ರಾಜಕೀಯದ ಬೆಳವಣಿಗೆಗಳ ಬಗ್ಗೆ ಮಾತುಕತೆ ನಡೆಸಿದ್ದಾರೆ.



ಡಿ.ಕೆ.ಶಿವಕುಮಾರ್ ಸಹ ಅಹಿಂದ ಸಮುದಾಯಕ್ಕೆ ಸೇರಿದವರು. ಅವರು ಸಿದ್ದರಾಮಯ್ಯ ನವರೊಂದಿಗೆ ದುಡಿದು ಸರ್ಕಾರವನ್ನ ಅಸ್ತಿತ್ವಕ್ಕೆ ತಂದಿದ್ದಾರೆ. ಕಾಂಗ್ರೆಸ್‌ಗಾಗಿ ಎಲ್ಲಾ ತ್ಯಾಗ ಮಾಡಿದ್ದಾರೆ. ಅವರಿಗೂ ಒಂದು ಅವಕಾಶ ಮಾಡಿಕೊಡಬೇಕು.

– ನಂಜಾವಧೂತ ಸ್ವಾಮೀಜಿ

ಜೋಳದ ಹೊಲದಲ್ಲಿ ಅಡಗಿದ್ದ ಹುಲಿ ಸೆರೆ



ಹುಣಸೂರು ತಾಲೂಕಿನ ಗೌಡನಕಟ್ಟೆ ಗ್ರಾಮದ ಮೆಕ್ಕೆ ಜೋಳದ ಹೊಲದಲ್ಲಿ ಮರಿಗಳೊಂದಿಗೆ ಬೀಡು ಬಿಟ್ಟಿದ್ದ ತಾಯಿ ಹುಲಿಯನ್ನು ಸೆರೆ ಹಿಡಿಯಲಾಗಿದೆ.

ಹನಗೋಡು, ನ.28(ಎಂಟಿವೈ, ಹೆಚ್‌ಎನ್, ಕೆಕೆ)– ಮೆಕ್ಕೆಜೋಳದ ಹೊಲದಲ್ಲಿ ನಾಲ್ಕು ಮರಿಗಳೊಂದಿಗೆ ಬೀಡು ಬಿಟ್ಟು ರೈತರ ಮೇಲೆ ದಾಳಿಗೆ ಯತ್ನಿಸಿದ್ದ ಹೆಣ್ಣು ಹುಲಿಯನ್ನು ಅರಣ್ಯ ಇಲಾಖೆ ಮಧ್ಯರಾತ್ರಿ ಸುರಕ್ಷಿತವಾಗಿ ಸೆರೆ ಹಿಡಿದಿದ್ದು, ಹೊಲದಲ್ಲಿ ಅಡಗಿರುವ ಇದರ ಮರಿಗಳ ರಕ್ಷಣೆಗೆ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗಿದೆ.

ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಗೌಡನಕಟ್ಟೆ ಗ್ರಾಮದ ಮೆಕ್ಕೆ ಜೋಳದ ಹೊಲದಲ್ಲಿ ಮರಿಗಳೊಂದಿಗೆ ಬೀಡು ಬಿಟ್ಟಿದ್ದ 11ರಿಂದ 12 ವರ್ಷದ ತಾಯಿ ಹುಲಿಯನ್ನು ನಿರಂತರ ಕಾರ್ಯಾಚರಣೆ ಮೂಲಕ ಮಧ್ಯರಾತ್ರಿ ವೇಳೆಗೆ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಸೆರೆ ಸಿಕ್ಕಿರುವ ಹುಲಿಯನ್ನು ಮೈಸೂರಿನ ಕೂರ್ಗಳ್ಳಿಯ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದ್ದು, ಅಕ್ಕಪಕ್ಕದ ಹೊಲಗಳ ಪೊದೆಗಳಲ್ಲಿ ಅಡಗಿರುವ 3–4 ತಿಂಗಳ ನಾಲ್ಕು ಮರಿಗಳ ರಕ್ಷಣೆ ಪ್ರಯತ್ನ ಮುಂದುವರೆದಿದೆ.

ದಾಳಿಗೆ ಯತ್ನ: ಗೌಡನಕಟ್ಟೆ ಗ್ರಾಮದ ಮೆಕ್ಕೆಜೋಳದ ಹೊಲದಲ್ಲಿ ಮರಿಗಳೊಂದಿಗೆ ಅಡಗಿದ್ದ ತಾಯಿ ಹುಲಿ, ಗೊಬ್ಬರ ಹಾಕಲು ಬಂದ ಇಬ್ಬರು ರೈತರ ಮೇಲೆ ದಾಳಿಗೆ ಯತ್ನಿಸಿತ್ತು ವಿಷಯ ತಿಳಿದು ಸ್ಥಳಕ್ಕೆ ಬಂದ ಹುಣಸೂರು ವಿಭಾಗದ ಅರಣ್ಯ ಸಿಬ್ಬಂದಿ ಪರಿಶೀಲನೆ ವೇಳೆಯೂ ಹುಲಿ ಘರ್ಜಿಸಿತು. ಈ ವೇಳೆ ಹುಲಿಯೊಂದಿಗೆ ಮರಿಗಳಿರುವ ಶಂಕೆ ವ್ಯಕ್ತವಾಗಿತ್ತು. ಡ್ರೋನ್ ಮೂಲಕ ಪರಿಶೀಲಿಸಿದಾಗ 3–4 ತಿಂಗಳ ನಾಲ್ಕು ಮರಿಗಳಿರುವುದು ಖಚಿತವಾಗಿತ್ತು. ಈ ಮಧ್ಯೆ ಹುಲಿ ಸೆರೆ ಹಿಡಿಯುವಂತೆ ಸ್ಥಳೀಯರು ಅರಣ್ಯಾಧಿಕಾರಿಗಳನ್ನು ■ 6ನೇ ಪುಟಕ್ಕೆ

ಹುಣಸೂರು ವಿಭಾಗದ ಹುಲಿ...

ಸೆರೆ ಸಿಕ್ಕಿರುವ ಹುಲಿ ವಲಸೆ ಬಂದಿದ್ದಲ್ಲ. ಈ ಹಿಂದೆ ನಡೆದ ಹುಲಿ ಗಣತಿ ವೇಳೆ ಹುಣಸೂರು ವಲಯದಲ್ಲಿ ಅಳವಡಿಸಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಈ ಹುಲಿ ಚಲನ–ವಲನ ಸೆರೆ ಸಿಕ್ಕಿದೆ. ಹುಣಸೂರು ತಾಲೂಕಿನ ವಾರಂಚಿ, ಹಳೆ ವಾರಂಚಿ, ಹೊಸ ವಾರಂಚಿ, ಕಾಳೇನಹಳ್ಳಿ, ಗೌಡನ ಕಟ್ಟೆ ಸೇರಿದಂತೆ ಇನ್ನಿತರ ಗ್ರಾಮಗಳ ಪಾಳು ಭೂಮಿ, ಹಳ್ಳ–ಕೊಳ್ಳದಲ್ಲಿ ಓಡಾಡುತ್ತಿತ್ತು ಎನ್ನಲಾಗಿದೆ.

ಉಡುಪಿಯಲ್ಲಿ ಲಕ್ಷ ಕಂಠ ಗೀತಾ ಪಾರಾಯಣದಲ್ಲಿ ಪ್ರಧಾನಿ ಭಾಗಿ

ಗೀತೆಯ 15ನೇ ಅಧ್ಯಾಯ ಪಠಿಸಿದ ಮೋದಿ; ಸ್ವರ್ಣಲೇಪಿತ ಕನಕನ ಕಿಂಡಿ ಅನಾವರಣ



ಸ್ವರ್ಣಲೇಪಿತ ಕನಕನ ಕಿಂಡಿಯನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು.



ಗೋವಾದಲ್ಲಿ ವಿಶ್ವದ ಅತೀ ಎತ್ತರದ ಶ್ರೀರಾಮನ 77 ಅಡಿಯ ಕಂಚಿನ ಪ್ರತಿಮೆಯನ್ನು ಶುಕ್ರವಾರ ಪ್ರಧಾನಿ ಮೋದಿ ಉದ್ಘಾಟಿಸಿದರು.

ಉಡುಪಿ, ನ.28– ಕೃಷ್ಣನೂರು ಉಡುಪಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭೇಟಿ ನೀಡಿದ್ದು, ಇಲ್ಲಿನ ಶ್ರೀಕೃಷ್ಣಮಠದ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹಮ್ಮಿಕೊಂಡಿರುವ ಲಕ್ಷಕಂಠ ಗೀತಾ ಪಠಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಗವದ್ಗೀತೆಯ 15ನೇ ಅಧ್ಯಾಯವನ್ನು ಪಠಿಸಿದ್ದಾರೆ.

ಕೃಷ್ಣಮಠಕ್ಕೆ ಭೇಟಿ ನೀಡಿದ ನಂತರ ಸಭಾಂಗಣಕ್ಕೆ ಆಗಮಿಸಿದ ಮೋದಿಯವರಿಗೆ ಜಗದ್ಗುರು ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು ಸನ್ಮಾನಿಸಿದರು. ನಂತರ ಲಕ್ಷ ಕಂಠ ಗೀತಾ ಕಾರ್ಯಕ್ರಮದಲ್ಲಿ ಭಾಗಿಯಾದ ಮೋದಿಯವರು, ಭಗವದ್ಗೀತೆಯ 15ನೇ ಅಧ್ಯಾಯವನ್ನು ಪಠಿಸಿ ದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸಚಿವ ಬೈರತಿ ಸುರೇಶ್, ಉಡುಪಿ–ಚಿಕ್ಕಮಗ ಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಿವಮೊಗ್ಗ ಸಂಸದ ರಾಘವೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇತರರು ವೇದಿಕೆಯಲ್ಲಿದ್ದಾರೆ.

ಉಡುಪಿ–ಬನ್ನಂಜೆಯ ಡಾ.ವಿ.ಎಸ್. ಆಚಾರ್ಯ ಬಸ್ ನಿಲ್ದಾಣದ ಬಳಿ ಶ್ರೀ ನಾರಾಯಣ ಗುರು ಸರ್ಕಲ್‌ನಿಂದ ರೋಡ್ ಶೋ ನಡೆಸಿದ ಪ್ರಧಾನಿ ಮೋದಿ ಅವರಿಗೆ ಪುಷ್ಪವೃಷ್ಟಿ ಸ್ವಾಗತ ಕೋರಲಾಯಿತು. ರಸ್ತೆ ಬದಿ ಕಾದು ನಿಂತು ಪ್ರಧಾನಿ ಅವರನ್ನು ಸಾರ್ವಜನಿಕರು ಸ್ವಾಗತಿಸಿದರು. ರೋಡ್ ಶೋ ಮೂಲಕ ಶ್ರೀ ಕೃಷ್ಣ ಮಠಕ್ಕೆ ಪ್ರಧಾನಿ ಆಗಮಿಸಿದರು.

ಬಳಿಕ ಸ್ವರ್ಣಲೇಪಿತ ಕನಕನ ಕಿಂಡಿಯನ್ನು ಪ್ರಧಾನಿ ಮೋದಿಯವರು ಅನಾವರಣಗೊಳಿಸಿದರು. ಬಳಿಕ ಕನಕನ ಕಿಂಡಿಯಿಂದ ಉಡುಪಿ ಕೃಷ್ಣನನ್ನು ಕಣ್ತುಂಬಿಕೊಂಡರು. ನಂತರ ಕೃಷ್ಣ ಮಠದ ಎದುರಲ್ಲಿರುವ ಮಧ್ವ ಸರೋವರಕ್ಕೆ ಭೇಟಿ ನೀಡಿ, ತೀರ್ಥ ಸಂಪ್ರೋಕ್ಷಣೆ ಮಾಡಿದರು. ಅಲ್ಲಿಂದ ಜನರತ್ತ ಕೈ ಬೀಸುತ್ತ ಶ್ರೀ ಕೃಷ್ಣ ಮಠ ಪ್ರವೇಶ ಮಾಡಿದರು. ■ 6ನೇ ಪುಟಕ್ಕೆ


ನವಭಾರತ ತನ್ನ ಜನರನ್ನು ರಕ್ಷಿಸಲು ಬದ್ಧವಾಗಿದೆ

ಉಡುಪಿ, ನ.28– ಭಯೋತ್ಪಾದಕ ದಾಳಿಯ ನಂತರ ಹಿಂದಿನ ಸರ್ಕಾರಗಳು ತಕ್ಕ ಪ್ರತಿಕ್ರಿಯೆ ನೀಡಲು ಹಿಂಜರಿಯುತ್ತಿದ್ದವು. ಆದರೆ ನವ ಭಾರತ ತನ್ನ ಜನರನ್ನು ರಕ್ಷಿಸಲು ಬದ್ಧವಾಗಿದ್ದು, ಯಾರ ಮುಂದೆಯೂ ತಲೆಬಾಗುವುದಿಲ್ಲ ಅಥವಾ ಹಿಂಜರಿಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಇಂದು ಉಡುಪಿಯಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, 'ಹಿಂದಿನ ಸರ್ಕಾರಗಳು ಭಯೋತ್ಪಾದಕ ದಾಳಿಯ ನಂತರ ಸುಮ್ಮನೆ ಕುಳಿತು ಕೊಳ್ಳುತ್ತಿದ್ದವು. ಆದರೆ ನವ ಭಾರತ ತನ್ನ ಜನರನ್ನು ರಕ್ಷಿಸಲು ಬದ್ಧವಾಗಿದೆ ಮತ್ತು ಯಾರ ಮುಂದೆಯೂ ತಲೆಬಾಗುವುದಿಲ್ಲ ಅಥವಾ ಹಿಂಜರಿಯುವುದಿಲ್ಲ' ಎಂದರು.

ಒಂದು ಲಕ್ಷ ಜನ ಶ್ರೀಮದ್ ಭಗವದ್ಗೀತೆಯನ್ನು ಪಠಿಸಿದ 'ಲಕ್ಷ ಕಂಠ ಗೀತಾ ಪಾರಾಯಣ'ದಲ್ಲಿ ಭಾಗವಹಿಸಲು ಪ್ರಧಾನಿ

ಉಡುಪಿಯಲ್ಲಿ ಪ್ರಧಾನಿ ಮೋದಿ ಗುಡುಗು



ಮೋದಿ ಉಡುಪಿಗೆ ಆಗಮಿಸಿದ್ದರು. ಉಡುಪಿಯ ಶ್ರೀ ಕೃಷ್ಣ ಮಠವು ಈ ಕಾರ್ಯಕ್ರಮ ವನ್ನು ಆಯೋಜಿಸಿತ್ತು. 'ನಮಗೆ ಶಾಂತಿ ಸ್ಥಾಪನೆಯೂ ಗೊತ್ತು, ರಕ್ಷಣೆಯೂ ಗೊತ್ತು. ಸತ್ಯಕ್ಕಾಗಿ ಶ್ರಮಿಸಲು ಹಾಗೂ ದೌರ್ಜನ್ಯ ಎಸಗುವವರನ್ನು ಹತ್ತಿಕ್ಕುವ ಅಗತ್ಯವನ್ನು ಗೀತೆ ನಮಗೆ ಕಲಿಸುತ್ತದೆ. ನಾವು ವಸುಧೈವ ಕುಟುಂಬಕಂನಲ್ಲಿ ನಂಬಿಕೆ ಇಟ್ಟಿದ್ದೇವೆ ಮತ್ತು 'ಧರ್ಮೋ ರಕ್ಷತಿ ರಕ್ಷಿತಃ' (ಧರ್ಮವನ್ನು ರಕ್ಷಿಸುವವರನ್ನು ಧರ್ಮ ರಕ್ಷಿಸುತ್ತದೆ) ಎಂದು ಪಠಿಸುತ್ತೇವೆ ಎಂದರು.

ಈ ವರ್ಷ ಏಪ್ರಿಲ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ನೆನಪಿಸಿಕೊಂಡ ಪ್ರಧಾನಿ ಮೋದಿ, ಮೃತರಲ್ಲಿ ಕರ್ನಾಟಕದ ಜನರು ಸಹ ಸೇರಿದ್ದಾರೆ ಎಂದು ಹೇಳಿದರು.

ಪಹಲ್ಗಾಮ್ ದಾಳಿಯ ನಂತರ ಪಾಕಿಸ್ತಾನದ ಭಯೋತ್ಪಾದಕ ನೆಲೆಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿದ ಭಾರತದ ಮಿಲಿಟರಿ ಕಾರ್ಯಾಚರಣೆ ಆಪರೇಷನ್ ಸಿಂಧೂರ್ ಸಮಯದಲ್ಲಿ ನಮ್ಮ ಸರ್ಕಾರದ ದೃಢಸಂಕಲ್ಪವನ್ನು ■ 6ನೇ ಪುಟಕ್ಕೆ

ಐಸಿಡಿಎಸ್ ಮಹತ್ವ ಮನವರಿಕೆ ಮಾಡಿಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ

ರಾಜ್ಯದಲ್ಲಿನ 69,922 ಅಂಗನವಾಡಿ ಕೇಂದ್ರಗಳಿಂದ 40 ಲಕ್ಷಕ್ಕೂ ಅಧಿಕ ಮಹಿಳೆಯರು, ಮಕ್ಕಳಿಗೆ ಅನುಕೂಲ

ಬೆಂಗಳೂರು, ನ.28(ಕೆಎಂಶಿ)– ಐಸಿಡಿಎಸ್–ತಾಯಿ–ಶಿಶು ಮರಣ ಹಾಗೂ ಅಪೌಷ್ಟಿಕತೆ ನಿವಾರಿಸುವ ದೂರದೃಷ್ಟಿಯ ಯೋಜನೆಯಾಗಿದ್ದು, 69,922 ಅಂಗನವಾಡಿ ಕೇಂದ್ರಗಳಿಂದ 40 ಲಕ್ಷಕ್ಕೂ ಹೆಚ್ಚು ಮಹಿಳೆಯರು ಮತ್ತು ಮಕ್ಕಳಿಗೆ ಅನುಕೂಲವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಮಹತ್ವಾಕಾಂಕ್ಷಿ ಯೋಜನೆಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಕ್ಟೋಬರ್ 2, 2025ಕ್ಕೆ ಐಸಿಡಿಎಸ್ ಕಾರ್ಯಕ್ರಮಕ್ಕೆ 50 ವರ್ಷ ತುಂಬಿರುವುದು ಮೈಲುಗಲ್ಲು ಸಾಧನೆಯಾಗಿದೆ. ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಹಮ್ಮಿಕೊಂಡಿದ್ದ ದೂರದೃಷ್ಟಿ ಯೋಜನೆಯೇ ಐಸಿಡಿಎಸ್, ಎಪ್ಪತ್ತರ ದಶಕದಲ್ಲಿ ಮಹಿಳೆ ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ, ಶಿಶು ಮತ್ತು ತಾಯಿ ಮರಣ ಹೆಚ್ಚಿದ ಸಂದರ್ಭದಲ್ಲಿ ಕಾರ್ಯಕ್ರಮ ಜಾರಿಯಾಗಿತ್ತು ಎಂದರು.

ರಾಜ್ಯದಲ್ಲಿ 69,922 ಅಂಗನವಾಡಿ ಕೇಂದ್ರಗಳಿದ್ದು, ಸುಮಾರು 40 ಲಕ್ಷಕ್ಕೂ ಹೆಚ್ಚು ಮಹಿಳೆಯರು ಮತ್ತು ಮಕ್ಕಳು ಈ ಕೇಂದ್ರಗಳ ಲಾಭ ಪಡೆಯುತ್ತಿದ್ದಾರೆ. ಟಿ.ನರಸೀಪುರ ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಮೊದಲು ಪ್ರಾರಂಭಗೊಂಡ ಅಂಗನವಾಡಿ ಕೇಂದ್ರ, 33 ತಾಲೂಕುಗಳಲ್ಲಿ ಕಾರ್ಯನಿರ್ವಹಿಸಿ, ಪ್ರಸ್ತುತ ರಾಜ್ಯಾದ್ಯಂತ 69,922 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಯಕರ್ತೆಯರು ಹಾಗೂ ಸಹಾಯಕರು ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದ್ದು, ಮಕ್ಕಳ ಆರೈಕೆಯಲ್ಲಿ ನಿರತವಾಗಿರುವ ಎರಡನೇ ತಾಯಿಯಂತೆ ಎಂದರು.



ಬೆಂಗಳೂರಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾಧಕ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಕ್ಕಳು ದೇಶದ ಭವಿಷ್ಯ, ಐಸಿಡಿಎಸ್ ಕಾರ್ಯಕ್ರಮದಿಂದ ಶಿಶು ಹಾಗೂ ತಾಯಿ ಮರಣ ಗಣನೀಯವಾಗಿ ಕಡಿಮೆಯಾಗಿದೆ. ವಿವಿಧೋದ್ದೇಶ ಸಹಕಾರ ಸಂಘ ಪ್ರಾರಂಭಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಸಹಾಯ ಮಾಡಲಿ ಎಂದು ಹಾರೈಸಿದರು.

ಮಹಿಳೆಯರು ಆರ್ಥಿಕ ಹಾಗೂ ಸಾಮಾಜಿಕವಾಗಿ ಸ್ವಾವಲಂಬಿಗಳಾಗದಿದ್ದರೆ, ಸಮಾಜ ಮುಂದುವರೆಯುವುದು ಕಷ್ಟ, ಸಮಾಜದಲ್ಲಿ ಅಸಮಾನತೆ ಇದ್ದು, ಮಹಿಳೆಯರೂ ಕೂಡ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಸುಶಿಕ್ಷಿತರಾಗುತ್ತಿರುವುದು ಸಂತಸದ ಸಂಗತಿ. ಮಹಿಳೆಯರಲ್ಲಿ ಶೇ.100 ಸಾಕ್ಷರತೆ ಬರಬೇಕಲ್ಲದೆ ವೈಚಾರಿಕ ಹಾಗೂ ವೈಜ್ಞಾನಿಕ ಜ್ಞಾನ ಬರಬೇಕಿದೆ.

ಮಹಿಳೆಗೆ ಬಸ್ ಪ್ರಯಾಣ ಉಚಿತ: ಹೆಣ್ಣೊಬ್ಬಳು ವಿದ್ಯಾವಂತೆಯಾದರೆ ಇಡೀ ಕುಟುಂಬ ಶಿಕ್ಷಣ ಪಡೆಯುತ್ತದೆ. ನಮ್ಮ ಸರ್ಕಾರ ಶಕ್ತಿ ಯೋಜನೆಯಡಿ 600 ಕೋಟಿಗೂ ಹೆಚ್ಚು ಮಹಿಳೆಯರು ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಡಿ 1 ಕೋಟಿ 26 ಲಕ್ಷ ಕುಟುಂಬಗಳ ಯಜಮಾನಿಯರಿಗೆ 2000 ರೂ.ಗಳನ್ನು ಒದಗಿಸಲಾಗಿದೆ. ಹೆಣ್ಣುಮಕ್ಕಳು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಸಬಲರಾಗಬೇಕು. ಮಹಿಳೆಯರು ಮುಖ್ಯವಾಹಿನಿಗೆ ಬಂದು, ಸಮಾನ ಅವಕಾಶಗಳನ್ನು ಪಡೆಯಬೇಕೆನ್ನುವ ಉದ್ದೇಶದಿಂದ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ.

ಇಲ್ಲಿಯವರೆಗೆ ಗ್ಯಾರಂಟಿಗಳಿಗೆ ಸರ್ಕಾರ ಒಂದು ಲಕ್ಷ ನಾಲ್ಕು ಸಾವಿರ ಕೋಟಿ ರೂ. ಗಳಿಗೂ ಹೆಚ್ಚು ವೆಚ್ಚ ಮಾಡಿದೆ. ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದವರ ಕಣ್ಣು ತೆರೆಯಬೇಕು. ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಇದನ್ನು ವಿರೋಧಿಸಿದ್ದರು. ಗ್ಯಾರಂಟಿ ಯೋಜನೆಗಳನ್ನು ಜಾರಿ ಜೊತೆ ಅಭಿವೃದ್ಧಿ ಯೋಜನೆಗೂ ವೆಚ್ಚ ಮಾಡಲಾಗುತ್ತಿದೆ. ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಒಬ್ಬ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ತನ್ನ ಸಹ ವಿದ್ಯಾರ್ಥಿನಿಯೊಬ್ಬಳನ್ನು ತಬ್ಬಿಕೊಂಡ.

ಹುಡುಗಿ : ಏನಿದು?

ಹುಡುಗ : ಡೈರೆಕ್ಟ್ ಮಾರ್ಕೆಟಿಂಗ್!

(ಹುಡುಗಿ ಪಟೀರೆಂದು ಆತನ ಕೆನ್ನೆಗೆ ಭಾರಿಸಿದಳು)

ಹುಡುಗ : ಏನಿದು?

ಹುಡುಗಿ : ಕಸ್ಟಮರ್ ಫೀಡ್‌ಬ್ಯಾಕ್!

ಮೈಸೂರು ಮಿತ್ರ

ಶನಿವಾರ, 29 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮನುಷ್ಯ ಮನೆ ಮನೆಯಲ್ಲೂ ಜನಿಸುತ್ತಾನೆ. ಆದರೆ ಮನುಷ್ಯತ್ವ ಎಂಬುದು ಕೆಲವರಲ್ಲಿ ಮಾತ್ರ ಜನಿಸಲು ಸಾಧ್ಯ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಗಿನ ಅರಮನೆಗಿಂತ ಗುಡಿಸಲೇ ಮೇಲು

ನಿಮ್ಮ ಪತ್ರಗಳು

ಅಂಚೆ ಕಚೇರಿಯಲ್ಲಿ ಹಣ ದುರುಪಯೋಗ, ತನಿಖೆ ಅಗತ್ಯ

ಮಾನ್ಯರೆ,

ಮೈಸೂರು ಜಿಲ್ಲೆಯ ಸರಗೂರು ಪಟ್ಟಣದ ಅಂಚೆ ಕಚೇರಿಯಲ್ಲಿ ಸಾವಿರಾರು ಗ್ರಾಹಕರು ಠೇವಣಿ ಇಟ್ಟಿದ್ದ ಕೋಟ್ಯಾಂತರ ರೂಪಾಯಿ ಅಂಚೆ ಕಚೇರಿಯ ನೌಕರರಿಂದಲೇ ದುರುಪಯೋಗ ಆಗಿರುವ ಪ್ರಕರಣವನ್ನು ಈಗ ಉನ್ನತ ಮಟ್ಟದ ತನಿಖೆಗಾಗಿ ಸಿಬಿಐಗೆ ವಹಿಸಲಾಗಿದೆ. ತನಿಖೆಯಿಂದ ಆರೋಪಿಗಳಿಗೆ ಶಿಕ್ಷೆಯು ಆಗಬಹುದು ಅವರ ಕೆಲಸವೂ ಹೋಗಬಹುದು. ಆದರೆ ಲಕ್ಷಾಂತರ ರೂಪಾಯಿಗಳನ್ನು ಠೇವಣಿ ಇಟ್ಟ ಹಣ ಗ್ರಾಹಕರ ಹಣ ಅವರಿಗೆ ತಲುಪುತ್ತದೆಯೇ? ಗ್ರಾಹಕರ ಪಾಡೇನು? ಇಷ್ಟೊಂದು ದೊಡ್ಡ ಮೊತ್ತದ ಹಣ ಕೇವಲ ಇಬ್ಬರು ಸಿಬ್ಬಂದಿ ವರ್ಗದವರಿಂದ ದುರುಪಯೋಗ ಆಗಲು ಸಾಧ್ಯವಿಲ್ಲ. ಇದರಲ್ಲಿ ಮೇಲಾಧಿಕಾರಿಗಳು ಶಾಮೀಲಾಗಿರುವ ಸಾಧ್ಯತೆಯು ಇದೆ. ಇವೆಲ್ಲವೂ ಸಿಬಿಐನಿಂದ ಸಮಗ್ರ ತನಿಖೆ ಆಗಬೇಕು.

ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಅಂಚೆ ಇಲಾಖೆಯ ಮೇಲೆ ಸಾರ್ವಜನಿಕರು ಅತ್ಯಂತ ನಂಬಿಕೆ ಮತ್ತು ಭರವಸೆ ಹೊಂದಿದ್ದಾರೆ. ಕಡು ಬಡವರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ತಾವು ಕಷ್ಟಪಟ್ಟು, ದುಡಿದ ಹಣವನ್ನು ಅಂಚೆ ಕಚೇರಿಯಲ್ಲಿ ತಮ್ಮ ಕಷ್ಟ-ಸುಖದ ವೆಚ್ಚಕ್ಕಾಗಿ, ಬದುಕಿನ ಮುಂದಿನ ಭವಿಷ್ಯಕ್ಕಾಗಿ ಇಟ್ಟಿರುತ್ತಾರೆ. ಆದರೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಅಂಚೆ ಕಚೇರಿಯಲ್ಲೇ ಹಣ ದುರುಪಯೋಗವಾದರೇ ಸಾರ್ವಜನಿಕರು ಅಂಚೆ ಕಚೇರಿಗಳನ್ನು ನಂಬುವುದಾರೂ ಹೇಗೆ? ಅಂಚೆ ಕಚೇರಿಗಳಲ್ಲಿ ಹಣ ದುರುಪಯೋಗಕ್ಕೆ ಪ್ರಮುಖ ಕಾರಣವೆಂದರೆ, ಗ್ರಾಹಕರು ಠೇವಣಿ ಯೋಜನೆಗಳಲ್ಲಿ ಇಡುವ ಹಣಕ್ಕೆ, ಅಲ್ಲಿನ ಸಿಬ್ಬಂದಿ ಕೈ ಬರಹದಲ್ಲಿ ಬರೆದು ಸರ್ಟಿಫಿಕೇಟ್ ನೀಡುತ್ತಾರೆ. ಇದು ಹಣ ದುರುಪಯೋಗದ ಒಂದು ಭಾಗ. ಗ್ರಾಮೀಣ ಪ್ರದೇಶದಲ್ಲಿ ಅಂಚೆ ಕಚೇರಿಗಳು ಕಂಪ್ಯೂಟರಿಕರಣವಾಗದೇ ಇನ್ನೂ ಹಳೆಯ ಓಬಿರಾಯನ ಕಾಲದಲ್ಲಿಯೇ ಕೆಲಸ ನಿರ್ವಹಿಸುತ್ತಿವೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ಅಂಚೆ ಕಚೇರಿಗಳಲ್ಲಿ ಹಣ ದುರುಪಯೋಗದ ಬಗ್ಗೆ ಆಗಾಗ್ಗೆ ಕೇಳಿ ಬರುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದರೆ ಅಂಚೆ ಕಚೇರಿಗಳನ್ನು ಸಾರ್ವಜನಿಕರೇ ಮುಚ್ಚುತ್ತಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು,

ಅರ್ಹರನ್ನು ನೇಮಕಾತಿಯಿಂದ ಹೊರಗಿಡುವ ವ್ಯವಸ್ಥಿತ ಪಿತೂರಿ

ಮಾನ್ಯರೆ,

ಇದೀಗ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕಾತಿ ನಡೆಯುತ್ತಿರುವುದು ಸರಿಯಷ್ಟೆ, ಸದರಿ ನೇಮಕಾತಿ ಪ್ರಕ್ರಿಯೆಯು ನಿಜವಾದ ಅರ್ಹರನ್ನೂ, ಹಿರಿಯರನ್ನೂ ನೇಮಕಾತಿಯಿಂದಲೇ ಹೊರಗಿಡುವ ವ್ಯವಸ್ಥಿತ ಪಿತೂರಿಯಂತಿದೆಯೆಂದರೆ ತಪ್ಪಾಗಲಾರದು! ಮಾನ್ಯ ಘನ ನ್ಯಾಯಾಲಯ ನೀಡಿರುವ ತೀರ್ಪಿನಂತೆ ನೇಮಕಾತಿ ನಡೆಯುತ್ತಿರುವುದು ಸರಿ. ಆದರೆ ದಿಢೀರ್ ಎಂದು ಕಾಲೇಜು ಶಿಕ್ಷಣ ಇಲಾಖೆಯ ಕಮೀಷನರ್ ಒಂದು ಆದೇಶ ಹೊರಡಿಸಿ, ಅಂಗವಿಕಲ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ನೀಡಿ ನೇಮಕಾತಿ ನಡೆಸುವಂತೆ ಸೂಚಿಸಿರುವುದು ಮೂವತ್ತು ವರ್ಷಗಳ ಹಿಂದೆಯೇ ಯುಜಿಸಿ ನಿಯಮಗಳ ಪ್ರಕಾರ ಅರ್ಹತೆ ಪಡೆದಿರುವ ನನ್ನಂತಹ ಕೆಲವೇ ಕೆಲವು ಅಭ್ಯರ್ಥಿಗಳು ನಿನ್ನೆ ಮೊನ್ನೆ ಶಿಕ್ಷಣ ಮುಗಿಸಿರುವ ಅಭ್ಯರ್ಥಿಗಳೊಂದಿಗೆ ಕೇವಲ' ಅತಿಥಿ ಉಪನ್ಯಾಸಕರ ಹುದ್ದೆಗಳಿಗಾಗಿ ಪೈಪೋಟಿ ನಡೆಸಬೇಕಿರುವುದು ಉನ್ನತ ಶಿಕ್ಷಣ ವ್ಯವಸ್ಥೆಯು ಕೊಳೆತು ನಾರುತ್ತಿರುವುದರ ಸಂಕೇತದಂತಿದೆ. ಹಾಗಾದರೆ ಶೈಕ್ಷಣಿಕ ಅರ್ಹತೆಗಿಂತ ಅಂಗವಿಕಲತೆ ಅರ್ಹತೆಯೇ? ಭೋದನಾನುಭವಕ್ಕೆ ಯಾವುದೇ ಮಾನ್ಯತೆ ಇಲ್ಲವೇ? ಈ ರೀತಿಯ ನೇಮಕಾತಿಯನ್ನು ನ್ಯಾಯವಾದ ನೇಮಕಾತಿ ಎನ್ನಬಹುದೇ?

ಇನ್ನೊಂದು ಮಾತು. ಹಿಂದೆ 2008ರಲ್ಲಿ ಪದವಿ ಕಾಲೇಜುಗಳಿಗೆ ನಡೆದ ನೇಮಕಾತಿಯ ಸಂದರ್ಭದಲ್ಲಿ ಸಾವಿರಾರು ಜನ ರಾತ್ರೋರಾತ್ರಿ ಎಂಫಿಲ್ ಪದವಿ ಪಡೆದು ನೇಮಕಾತಿ ಹೊಂದಿ ಈಗ ಅವರೆಲ್ಲ ಅಸೋಸಿಯೇಟ್ ಪ್ರೊಫೆಸರ್ ಮತ್ತು ಪ್ರೊಫೆಸರ್‌ಗಳಾಗಿದ್ದಾರೆ. ಅದೇ ರೀತಿ ಪಿಹೆಚ್‌ಡಿ ಪಡೆದವರೂ ಆಗಿದ್ದಾರೆ. ನಿಜವಾದ ಅರ್ಹತೆ ಇದ್ದ ಸಾಕಷ್ಟು ಮಂದಿ ಈಗ ಬೀದಿ ಸುತ್ತುತ್ತಿದ್ದಾರೆ. ಕೆಲವರು ಸತ್ತು ಹೋಗಿದ್ದಾರೆ. ಅದೇ ರೀತಿ ಮುಂದೆ ಅಂಗವಿಕಲ ಅಭ್ಯರ್ಥಿಗಳೂ ಹೆಚ್ಚಾಗಬಹುದು. ಏಕೆಂದರೆ ಅವರಿಗೇ ತಾನೇ ನೇಮಕಾತಿಯಲ್ಲಿ ಪ್ರಾಶಸ್ತ್ಯ.

–ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಹೆಚ್ ಡಿ ಕೋಟೆ ತಾ.

ವಿರೋಧದ ನಡುವೆಯೂ ಅವೈಜ್ಞಾನಿಕ ಕಾಮಗಾರಿ




ಮಾನ್ಯರೆ,

ಚಾಮರಾಜ ವಿಧಾನ ಸಭಾ ಕ್ಷೇತ್ರದ 21ನೇ ವಾರ್ಡಿನಲ್ಲಿ 5–10–12ನೇ ಕ್ರಾಸ್ ಎಂದು ತೋರಿಸಿರುವ ಕಾಮಗಾರಿಗೆ ಟೆಂಡರ್ ಅನುಮತಿಗೆ ಆಗಬೇಕಿದ್ದ ಕಾಮಗಾರಿ ಬಿಟ್ಟು ಮತ್ತೊಂದು ಕಡೆ ವಾರ್ಡ್–21 ರಲ್ಲಿ 1ನೇ ಕ್ರಾಸ್‌ನಲ್ಲಿ ಯು.ಜಿ.ಡಿ ಕಾಮಗಾರಿ ಕೆಲಸ ಮಾಡುತ್ತಿರುವುದನ್ನು ಸ್ಥಳೀಯರ ವಿರೋಧದ ನಡುವೆಯೂ ಕಾಮಗಾರಿ ಮುಂದುವರೆಸಿ ಸಾರ್ವಜನಿಕರ ಹಣವನ್ನು ಪೋಲು ಮಾಡುತ್ತಿದ್ದಾರೆ.

ಅದೂ ಸಹ ಟೆಂಡರ್ ಆಗಿರುವ ಅನುಮತಿ ಪತ್ರ ತೋರಿಸುತ್ತಿರುವ ರಸ್ತೆ ಅಗೆಯುವುದನ್ನು ಬಿಟ್ಟು ಮತ್ತೊಂದು ರಸ್ತೆಯನ್ನು ಅಗೆದು ಅದೂ ರಸ್ತೆ ಮಧ್ಯೆಯೇ ಪೈಪ್‌ಲೈನ್ ಹಾಕುತ್ತಾ ಮ್ಯಾನ್‌ಹೋಲ್ ಅನ್ನು ರಸ್ತೆ ಮಧ್ಯದಲ್ಲಿ ಹಾಕುತ್ತಿರುವುದು ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ ನಡೆಯುತ್ತಿದೆ. ಇದನ್ನು ಯಾರೂ ಕೇಳುವ ಸ್ಥಿತಿಯಲ್ಲಿ ಇಲ್ಲವಾಗಿದೆ. ಇದರತ್ತ ಮಹಾನಗರಪಾಲಿಕೆ ಆಯುಕ್ತರು ಅಥವಾ ಜಿಲ್ಲಾಧಿಕಾರಿಗಳು ಗಮನ ಹರಿಸಬೇಕಿದೆ.

–ರಮೇಶ್ ಚಂದ್ರ, ಗಂಗೋತ್ರಿ ಬಡಾವಣೆ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನೀವು ಬದುಕಿ ಇತರರು ಬದುಕಲು ಬಿಡಿ!



“ ನಮ್ಮಲ್ಲಿ ಹಿಂದಿನಿಂದಲೂ ಸ್ವತಂತ್ರವಾದ ಮನೆಗಳಿವೆ. ನಮ್ಮ ಮನೆಗೂ ಪಕ್ಕದ ಮನೆಗೂ ನಡುವೆ ಒಂದಷ್ಟು ಜಾಗ ಬಿಡಬೇಕು. ಅದರಿಂದ ನಮ್ಮ ಮನೆಗೆ ಗಾಳಿ, ಬೆಳಕು ಬರಬೇಕು ಎಂಬುದು ನಿಯಮ. ಇದನ್ನು ಇತ್ತೀಚಿನವರೆಗೂ ಪಾಲಿಸಿಕೊಂಡು ಬರಲಾಗುತ್ತಿತ್ತು. ಆದರೆ ಈಗ ದುರಾಸೆ. ನನ್ನ ಜಾಗ, ನನ್ನ ಮನೆ. ನನ್ನಿಷ್ಟದಂತೆ ಕಟ್ಟಿಕೊಳ್ಳುತ್ತೇನೆ ಎಂದು ತಮ್ಮ ಜಾಗದ ಕೊನೆಯವರೆಗೂ ಮನೆಯನ್ನು ಕಟ್ಟುವ ಭೂಪರು ಇಂದು ಎಲ್ಲೆಡೆ ಕಂಡುಬರುತ್ತಾರೆ. ಕೇಳಿದರೆ ನಿಮಗೆ ತೊಂದರೆಯಾದರೆ ಬೇರೆಡೆಗೆ ಹೋಗಿ ಎಂಬ ಬಿಟ್ಟಿ ಉಪದೇಶವೂ ಸಿಗುತ್ತದೆ.

ಇತ್ತೀಚೆಗೆ ಎಲ್ಲೆಲ್ಲಿಯೂ ಸಂವಿಧಾನದ ಕುರಿತಾದ ಮಾತುಗಳು ಕೇಳಿಬರುತ್ತಿವೆ. ಅನೇಕ ಪ್ರಸಂಗಗಳನ್ನು ಉಲ್ಲೇಖಿಸಿ ಇದು ಸಂವಿಧಾನ ವಿರೋಧಿ ಕೃತ್ಯ ಎಂದು ಹೇಳಲಾಗುತ್ತದೆ. ಅನೇಕ ಕಡೆ ಸಂವಿಧಾನ ರಚಿಸಿದ ಡಾ. ಅಂಬೇಡ್ಕರ್ ಹಾಗೆ ಪ್ರತಿಪಾದಿಸಿದ್ದಾರೆ, ಹೀಗೆ ಪ್ರತಿಪಾದಿಸಿದ್ದಾರೆ ಎಂಬೆಲ್ಲಾ ಮಾತುಗಳನ್ನು ಆಡುವುದನ್ನು ಕೇಳುತ್ತೇವೆ. ಆದರೆ ಹೀಗೆಂದು ಸಂವಿಧಾನ ಹೇಳಿದೆಯೇ ಎಂದು ಪರಿಶೀಲಿಸಲು ಹೋಗುವುದಿಲ್ಲ. ಅದೆಲ್ಲಾ ವಕೀಲರ ಕೆಲಸ ಎಂದು ಸುಮ್ಮನಾಗಿಬಿಡುತ್ತೇವೆ. ಆದರೂ ಜನರು ನಮಗೆ ಅನೇಕ ಮೂಲಭೂತ ಹಕ್ಕುಗಳಿವೆ. ಅದರಂತೆ ನಾವು ಏನು ಬೇಕಾದರೂ ಮಾಡಬಹುದು ಎಂದು ಹೇಳುತ್ತಾ ಸ್ವೇಚ್ಛಾಚಾರದ ವರ್ತನೆ ತೋರುತ್ತಾರೆ. ನನಗೆ ಸಂವಿಧಾನ ನೀಡಿದ ಹಕ್ಕನ್ನು ಮತ್ತೊಬ್ಬರಿಗೂ ನೀಡಲಾಗಿದೆ ಎಂಬುದನ್ನೇ ಮರೆತು, ನಮ್ಮದೇ ಸರಿ ಎಂದು ಮೊಂಡು ವಾದ ಮಾಡುವವರು ನಮ್ಮ ಮಧ್ಯೆ ಹೆಚ್ಚಾಗಿ ಕಾಣಸಿಗುತ್ತಾರೆ.

ರಸ್ತೆಯಲ್ಲಿ ನಾವು ವಾಹನಗಳಲ್ಲಿ ಹೋಗುವಾಗ ಅನೇಕರು ಹಾರನ್ ಅನಾವಶ್ಯಕವಾಗಿ ಮಾಡುವುದನ್ನು ನೋಡುತ್ತೇವೆ. ರಸ್ತೆಯಲ್ಲಿ ವಾಹನ ದಟ್ಟಣೆ ಇಲ್ಲದಿದ್ದರೂ ಅವರಿಗೆ ಹಾರನ್ ಮಾಡುವ ಜಾಯಮಾನ. ಕೇಳಿದರೆ ನನ್ನಿಷ್ಟ ಎಂಬ ಉತ್ತರ ಬರುತ್ತದೆ. ಇತ್ತೀಚೆಗೆ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದಾಗ, ಹಿಂದಿನಿಂದ ಬಂದ ಮತ್ತೊಂದು ದ್ವಿಚಕ್ರ ವಾಹನದ ಸವಾರ ಅನಾವಶ್ಯಕವಾಗಿ ಹಾರನ್ ಮಾಡುತ್ತಲೇ ಇದ್ದ. ಒಂದು ಸಿಗ್ನಲ್ ಲೈಟ್ ಸಮೀಪ ನನ್ನ ವಾಹನವನ್ನು ಹಿಂದಿಕ್ಕಿ ಮುಂದೆ ಬಂದು ನಿಂತ. ಅವನ ವಾಹನದ ಹಾರನ್‌ನ ಶಬ್ದ ಕರ್ಕಶವಾಗಿಯೂ ಇತ್ತು. ಸಿಗ್ನಲ್‌ನಲ್ಲಿ ಹಸಿರು ದೀಪ ಬಂದ ನಂತರವೂ ಅವನು ಮುಂದೆ ಹೊರಡಲಿಲ್ಲ. ಅವನು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ. ಹೀಗೆ ಎರಡೆರಡು ತಪ್ಪುಗಳು. ನಾನು ಬೇಕೆಂದೇ ಅವನು ಈ ಹಿಂದೆ ಮಾಡಿದ್ದಂತೆ ನನ್ನ ವಾಹನದ ಹಾರನ್ ಅನ್ನು ಕೆಲವು ಸಮಯ ನಿರಂತರವಾಗಿ ಮಾಡಿದೆ. ಅದನ್ನು ಕೇಳಿ ಅವನಿಗೆ ಕೋಪ ಬಂತು. ಆಗ ನಾನು ನೀನು ಇದನ್ನೇ ಮಾಡಿದ್ದು, ಅಷ್ಟು ದೂರದಿಂದ ಅನಾವಶ್ಯಕವಾಗಿ ಹಾರನ್ ಮಾಡುತ್ತಾ ಬಂದೆ, ಆಗ ನನಗೂ ಇದೇ ರೀತಿ ಕಿರಿಕಿರಿ ಆಯಿತು ಎಂದೆ. ಆಗ ಅವನು ತನ್ನ ತಪ್ಪಿಗೆ ಕ್ಷಮೆ ಕೇಳಬಹುದೆಂದು ಭಾವಿಸಿದ್ದೆ. ಆದರೆ, ಅವನು ಹೇಳಿದ್ದು ನನ್ನ ಬೈಕ್, ನನ್ನ ಹಾರನ್, ನನ್ನಿಷ್ಟ ಎಂದು ಹೇಳಿ ದುರುಗುಟ್ಟಿಕೊಂಡು ನೋಡುತ್ತಾ ಹೋದ. ಇಲ್ಲಿ 'ನನ್ನಿಷ್ಟ' ಎಂಬುದೇ ದೊಡ್ಡ ಪ್ರಶ್ನೆ. ಹಾಗಾದರೆ ನನ್ನಿಷ್ಟದಂತೆ ನಾನು ಏನು ಬೇಕಾದರೂ ಮಾಡಬಹುದೇ? ಅವನ ವಾಹನದಿಂದ ನನಗೆ ಆದ ಹಿಂಸೆ, ಅವನ ಇಷ್ಟ ಎಂದಾದರೆ ನಮಗಾದ ಹಿಂಸೆಗೆ ಪರಿಹಾರ ಎಲ್ಲಿ ಎಂದು ಪ್ರಶ್ನಿಸಬೇಕಾಗುತ್ತದೆ.

ಇಂತಹುದು ನಮಗೆ ನಿತ್ಯ ಅಲ್ಲಲ್ಲಿ ಕಂಡುಬರುತ್ತದೆ. ಏಕಮುಖ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವುದು, ಕೇಳಿದರೆ ನನ್ನಿಷ್ಟ ಎನ್ನುವುದು ಮಾಮೂಲಾಗಿದೆ. ಅದನ್ನು ನಾವು ಹಕ್ಕಿನ ರೂಪದಲ್ಲಿ ಪ್ರತಿಪಾದಿಸುತ್ತೇವೆ. ನಿಜ. ನಮಗೆ ನಮ್ಮ ಸಂವಿಧಾನ ಅನೇಕ ಹಕ್ಕುಗಳನ್ನು ನೀಡಿದೆ. ಆದರೆ ಅದು ಸ್ವೇಚ್ಛಾಚಾರವನ್ನು ಪ್ರತಿಪಾದಿಸುವುದಿಲ್ಲ. ನನ್ನ ಹಕ್ಕಿನಂತೆ ಮತ್ತೊಬ್ಬರಿಗೂ ಹಕ್ಕಿರುವಾಗ ಅವರ ಹಕ್ಕನ್ನೂ ನಾನು ಗೌರವಿಸಬೇಕಾಗುತ್ತದೆ. ನಮ್ಮ ಮನೆಯಲ್ಲಿ ಹೊಸದಾಗಿ ಟಿವಿ ಅಥವಾ ಹೋಮ್ ಥಿಯೇಟರ್ ತಂದಾಗ, ಅದರ ಶಬ್ದ ನಮ್ಮ ಮನೆಗೇ ಸೀಮಿತವಾಗಬೇಕು. ಅದರಿಂದ ಅಕ್ಕಪಕ್ಕದವರಿಗೆ ಕಿರಿಕಿರಿಯಾಗಬಾರದು. ಅಕ್ಕಪಕ್ಕದವರು ಅದನ್ನು ಆಕ್ಷೇಪಿಸಲಿಲ್ಲ ಎಂದರೆ ನಾವು ಹೇಗೆ ಬೇಕಾದರೂ, ಎಷ್ಟು ಬೇಕಾದರೂ ವಾಲ್ಯೂಮ್ ಕೊಡಬಹುದು ಎಂದು ಅರ್ಥವಲ್ಲ. ಅಕ್ಕಪಕ್ಕದವರು, ಏಕೆ ನೆರೆಮನೆಯವರೊಡನೆ ವೈಷಮ್ಯ ಕಟ್ಟಿಕೊಳ್ಳಬೇಕು ಎಂದು ಆಕ್ಷೇಪಿಸದೇ ಇರಬಹುದು. ಅದನ್ನು ಅವರ ದೌರ್ಬಲ್ಯ ಎಂದು ಭಾವಿಸಬಾರದು. ಅವರ ಮನೆಯಿಂದಲೂ ಇದೇ ರೀತಿ ಅಬ್ಬರದ ಶಬ್ದ ಬಂದರೆ ಆಗ ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ನಮ್ಮಲ್ಲಿ ಹಿಂದಿನಿಂದಲೂ ಸ್ವತಂತ್ರವಾದ ಮನೆಗಳಿವೆ. ನಮ್ಮ ಮನೆಗೂ ಪಕ್ಕದ ಮನೆಗೂ ನಡುವೆ ಒಂದಷ್ಟು ಜಾಗ ಬಿಡಬೇಕು. ಅದರಿಂದ ನಮ್ಮ ಮನೆಗೆ ಗಾಳಿ, ಬೆಳಕು ಬರಬೇಕು ಎಂಬುದು ನಿಯಮ. ಇದನ್ನು ಇತ್ತೀಚಿನವರೆಗೂ ಪಾಲಿಸಿಕೊಂಡು ಬರಲಾಗುತ್ತಿತ್ತು. ಆದರೆ ಈಗ ದುರಾಸೆ. ನನ್ನ ಜಾಗ, ನನ್ನ ಮನೆ. ನನ್ನಿಷ್ಟದಂತೆ ಕಟ್ಟಿಕೊಳ್ಳುತ್ತೇನೆ ಎಂದು ತಮ್ಮ ಜಾಗದ ಕೊನೆಯವರೆವಿಗೂ ಮನೆಯನ್ನು ಕಟ್ಟುವ ಭೂಪರು ಇಂದು ಎಲ್ಲೆಡೆ ಕಂಡುಬರುತ್ತಾರೆ. ಕೇಳಿದರೆ ನಿಮಗೆ ತೊಂದರೆಯಾದರೆ ಬೇರೆಡೆಗೆ ಹೋಗಿ ಎಂಬ ಬಿಟ್ಟಿ ಉಪದೇಶವೂ ಸಿಗುತ್ತದೆ.

ನಮ್ಮಲ್ಲಿ ಮೊದಲಿನಿಂದಲೂ ನೆರೆಹೊರೆ ಚೆನ್ನಾಗಿರಬೇಕು. ಅವರು ನಮಗೆ ಹೊರೆಯಾಗಬಾರದು. ನಮ್ಮ ಕಷ್ಟ-ಸುಖಗಳಿಗೆ ಅವರು ಬರಬೇಕು, ಅವರ ಕಷ್ಟ-ಸುಖಗಳಲ್ಲಿ ನಾವು ಭಾಗಿಯಾಗಬೇಕು ಎಂಬ ಮನೋಭಾವ ಇತ್ತು. ಇದರಿಂದ ಇಬ್ಬರೂ ನೆಮ್ಮದಿಯಾಗಿರಬಹುದು. ಕೆಲವೊಮ್ಮೆ ನೆರೆಹೊರೆಯಲ್ಲಿ ಒಳ್ಳೆಯವರು ಸಿಗಬೇಕಾದರೆ ಅದೃಷ್ಟ ಇರಬೇಕು ಎಂದು ಹೇಳಲಾಗುತ್ತಿತ್ತು. ನಮ್ಮ ಎಡ ಮನೆಯವರು ಚೆನ್ನಾಗಿದ್ದು, ಬಲ ಬದಿಯವರು ಕಿರಿಕಿರಿ ಸ್ವಭಾವದವರಾಗಿದ್ದರೂ ನಾವು ನೆಮ್ಮದಿಯಿಂದ ಬಾಳುವುದು ಕಷ್ಟವೇ. ಪರಸ್ಪರ ಹೊಂದಾಣಿಕೆ ಇಲ್ಲದಿದ್ದರೆ, ನಮ್ಮ ಮನೆಯ ಕಾರು ಸ್ವಲ್ಪ ಅವರ ಮನೆಯ ಮುಂದೆ ನಿಂತರೆ ಜಗಳಕ್ಕೆ ಬರುತ್ತಾರೆ ಎಂದರೆ ಹೊಂದಾಣಿಕೆ ಕಷ್ಟವೇ. ಅದಕ್ಕೇ ನಾವು ಒಂದಷ್ಟು ಹೊಂದಿಕೊಂಡು ಹೋಗಬೇಕು ಎಂದು ಹಿಂದಿನವರು ಹೇಳುತ್ತಿದ್ದುದು.

ನನ್ನ ಪರಿಚಿತರ ಮನೆಯೊಂದು ರಸ್ತೆಯ ಕೊನೆಗಿದೆ. ಅದರ ನಂತರ ರಸ್ತೆ ಇಲ್ಲ. ನಂತರದ ಪಕ್ಕದವರು ಯಾವುದೋ ಕಾರಣ ನೀಡಿ ರಸ್ತೆಗೇ ಕಾಂಪೌಂಡ್ ಹಾಕಿಬಿಟ್ಟಿದ್ದಾರೆ. ಅದು ಅವರ ಖಾಸಗಿ ಜಾಗ, ಪ್ರಶ್ನೆ ಮಾಡುವಂತಿಲ್ಲ. ಹಾಗಾಗಿ ಇವರು ತಮ್ಮ ಮನೆಗೆ ಸಂಬಂಧಿಸಿದ ವಾಹನಗಳನ್ನು ಇನ್ನೊಬ್ಬರಿಗೆ ತೊಂದರೆಯಾಗದಂತೆ ನಿಲ್ಲಿಸಿಕೊಳ್ಳುತ್ತಾರೆ. ಇತ್ತೀಚೆಗೆ ಅವರ ಎದುರು ಮನೆಯವರು (ಅದೂ ರಸ್ತೆಯ ಕೊನೆಯ ಮನೆಯೇ) ಬೇರೆ ಊರಿಗೆ ಹೊರಟು ಹೋದರು. ಈ ಮನೆಯನ್ನು ಬಾಡಿಗೆಗೆ ನೀಡಿದರು. ಬಾಡಿಗೆಗೆ ಬಂದವರು ಒಬ್ಬ ರಾಜಕಾರಿಣಿ. ಅವರಿಗೆ ಎರಡು ಕಾರಿದೆ. ಮನೆಯಲ್ಲಿ ಕಾರು ನಿಲ್ಲಿಸುವ ಗ್ಯಾರೇಜ್ ವ್ಯವಸ್ಥೆ ಇಲ್ಲ. ಹಾಗಾಗಿ ಎರಡೂ ಕಾರುಗಳು ರಸ್ತೆಯಲ್ಲೇ ನಿಲ್ಲುತ್ತವೆ. ಅವರು ರಾಜಕಾರಿಣಿಯಾಗಿರುವುದರಿಂದ ರಾತ್ರಿ ಮನೆಗೆ ಬರುವುದು ತಡವಾಗುತ್ತದೆ. ಹಾಗಾಗಿ ಬೆಳಿಗ್ಗೆ ಏಳುವುದೂ ತಡವೇ. ಈ ಎದುರು ಮನೆಯವರು ಬೆಳಿಗ್ಗೆ ಕೆಲಸಕ್ಕೆ ಹೋಗಬೇಕು. ಇವರ ವಾಹನ ತೆಗೆಯಲು ಎದುರು ಮನೆಯ ಕಾರು ಅಡ್ಡ ನಿಂತಿರುತ್ತದೆ. ಅದನ್ನು ತೆಗೆಯಿರಿ ಎಂದು ಹೇಳಿದರೆ, ಅವರು ತಕ್ಷಣ ತೆಗೆಯುವುದಿಲ್ಲ. ತೆಗೆದರಾಯಿತು ಎಂಬ ಮನೋಭಾವ. ಇದರಿಂದ ಇವರು ಪ್ರತಿದಿನ ಕಚೇರಿಗೆ ತಡವಾಗಿ ಹೋಗುವಂತಾಗುತ್ತದೆ, ಸ್ವಂತ ವಾಹನವಿದ್ದರೂ ಕೆಲವೊಮ್ಮೆ ಅನಿವಾರ್ಯವಾಗಿ ಆಟೋದಲ್ಲಿ ಹೋಗಬೇಕಾಗುತ್ತದೆ. ಎದುರು ಮನೆಯವರ ಉತ್ತರ 'ನನ್ನಿಷ್ಟ'. ಹೀಗಾದರೆ ನೆರೆಹೊರೆ ಎಂಬುದು ಹೊರೆಯಾದಂತೆ ಅಲ್ಲವೇ?

ಇದು ಸ್ವಂತ ಒಂದು ಅಂತಸ್ತಿನ ಮನೆಗಳ ಕಥೆಯಾದರೆ ಇನ್ನು ಅಪಾರ್ಟ್‌ಮೆಂಟ್‌ಗಳ ಕಥೆ ಇದಕ್ಕಿಂತ ಭಿನ್ನವಾದುದು. ಕೆಲ ವರ್ಷಗಳ ಹಿಂದೆ ಒಬ್ಬರು ಅಪಾರ್ಟ್‌ಮೆಂಟ್‌ನ ಜೀವನ ಹೇಗೆ ದುಸ್ತರ ಎಂಬ ಬಗ್ಗೆ ತಮ್ಮ ದುಃಖವನ್ನು ಹಂಚಿಕೊಂಡಿದ್ದರು. ಒಂದು ಆಂಗ್ಲ ಗಾದೆ ಇದೆ. ಅದರಂತೆ ಹೆತ್ತವರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಮಗಿಲ್ಲ. ಭಿಕ್ಷುಕರಿಗೂ ಆಯ್ಕೆ ಎನ್ನುವುದು ಇಲ್ಲ ಎಂಬುದನ್ನು ಹೇಳಿದ್ದರು. ಭಿಕ್ಷುಕ ತನ್ನ ತಟ್ಟೆಗೆ ನಾಣ್ಯ ಬೀಳಲಿ, ನೋಟು ಬೀಳಲಿ ಅದನ್ನೇ ಸ್ವೀಕರಿಸಿ ತೆಪ್ಪಗಿರಬೇಕು ಎಂಬುದು ಇದರ ಅರ್ಥ. ಇದೇ ಮಾತು ಈಗ ನಮ್ಮ ನೆರಹೊರೆಯವರಿಗೂ ಅನ್ವಯಿಸುತ್ತದೆ. ಇಲ್ಲಿಯೂ ನಮಗೆ ಆಯ್ಕೆ ಎಂಬುದು ಇಲ್ಲ. ಪಾಲಿಗೆ ಬಂದಿದ್ದು ಪಂಚಾಮೃತ ಎಂಬಂತೆ ತೃಪ್ತಿಪಟ್ಟುಕೊಳ್ಳ ಬೇಕು. ಅಪಾರ್ಟ್‌ಮೆಂಟ್‌ನಲ್ಲಿ ನಮ್ಮ ನೆರೆಹೊರೆ ಯವರು ಕುಡುಕರೋ, ಅನ್ಯ ವ್ಯಸನಿಗಳೋ, ಇತರೆ ಕೆಟ್ಟ ಅಭ್ಯಾಸ ಇರುವವರೋ ಆಗಿರಬಹುದು. ಅವರು ಏನೇ ಕಿರಿಕ್ ಮಾಡುವ ಸ್ವಭಾವದವರಾಗಿರಬಹುದು. ಅಪಾರ್ಟ್‌ಮೆಂಟ್ ನಿಮ್ಮದಾಗಿದ್ದರೆ ನೀವು ಎಲ್ಲವನ್ನೂ ಸಹಿಸಿಕೊಂಡು ಹೋಗಬೇಕಾಗುತ್ತದೆ. ಸಹಬಾಳ್ವೆ ಒಂದು ರೀತಿ ಕಡ್ಡಾಯ. ನೀವು ಬಾಡಿಗೆಗೆ ಇರುವವರಾದರೆ ಬಿಟ್ಟು ಹೋಗುವುದು ನಿಮ್ಮ ಆಯ್ಕೆ. ಆದರೆ ಅದು ನಿಮ್ಮ ಸ್ವಂತ ಮನೆಯಾದರೆ ನಿಮಗೆ ಬೇರೆ ಆಯ್ಕೆಯೇ ಇಲ್ಲ.

ಇಂತಹ ಅಪಾರ್ಟ್‌ಮೆಂಟ್‌ನಲ್ಲಿದ್ದ ಅವರು ಹೇಳುವುದು, ಇಂತಹ ವಸತಿ ಸಮುಚ್ಚಯದಲ್ಲಿ ಹಲವು ತರಹದ ಮಂದಿ ವಾಸವಿದ್ದು, ಅವರ ಕಾಟಕ್ಕೆ ಎದುರು ಮಾತನಾಡದೆ, ಬಾಯಿ ಮುಚ್ಚಿಕೊಂಡು, ಕಿವಿ ಮುಚ್ಚಿಕೊಂಡು, ಮೂಗರಂತೆ, ಕುರುಡರಂತೆ ಬಾಳಬೇಕಾಗಿದೆ. ಇಲ್ಲವಾದರೆ ಜಗಳ, ಹಲ್ಲೆ, ದೈಹಿಕ ಹಿಂಸೆ ಶುರುವಾಗಿ ಬಿಡುತ್ತದೆ. ಬಹು ಮಹಡಿ ಕಟ್ಟಡಗಳಲ್ಲಿ ವಾಸ ಮಾಡುವುದು ಎಂದರೆ ಒಂದು ರೀತಿಯಲ್ಲಿ ಕತ್ತಿಯ ಅಲಗಿನ ಮೇಲೆ ನಡೆದಾಡಿದಂತೆ ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ. ಹತ್ತಿರದಿಂದ ಕಂಡ ನಮಗೂ ಇಂತಹ ಅನುಭವ ಆಗುತ್ತದೆ. ನಮ್ಮ ಮೇಲಿನ ಮನೆಯವರು ದಿನವಿಡೀ ತಮ್ಮ ಫ್ಲಾಟ್‌ನಲ್ಲಿ ಶಬ್ದ ಬರುವಂತೆ ನಡೆದಾಡುತ್ತಿದ್ದರೆ, ಕೆಳಗಿನ ಫ್ಲಾಟ್‌ನವರು ನೆಮ್ಮದಿಯಾಗಿ ನಿದ್ದೆ ಮಾಡಲು ಸಾಧ್ಯವೇ? ಇದನ್ನು ಪ್ರಶ್ನಿಸಿದರೆ, ಅವರಿಂದ ಬರುವ ಉತ್ತರ ನನ್ನ ಫ್ಲಾಟ್, ನನ್ನಿಷ್ಟ, ನಾನು ಹೇಗೆ ಬೇಕಾದರೂ ಇರಬಹುದು. ಅದಕ್ಕೆ ನನಗೆ ಅಧಿಕಾರವಿದೆ. ನಿಮಗೆ ಬೇಕಾದರೆ ನೀವೇ ಬೇರೆ ಮನೆಗೆ ಹೋಗಿ ಎನ್ನುವ ಉತ್ತರ. ಜೊತೆಗೆ ನಾನು ಯಾರು ಎಂದು ನಿಮಗೆ ಗೊತ್ತಿಲ್ಲ. ನಾನು ಬಹಳ ಪ್ರಭಾವಿ ಮನುಷ್ಯ. ನೀವು ಕಿರಿಕಿರಿ ಮಾಡಿದರೆ ನಾನು ನಿಮ್ಮ ಮೇಲೆಯೇ ಮೊಕದ್ದಮೆ ಹೂಡುತ್ತೇನೆ ಎಂದು ಬೆದರಿಕೆ ಹಾಕುತ್ತಾರೆ. ಇಂತಹ ಮನೆಯಲ್ಲಿ ಹಿರಿಯ ನಾಗರಿಕರಿದ್ದರೆ ಅವರ ಪಾಡೇನು?

ಮೇಲಿನ ಸ್ನೇಹಿತರು ತಮ್ಮ ಫ್ಲಾಟ್‌ನ ಮತ್ತೊಂದು ವಿಷಾದದ ವಿಷಯ ಹೇಳುತ್ತಾರೆ. ನಮ್ಮ ಕಟ್ಟಡದ ನಾಲ್ಕನೇ ಮಹಡಿಯ ಫ್ಲಾಟ್‌ನಲ್ಲಿ ಒಂದು ಕುಟುಂಬ ಇದೆ. ಅವರ ಕೆಳಗಿನ ಫ್ಲಾಟ್‌ನಲ್ಲಿ ಇರುವ ವಿಮಾನ ಪೈಲಟ್ ಒಬ್ಬರು ನಿರಂತರ ಧೂಮಪಾನ ಮಾಡುತ್ತಾರೆ. ಆ ಹೊಗೆ ಇವರ ಫ್ಲಾಟ್‌ಗೆ ನುಗ್ಗುತ್ತದೆ. ಇದೊಂದು ರೀತಿ ನಿರಂತರ ಹೊಗೆ ಸೇವಿಸುವ ಭಾಗ್ಯ. ಆತನ ಬಳಿ ಹೊಗೆಯಿಂದ ಆಗುತ್ತಿರುವ ತೊಂದರೆ ಬಗ್ಗೆ ಹೇಳಿದಾಗ ಆತ ನೀಡಿದ ಉತ್ತರ ಎಂದರೆ ನೀವು ನಿಮ್ಮ ಮನೆಯ ಕಿಟಕಿ, ಬಾಗಿಲುಗಳನ್ನು ಯಾವಾಗಲೂ ಹಾಕಿಕೊಂಡಿರಿ. ಇನ್ನು ಮುಂದೆ ನಾನು ಸಿಗರೇಟಿಗೆ ಬೆಂಕಿ ಹಚ್ಚುವಾಗ ನಿಮಗೆ ಮೆಸೇಜ್ ಮಾಡುತ್ತೇನೆ ಎಂದು ವ್ಯಂಗ್ಯವಾಗಿ ಹೇಳುತ್ತಾನೆ. ಕೇಳಿದರೆ ಉತ್ತರ ನನ್ನಿಷ್ಟ, ಅದು ನನ್ನ ಹಕ್ಕು?. ಹಾಗೆಯೇ ಬೇಕೆಂದು ನಮಗೆ ನಿಗದಿಯಾದ ಜಾಗದಲ್ಲಿ ತಮ್ಮ ವಾಹನ ನಿಲ್ಲಿಸುವುದು, ಬೇಕೆಂದೇ ಟಿವಿ ವಾಲ್ಯೂಮ್ ಜಾಸ್ತಿ ಮಾಡುವುದು, ಮಧ್ಯರಾತ್ರಿಯಲ್ಲಿ ಶಬ್ದ ಮಾಡುವುದು ಇವೆಲ್ಲಾ ಆಗುತ್ತದೆ. ಹೆಸರಿಗೆ ಮಾತ್ರ ನಾವು ಆ ಫ್ಲಾಟ್‌ನ ಮಾಲೀಕರು. ಆದರೆ ಇವೆಲ್ಲಾ ಸಮಸ್ಯೆಗಳೊಡನೆ ಬಾಳಬೇಕಾಗುತ್ತದೆ. ನೆಮ್ಮದಿ ರಹಿತ ಜೀವನ ನಡೆಸಬೇಕು.

ಇಲ್ಲೆಲ್ಲಾ ನಮ್ಮ ಹಕ್ಕುಗಳ ಬಗ್ಗೆಯೇ ಹೇಳಲಾಗುತ್ತದೆ. ಆದರೆ ಇತರರ ಹಕ್ಕುಗಳಿಗೂ ನಾವು ಗೌರವ ನೀಡಬೇಕು ಎಂಬ ಮನೋಭಾವ ಕ್ರಮೇಣ ಕಡಿಮೆಯಾಗುತ್ತಿದೆ. ಹೊಂದಿಕೊಂಡು ಬಾಳುವ ಮನೋಭಾವವೇ ಹೋಗುತ್ತಿದೆ. ನಾವು ಸಮಾಜ ಜೀವಿಗಳು. ಹೊಂದಾಣಿಕೆಯಿಂದ ಮಾತ್ರ ನೆಮ್ಮದಿಯ ಜೀವನ ಸಾಧ್ಯ ಎಂಬುದನ್ನು ಮರೆಯಬಾರದು.

ದ್ವೇಷ ಹರಡಿ ರಾಜಕೀಯ ಲಾಭ ಪಡೆಯುವವರ ವಿರುದ್ಧ ಒಗ್ಗಟ್ಟಾಗಿ ಹೋರಾಡುವ ಅನಿವಾರ್ಯತೆ

● ಎಂಎಲ್‌ಸಿ ಡಾ.ಯತೀಂದ್ರ ● ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ; ಉರ್ದು ದಿನಾಚರಣೆ

ಮೈಸೂರು, ನ.28(ವಿವಿಹೆಚ್)– ಹಿಂದೂ–ಮುಸ್ಲಿಂ ನಡುವೆ ಇರುವ ಸಹೋದರತ್ವದ ಸರ್ವ ಜನಾಂಗದ ಶಾಂತಿಯ ತೋಟವನ್ನು, ಹಾಳು ಮಾಡಿ, ದ್ವೇಷ ಹರಡಿ ರಾಜಕೀಯ ಲಾಭ ಪಡೆಯುವವರ ವಿರುದ್ಧ ಒಗ್ಗಟ್ಟಾಗಿ ಹೋರಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.



ಸಮಾರಂಭದಲ್ಲಿ ಡಾ. ಯತೀಂದ್ರ ಸಿದ್ದರಾಮಯ್ಯ ಮಾತನಾಡುತ್ತಿರುವುದು.

ನಗರದ ಉದಯಗಿರಿಯ ರಾಜ್‌ಕುಮಾರ್ ರಸ್ತೆ ರೈಜ್ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘವತಿಯಿಂದ ಶುಕ್ರವಾರ ಆಯೋಜಿಸಿದ್ದ 1500ನೇ ಮೀಲಾದ್–ಉನ್–ನಬಿ (ಸ) ಆಚರಣೆ, 70ನೇ ಕನ್ನಡ ರಾಜ್ಯೋತ್ಸವ, ಉರ್ದು ದಿನಾಚರಣೆ ಮತ್ತು ರಾಷ್ಟ್ರೀಯ ಶಿಕ್ಷಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವೈವಿಧ್ಯಮಯ ಸಂಸ್ಕೃತಿಯ ತಾಣವಾದ ಭಾರತದಲ್ಲಿ, ಎಲ್ಲಾ ಜಾತಿ, ಧರ್ಮ, ಮತಗಳು ಒಂದಾಗಿ ಜೀವಿಸಿದ್ದ ಇತಿಹಾಸವಿದೆ. ಆದರೆ ಇಂದಿನ ಕಾಲಘಟ್ಟದಲ್ಲಿ ಕೆಲವರು, ಧರ್ಮ–ಧರ್ಮಗಳ ನಡುವೆ ಇರುವ ಸಂಬಂಧವನ್ನು ಹಾಳು ಮಾಡಿ ಸಂವಿಧಾನದ ಮೂಲ ಆಶಯವನ್ನೇ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಾಮಾಜಿಕ ನ್ಯಾಯ ಒದಗಿಸಿರುವುದು ಸಂವಿಧಾನ. ಈ ಸಂವಿಧಾನದ ಮೂಲ ಆಶಯವಾದ ಜಾತ್ಯಾತೀತತೆ, ಸಮಾನತೆಯನ್ನು ತೆಗೆದು ಹಾಕಲು ಸಂವಿಧಾನ ಬದಲಾವಣೆಗೆ ಸಂಚು ರೂಪಿಸಲಾಗುತ್ತಿದೆ. ಇದಕ್ಕಾಗಿ ಮುಸ್ಲಿಂರು ಹಿಂದೂಗಳ ಶತ್ರುಗಳು ಎಂದು ಬಿಂಬಿಸಲಾಗುತ್ತಿದೆ. ಆದರೆ ಅಸಲಿಯತ್ತೆ ಬೇರೆ ಇದ್ದು, ಸಂವಿಧಾನವನ್ನು ಬದಲಾಯಿಸಿ, ಹಿಂದೂ ಸಮಾಜದಲ್ಲಿನ ಶ್ರೇಣೀಕೃತ ವ್ಯವಸ್ಥೆ ವಾಪಸ್ ತರುವುದಾಗಿದೆ. ಅದಕ್ಕಾಗಿ ಮುಸ್ಲಿಂರನ್ನು ಎದುರಾಳಿಗಳನ್ನಾಗಿ ಬಿಂಬಿಸಿ, ವರ್ಣ ವ್ಯವಸ್ಥೆ ಜಾರಿಗೆ ತಂದು ಹಿಂದೂಗಳಲ್ಲಿರುವ ಅಲ್ಪ ಸಂಖ್ಯಾತರು, ಶೋಷಿತರನ್ನು ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವ ಹುನ್ನಾರ ನಡೆದಿದೆ. ಇಂತಹವರ ವಿರುದ್ಧ, ಜಾತ್ಯಾತೀತತೆ ಮತ್ತು ಸಮಾನತೆ ಉಳಿಯಲು ಸಂವಿಧಾನಕ್ಕೆ ಆದ್ಯತೆ ನೀಡುವವರನ್ನು ಬೆಂಬಲಿಸಬೇಕಿದೆ ಎಂದು ಎಚ್ಚರಿಸಿದರು.

ನಮ್ಮ ಪಕ್ಷದ ಮುಖಂಡರು ಶೋಷಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯ ನೀಡುವ ಉದ್ದೇಶ ಹೊಂದಿದ್ದಾರೆ. ಭಾರತದಲ್ಲಿ ಶೈಕ್ಷಣಿಕ ಮತ್ತು ಆರ್ಥಿಕವಾಗಿ ಬಹಳ ಹಿಂದುಳಿದಿರುವ ಏಕೈಕ ಸಮುದಾಯ ಮುಸ್ಲಿಂರದ್ದು. ಈ ದೇಶದ ಅಭಿವೃದ್ಧಿಯಲ್ಲಿ ಎಲ್ಲಾ ಸಮುದಾಯಗಳೊಂದಿಗೆ ಮುಸ್ಲಿಂ ಸಮುದಾಯದ ಸಮಗ್ರ ಅಭಿವೃದ್ಧಿಯೂ ಆಗಬೇಕಿದ್ದು, ಮುಸ್ಲಿಂ ಸಮುದಾಯಕ್ಕೆ ಶಕ್ತಿ ತುಂಬುವ ಕೆಲಸ ಕಾಂಗ್ರೆಸ್ ಪಕ್ಷ ಮಾಡುತ್ತದೆ ಎಂದು ತಿಳಿಸಿದರು.

ದೇಶ ಭಾಷೆ ಉರ್ದು: ಉರ್ದು ನಮ್ಮ ದೇಶದ ಭಾಷೆ. ಭಾರತದಲ್ಲಿ ಹುಟ್ಟಿರುವ ಭಾಷೆಯ ಬಗ್ಗೆ ಹೆಮ್ಮೆ ಇರಬೇಕು. ಅದನ್ನು ಕೇವಲ ಒಂದು ಸಮುದಾಯಕ್ಕೆ ಸೀಮಿತವನ್ನಾಗಿ ಮಾಡಿರುವುದು ದುರಾದೃಷ್ಟಕರ. ಮುಸ್ಲಿಂರು ಇಂಗ್ಲಿಷ್ ಕಲಿಕೆಗೆ ಮುಂದಾಗಬೇಕು. ದೇಶ ಮಾತ್ರವಲ್ಲದೇ ಜಾಗತಿಕ ಜ್ಞಾನ ಸಿಗುವುದು ಇಂಗ್ಲಿಷ್‌ನಲ್ಲಿ ಮಾತ್ರ. ಇಂಗ್ಲಿಷ್ ಕಲಿಕೆ ಸಮುದಾಯದ ಏಳಿಗೆಗೆ ಸಹಕಾರಿ. ರಾಜ್ಯದಲ್ಲಿ ತ್ರಿಭಾಷಾ ಸೂತ್ರ ಅಳವಡಿಕೆಯಾಗಿದ್ದು, ಉರ್ದು ಜೊತೆಗೆ ಕನ್ನಡ ಮತ್ತು ಇಂಗ್ಲಿಷ್ ಕಲಿಸಿ ಎಂದು ಸಲಹೆ ನೀಡಿದರು.

ಜ್ಞಾನ ಸಂಪಾದನೆಗೆ ಆದ್ಯತೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಅಲ್ಪಸಂಖ್ಯಾತ ವರ್ಗವಾಗಿರುವ ನಾವು, ನಮ್ಮ ವಿರುದ್ಧ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಪ್ರತಿಕ್ರಿಯಿಸುವ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಭಾಷಾ ಹಿಡಿತ ಇಲ್ಲದಿರುವುದೇ ಇದಕ್ಕೆ ಮೂಲ ಕಾರಣವಾಗಿದೆ. ಆದಷ್ಟು ಸಮುದಾಯದ ವಿದ್ಯಾವಂತರು, ಸರ್ಕಾರಿ ನೌಕರರು ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿಕೊಳ್ಳುತ್ತಾ, ಕನ್ನಡದೊಂದಿಗೆ ಇಂಗ್ಲಿಷ್ ಜ್ಞಾನ ಸಂಪಾದನೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ತಿಳಿಸಿದರು.

ನೂರ್ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಸೈಯದ್ ಆಖೀಲ್ ಅಹಮದ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಉದಯಕುಮಾರ್, ಕೊಡಗು ವಿವಿ ಕನ್ನಡ ಉಪನ್ಯಾಸಕ ಜಮೀರ್ ಅಹಮದ್, ಮುಕ್ತ ವಿವಿ ಕುಲಪತಿ ಶರಣಪ್ಪ ವಿ.ಹಲಸೆ, ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಬಾನ ಅಂಜುಮ್, ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಸೈಯದ್ ಮುದಸ್ಸಿರ್, ಗೌರವಾಧ್ಯಕ್ಷ ಡಾ.ಎಂ.ಐ.ನಯಾಜ್ ಪಾಷ, ಉಪಾಧ್ಯಕ್ಷ ಮುನಾವರ್ ಪಾಷಾ, ಹಿರಿಯ ಉಪಾಧ್ಯಕ್ಷ ಸೈಯದ್ ದಸ್ತಗೀರ್, ಜಂಟಿ ಕಾರ್ಯದರ್ಶಿ ಅಪ್ಸರ್ ಪಾಷ, ಕಾರ್ಯದರ್ಶಿ ಸೈಯದ್ ಸಾದಿಕ್ ಪಾಷ, ಸಂಘಟನಾ ಕಾರ್ಯದರ್ಶಿ ಇರ್ಫಾನ್ ಅಹಮದ್, ಕಾರ್ಯದರ್ಶಿ ಸೈಯದ್ ನಾಸಿರ್ ಅಹಮದ್, ಖಜಾಂಚಿ ಗೌಸಿಯಾ ತಾಜ್, ಸಲಹೆಗಾರ ಪ್ರೊ. ನಬಿಜಾನ್, ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕೆ.ಆರ್.ನಗರ ತಾಲೂಕು ಅಧ್ಯಕ್ಷ ಸೈಯದ್ ಖಾದಿರ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ನಗರ ಪೊಲೀಸ್ ಕ್ರೀಡಾಕೂಟ

ನಗರ ಸಶಸ್ತ್ರ ಮೀಸಲು ಪಡೆ ಸಮಗ್ರ ಪ್ರಶಸ್ತಿಯೊಂದಿಗೆ ಚಾಂಪಿಯನ್



ಗುಂಪು ಹಾಗೂ ವೈಯಕ್ತಿಕ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ ಸಿಎಆರ್ ತಂಡಕ್ಕೆ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಅಂತಾರಾಷ್ಟ್ರೀಯ ಕ್ರೀಡಾಪಟು ಅರ್ಜುನ್ ದೇವಯ್ಯ ತೀತಾಮಾಡ ಟ್ರೋಫಿ ನೀಡಿ ಅಭಿನಂದಿಸಿದರು.

ಮೈಸೂರು, ನ.28(ವಿವಿಹೆಚ್)– ನ.26 ರಿಂದ 28 ವರೆಗೆ ನಡೆದ ಮೈಸೂರು ನಗರ ಪೊಲೀಸ್ ಕ್ರೀಡಾಕೂಟ–2025ರಲ್ಲಿ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ತಂಡವು ಸಮಗ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಳ್ಳುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಶುಕ್ರವಾರ ನಡೆದ ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ–2025ರ ಸಮಾರೋಪ ಸಮಾರಂಭದಲ್ಲಿ ಗುಂಪು ಹಾಗೂ ವೈಯಕ್ತಿಕ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ ಸಿಎಆರ್ ತಂಡಕ್ಕೆ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಅಂತಾರಾಷ್ಟ್ರೀಯ ಕ್ರೀಡಾಪಟು ಅರ್ಜುನ್ ದೇವಯ್ಯ ತೀತಾಮಾಡ ಟ್ರೋಫಿ ನೀಡಿ ಅಭಿನಂದಿಸಿದರು.

ಕ್ರೀಡಾಕೂಟದಲ್ಲಿ ಪುರುಷರ ಸಮಗ್ರ ವಿಭಾಗದಲ್ಲಿ ಉತ್ತಮ ಪ್ರದರ್ಶನ ತೋರಿದ ಎನ್.ಆರ್ ಉಪ ವಿಭಾಗದ ಶಶಾಂಕ್, ಮಹಿಳಾ ವಿಭಾಗದಲ್ಲಿ ಕೆ.ಆರ್ ಉಪವಿಭಾಗದ ಕೆ.ಅಶ್ವಿನಿ 'ಸರ್ವೋತ್ತಮ ಪ್ರಶಸ್ತಿ' ಮುಡಿಗೇರಿಸಿಕೊಂಡರು.

ಗುಂಪು ವಿಭಾಗ: ಮಹಿಳೆಯರ ವಿಭಾಗದ ವಾಲಿಬಾಲ್‌ನಲ್ಲಿ ವಿಜಯನಗರ ಉಪವಿಭಾಗ, ಸಂಚಾರ ವಿಭಾಗ, ಹಗ್ಗಜಗ್ಗಾಟದಲ್ಲಿ ಕೃಷ್ಣರಾಜ ಉಪವಿಭಾಗ, ವಿಶೇಷ ಪಡೆ, ಕ್ರಿಕೆಟ್‌ನಲ್ಲಿ ಪೊಲೀಸ್ ಆಯುಕ್ತರ ತಂಡ, ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ತಂಡ ಕ್ರಮವಾಗಿ ಪ್ರಥಮ, ದ್ವಿತೀಯ ಸ್ಥಾನ ಪಡೆದು ಬೀಗಿತು.

ಪುರುಷರ ಹಗ್ಗಜಗ್ಗಾಟದಲ್ಲಿ ನಗರ ಸಶಸ್ತ್ರ ಮೀಸಲು ಪಡೆ ಪ್ರಥಮ, ಸಂಚಾರ ಪೊಲೀಸರ ತಂಡ ದ್ವಿತೀಯ ಸ್ಥಾನ ಪಡೆಯಿತು. ಅಧಿಕಾರಿಗಳಿಗಾಗಿ ಆಯೋಜಿಸಿದ್ದ ಕ್ರಿಕೆಟ್‌ನಲ್ಲಿ ಗೋದಾವರಿ ತಂಡ ಪ್ರಥಮ, ನೇತ್ರಾವತಿ ತಂಡ ದ್ವಿತೀಯ ಸ್ಥಾನ ಪಡೆಯಿತು. 4X400 ಮೀಟರ್ ರಿಲೇಯಲ್ಲಿ ಸಿಎಆರ್, ಮೌಂಟೆಡ್. 4X100 ಮೀಟರ್ ರಿಲೇಯಲ್ಲಿ ಸಿಎಆರ್, ಎನ್.ಆರ್ ತಂಡ ಕ್ರಮವಾಗಿ ಪ್ರಥಮ, ದ್ವಿತೀಯ ಸ್ಥಾನ ಪಡೆಯಿತು.

ಪ್ರಶಸ್ತಿ ವಿತರಣೆ ಮಾಡಿ ಮಾತನಾಡಿದ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಎಸ್.ಯುಕೇಶ್ ಕುಮಾರ್, ಕ್ರೀಡೆಯು ಶಿಸ್ತು ಮತ್ತು ಸೌಹಾರ್ದತೆ ಮೂಡಿಸುತ್ತದೆ. ಕೆಲಸ ಒತ್ತಡಗಳಿಂದ ಹೊರಬಂದು ಕ್ರೀಡೆಯಲ್ಲಿ ಸಕ್ರಿಯರಾಗುವ ಮೂಲಕ ಕ್ರೀಡಾ ವಿಭಾಗದಲ್ಲಿ ಉನ್ನತ ಸಾಧನೆ ಮಾಡಬಹುದು ಎಂಬುದನ್ನು ಇಲ್ಲಿನ ಕ್ರೀಡಾಪಟುಗಳು ಸಾಧಿಸಿ ತೋರಿಸಿದ್ದಾರೆ ಎಂದರು.


ಸರ್ಕಾರದ ಕೆಲಸ ದೇವರ ಕೆಲಸ ಎಂದು ಭಾವಿಸಿ ಕೆಲಸ ಮಾಡುವವರು ಅದರೊಂದಿಗೆ ತಮ್ಮ ಕುಟುಂಬ ಹಾಗೂ ವೈಯಕ್ತಿಕ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಕೆಲಸದ ಒತ್ತಡದ ನಡುವೆಯೂ ಈ ಎರಡು ಪ್ರಮುಖ ವಿಷಯಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನಿಮ್ಮದು ಎಂದು ಸಲಹೆ ನೀಡಿದರು.

ಅಂತರಾಷ್ಟ್ರೀಯ ಕ್ರೀಡಾಪಟು ಅರ್ಜುನ್ ದೇವಯ್ಯ ತೀತಾಮಾಡ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್.ಬಿಂದುಮಣಿ, ಕೆ.ಎಸ್.ಸುಂದರ್ ರಾಜ್, ಸಿದ್ದನಗೌಡ ಪಾಟೀಲ, ಮಾರುತಿ, ಕುಮಾರಸ್ವಾಮಿ, ನಂದಿನಿ ಉಪಸ್ಥಿತರಿದ್ದರು.

ಅಧಿಕಾರ ಹಸ್ತಾಂತರ ಮಾಡಿ; ಇಲ್ಲ ವಚನಭ್ರಷ್ಟ ಹಣೆಪಟ್ಟಿ ಕಟ್ಟಿಕೊಳ್ಳಿ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಎಂಎಲ್‌ಸಿ ವಿಶ್ವನಾಥ್ ಖಡಕ್ ಮಾತು

- ಸ್ವಾರ್ಥಕ್ಕಾಗಿ ಅಹಿಂದ ನಾಯಕರನ್ನು ಮುಗಿಸಿದರು
- ಮೂಲ ಕಾಂಗ್ರೆಸ್ಸಿಗರನ್ನು ಮೂಲೆಗುಂಪು ಮಾಡಿದರು
- ರಾಜಕೀಯ ಗುರು ಹೆಚ್.ಡಿ.ದೇವೇಗೌಡರ ಬಗ್ಗೆ ಒಂದು ಚೂರೂ ಕೃತಜ್ಞತೆ ಇಲ್ಲ
- ಕಾಂಗ್ರೆಸ್ಸಿಗರನ್ನು ಮೆಚ್ಚಿಸಲು ಬಿಜೆಪಿಗೆ ಸುಮ್ಮನೆ ಬಾಯಿಗೆ ಬಂದಂತೆ ಬೈಯುತ್ತಾರೆ



ಮೈಸೂರು, ನ.28(ಬಿಎಲ್ ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಗೌರವಯುತವಾಗಿ ಅಧಿಕಾರ ಹಸ್ತಾಂತರ ಮಾಡಬೇಕು, ಇಲ್ಲವೆಂದರೆ ವಚನ ಭ್ರಷ್ಟ, ಅಧಿಕಾರಕ್ಕಾಗಿ ಹಪಾಹಪಿಸುವ ರಾಜಕಾರಣಿ ಎಂಬ ಹೆಸರು ಅವರ ಇತಿಹಾಸ ಪುಟಕ್ಕೆ ಸೇರುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಎಚ್ಚರಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿನ ರಾಜ್ಯ ರಾಜಕೀಯದ ವಿಷಮ ಪರಿಸ್ಥಿತಿಗೆ ಸಿದ್ದರಾಮಯ್ಯ ಅವರೇ ನೇರ ಕಾರಣ. ಅಧಿಕಾರ ಹಸ್ತಾಂತರ ಮಾಡಿದ್ದರೆ ಇಂತಹ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಅವರನ್ನು ಅಹಿಂದ ನಾಯಕ, ಅವರು ಇಲ್ಲದಿದ್ದರೆ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ ಎಂದು ಅವರ ಭಟ್ಟಂಗಿಗಳು ಹಾಡಿ ಹೊಗಳುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಅಹಿಂದ ನಾಯಕರನ್ನು ಮುಗಿಸಿದರು. ಬೀದಿಯಲ್ಲಿ ಬಿದ್ದ ಇವರನ್ನು ಕಾಂಗ್ರೆಸ್‌ಗೆ ಕರೆ ತಂದು, ಮೂಲ ಕಾಂಗ್ರೆಸ್ಸಿಗರನ್ನು ಮರೆ ಮಾಡಿ ತಮ್ಮ ಪಾರುಪತ್ಯ ಸ್ಥಾಪಿಸಿದರು ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

1978ರ ಲೋಕಸಭಾ ಚುನಾವಣೆಯಲ್ಲಿ ಕೇವಲ ಐದು ಸಾವಿರ ಮತ ಪಡೆದರು. 1983ರಲ್ಲಿ ಕೆಂಪೀರೇಗೌಡ, ಜಿ.ಟಿ.ದೇವೇಗೌಡ ಸೇರಿದಂತೆ ಹಲವರು ಸಿದ್ದರಾಮಯ್ಯ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಿಲ್ಲಿಸಿ ಗೆಲ್ಲಿಸಿದರು. ತರುವಾಯ 1994ರಲ್ಲಿ ಮುಖ್ಯಮಂತ್ರಿಗಳಾದ ಹೆಚ್.ಡಿ.ದೇವೇಗೌಡರು, ಇವರನ್ನು ಹಣಕಾಸು ಸಚಿವರನ್ನಾಗಿ ಮಾಡಿಕೊಂಡರು. ಈ ಮೂಲಕ ಇಡೀ ಒಕ್ಕಲಿಗ ಸಮುದಾಯ ಅವರ ಬೆಳವಣಿಗೆಗೆ ಕಾರಣವಾಯಿತು. ಆದರೆ ಈಗ ಅದೇ ಒಕ್ಕಲಿಗ ಸಮುದಾಯದ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ನೀಡದೆ ದ್ರೋಹ ಬಗೆಯುತ್ತಿದ್ದಾರೆ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಕಾಂಗ್ರೆಸ್‌ಸೇರಲು ಡಿಕೆಶಿಯೂ ಕಾರಣ: ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ ಆಯೋಜಿಸಿದಾಗ ಹೆಚ್.ಡಿ.ದೇವೇಗೌಡರು ಆಕ್ಷೇಪಿಸಿದರು. ಆದರೂ ಅಹಿಂದ ಸಮಾವೇಶ ಮಾಡಿದಾಗ ಸಹಜವಾಗಿ ಹೆಚ್.ಡಿ. ದೇವೇಗೌಡರು ಜೆಡಿಎಸ್‌ನಿಂದ ವಜಾ ಮಾಡಿದರು. ತರುವಾಯ ರಾಜಕಾರಣದ ದಾರಿ ಕಾಣದೆ ಕತ್ತಲಲ್ಲಿ ಇದ್ದ ಸಿದ್ದರಾಮಯ್ಯ ಅವರನ್ನು ನಾನು ಸೇರಿದಂತೆ ಬಹಳಷ್ಟು ಜನರು ಕಾಂಗ್ರೆಸ್‌ಗೆ ಕರೆ ತಂದೆವು. ಕಾಂಗ್ರೆಸ್ ಸೇರಿಸಿಕೊಳ್ಳುವಂತೆ ಸಿದ್ದರಾಮಯ್ಯ ಪರ ಡಿ.ಕೆ.ಶಿವಕುಮಾರ್ ಕೂಡ ಸೋನಿಯಾ ಗಾಂಧಿಗೆ ಐದು ಪುಟಗಳ ಪತ್ರ ಬರೆದಿದ್ದರು. ಆದರೆ ಈಗ ಕಾಂಗ್ರೆಸ್ ಮನೆಯನ್ನೆ ಆವರಿಸಿಕೊಂಡಿರುವ ಸಿದ್ದರಾಮಯ್ಯ ತಮಗೆ ಸಹಾಯ ಮಾಡಿದ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡದೆ ಆಟ ಆಡಿಸುತ್ತಿದ್ದಾರೆ ಎಂದು ಆಪಾದಿಸಿದರು.

ಪ್ರತಾಪ್ ಸಿಂಹ ಬೆಂಬಲಿಸಿ ನನ್ನ ಸೋಲಿಸಿದರು: ತಮ್ಮ ರಾಜಕೀಯ ಬೆಳವಣಿಗೆಗೆ ಕಾರಣಕರ್ತರಾದ ಹೆಚ್.ಡಿ.ದೇವೇಗೌಡರ ಬಗ್ಗೆ ಕೃತಜ್ಞತೆ ತೋರಲಿಲ್ಲ. ಕಳೆದ ಹತ್ತು ವರ್ಷದ ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಮೈಸೂರಿನಿಂದ ಸ್ಪರ್ಧೆ ಮಾಡಲು ಹೆಚ್.ಡಿ.ದೇವೇಗೌಡರು ಗೋಗರೆದರೂ ಸ್ಪಂದಿಸಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ಪ್ರತಾಪ್ ಸಿಂಹನಿಗೆ ಬೆಂಬಲ ನೀಡಿ ನನ್ನನ್ನು ಸೋಲಿಸಿದರು. ಕೊರಟಗೆರೆಯಲ್ಲಿ ಡಾ.ಜಿ.ಪರಮೇಶ್ವರ್ ಸೋಲಿಸಿದರು. ಈ ಮೂಲಕ ತಮ್ಮ ರಾಜಕೀಯ ಬೆಳವಣಿಗೆಗೆ ಕಾರಣರಾದ ಎಲ್ಲರನ್ನು ಮುಗಿಸಿ ಏಕ ಚಕ್ರಾಧಿಪತಿಯಂತೆ ಮೆರೆಯುತ್ತಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮೆಚ್ಚಿಸಲು ಬಿಜೆಪಿ ಟೀಕೆ: ಕಾಂಗ್ರೆಸ್‌ನವರನ್ನು ಮೆಚ್ಚಿಸಲು ಸುಮ್ಮನೆ ಬಿಜೆಪಿಯನ್ನು ಬೈಯ್ಯುತ್ತಾರೆ ಅಷ್ಟೆ. ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಅವರೇ ನೇರ ಕಾರಣಕರ್ತರು. ಯಡಿಯೂರಪ್ಪ, ವಿಜಯೇಂದ್ರ ಸೇರಿದಂತೆ ಇತರರೊಡನೆ ಒಳ ಒಪ್ಪಂದ ಮಾಡಿಕೊಂಡು ತಮ್ಮ ಶಿಷ್ಯ ಶಾಸಕರನ್ನು ಕಾಂಗ್ರೆಸ್‌ನಿಂದ ಬಿಜೆಪಿಗೆ ಕಳುಹಿಸಿದರು. ಈ ಮೂಲಕ ಬಿಜೆಪಿ ಸರ್ಕಾರ ಅಧಿಕಾರಕ್ಕೆ ದಾರಿ ಮಾಡಿಕೊಟ್ಟರು. ಈಗಲೂ ಅವರ ಮೇಲಿನ ಕೃತಜ್ಞತೆಗೆ ಅವರಿಗೆಲ್ಲಾ ಮಂತ್ರಿ ಸ್ಥಾನ ನೀಡಿದ್ದಾರೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಕೂಡ ಕಿಂಚಿತ್ತೂ ಪ್ರೀತಿ ಇಲ್ಲ. ಅಧಿಕಾರ ಸಿಗುತ್ತದೆ ಎಂದಾದರೆ ಎಂತಹ ದಾರಿಯಲ್ಲಿ ಸಾಗಲು ಅವರು ಸಿದ್ಧರಿದ್ದಾರೆ ಎಂದು ಗೇಲಿ ಮಾಡಿದರು.

ಡಿಕೆಗೆ ವಚನ ನೀಡಿಲ್ಲವೆಂದು ಚಾಮುಂಡೇಶ್ವರಿ ಮುಂದೆ ಆಣೆ ಮಾಡಲಿ

ಸಿದ್ದರಾಮಯ್ಯ ಅವರು ನೈಜ ರಾಜಕಾರಣಿಯೇ ಆಗಿದ್ದರೆ ಡಿ.ಕೆ.ಶಿವಕುಮಾರ್‌ಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿ. ಇಲ್ಲವೆಂದರೆ ನಾನು ಡಿ.ಕೆ.ಶಿವಕುಮಾರ್‌ಗೆ ಯಾವುದೇ ಮಾತು ಕೊಟ್ಟಿಲ್ಲ ಎಂದು ಚಾಮುಂಡಿಬೆಟ್ಟಕ್ಕೆ ಬಂದು ನಾಡದೇವತೆ ತಾಯಿ ಚಾಮುಂಡೇಶ್ವರಿ ಮುಂದೆ ಪ್ರಮಾಣ ಮಾಡಲಿ ಎಂದು ವಿಶ್ವನಾಥ್ ಸವಾಲು ಹಾಕಿದರು.

ನಾನು ನುಡಿದಂತೆ ನಡೆಯುತ್ತೇನೆ, ವರ್ಚಸ್ವಿ ನಾಯಕ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಾರೆ. ನುಡಿದಂತೆ ನಡೆಯುವ ವರ್ಚಸ್ವಿ ನಾಯಕನ ಗುಣಲಕ್ಷಣ ಇದೇನಾ ಎಂದು ಪ್ರಶ್ನಿಸಿದರು. ನಿಜವಾಗಿಯೂ ಇವರಿಗೆ ವರ್ಚಸ್ಸು ಇದ್ದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲುತ್ತಿರಲಿಲ್ಲ, ಬಾದಾಮಿಯಲ್ಲಿ ಕೇವಲ ಎರಡೂವರೆ ಸಾವಿರ ಮತದಿಂದ ಗೆಲ್ಲುತ್ತಿರಲಿಲ್ಲ ಎಂದು ಹೇಳಿದರು.

ಇನ್ನು ಕೆಲವು ದಿನಗಳಿದ್ದರೆ ಡಿ.ದೇವರಾಜ ಅರಸ್ ಅವರ ರೆಕಾರ್ಡ್ ಅನ್ನು ಬ್ರೇಕ್ ಮಾಡುತ್ತಾರಂತೆ. ದೇವರಾಜ ಅರಸು ನಿರಂತರವಾಗಿ ಎಂಟು ವರ್ಷ ಮುಖ್ಯಮಂತ್ರಿಯಾಗಿದ್ದರು. ಹೀಗಿರುವಾಗ ಯಾವುದೇ ಕಾರಣಕ್ಕೂ ದೇವರಾಜ ಅರಸು ಅವರ ದಾಖಲೆ ಮುರಿಯಲು ಇವರಿಗೆ ಸಾಧ್ಯವಿಲ್ಲ ಹೇಳಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನರು ಕಾಂಗ್ರೆಸ್‌ಗೆ ಬಹುಮತ ನೀಡಿದ್ದಾರೆಯೇ ಹೊರತು, ಸಿದ್ದರಾಮಯ್ಯ ಅವರಿಗಲ್ಲ. ಈ ಹಿನ್ನೆಲೆ ಸಿದ್ದರಾಮಯ್ಯ ಕೂಡಲೇ ಸಿಎಂ ಸ್ಥಾನ ಬಿಟ್ಟು ಹೊರ ಬರಬೇಕು ಎಂದು ವಿಶ್ವನಾಥ್ ಸಲಹೆ ನೀಡಿದರು.

ಆದಿ ಚುಂಚನಗಿರಿ ಸ್ವಾಮೀಜಿ ಬಗ್ಗೆ ಪ್ರಜ್ಞೆ ಇಟ್ಟುಕೊಂಡು ಮಾತನಾಡಲಿ

ಸಿಎಂ ಸಿದ್ದರಾಮಯ್ಯ ಪುತ್ರ ವಿಧಾನ ಪರಿಷತ್ ಸದಸ್ಯ ಯತೀಂದ್ರ ಅವರು ಇನ್ನು ಮುಂದಾದರೂ ಆದಿಚುಂಚನಗಿರಿ ಸ್ವಾಮೀಜಿ ಬಗ್ಗೆ ಪಜ್ಞೆ ಇಟ್ಟುಕೊಂಡು ಮಾತನಾಡಲಿ ಎಂದು ವಿಶ್ವನಾಥ್ ಎಚ್ಚರಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನೀಡಿದ ಹೇಳಿಕೆಗೆ ಯತೀಂದ್ರ ಅವರು ಹಗುರವಾಗಿ ಮಾತನಾಡಿದ್ದಾರೆ. ಇದು ಅವರಿಗೆ ಶೋಭೆ ತರುವುದಿಲ್ಲ ಎಂದು ಕಿಡಿಕಾರಿದರು.

ರಾಜಕೀಯದಲ್ಲಿ ನೀವು ಇನ್ನೂ ಯುವಕರಿದ್ದೀರಾ. ಒಬ್ಬ ಸ್ವಾಮೀಜಿ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಬೇಡಿ. ಇನ್ನು ಮುಂದಾದರೂ ಮಾತಿನಲ್ಲಿ ಹಿಡಿತ ಇಟ್ಟುಕೊಂಡು ಮಾತನಾಡಿ ಎಂದು ಯತೀಂದ್ರಗೆ ಕಿವಿಮಾತು ಹೇಳಿದರು.

ಸಿದ್ದರಾಮಯ್ಯ ಅವರ ವಚನ ಭ್ರಷ್ಟ ವರ್ತನೆಯಿಂದ ಜಾತಿಗಳ ನಡುವೆ ವೈಮನಸ್ಸು ಉಂಟಾಗಿದೆ. ರಾಜಕೀಯ ಪಕ್ಷಗಳಲ್ಲಿ ಬೇಕಾದರೆ ಸಂಘರ್ಷವಾಗಲಿ, ಆದರೆ ಯಾವುದೇ ಕಾರಣಕ್ಕೂ ಜಾತಿಗಳ ನಡುವೆ ವೈಮನಸು ಬರಬಾರದು. ಇಂತಹ ಬೆಳವಣಿಗೆಗೆ ಕಾರಣರಾಗದೆ, ಸಿದ್ದರಾಮಯ್ಯ ಕೂಡಲೇ ಅಧಿಕಾರ ಹಸ್ತಾಂತರ ಮಾಡಬೇಕು ಎಂದು ವಿಶ್ವನಾಥ್ ಹೇಳಿದರು.

ಯೋಗವಿದ್ದರೆ ಡಿ.ಕೆ.ಶಿವಕುಮಾರ್ ಸಿಎಂ ಆಗುವುದನ್ನು ಯಾರೂ ತಪ್ಪಿಸಲಾಗದು

ಆದರೆ ಯೋಗ್ಯತೆ ಇದ್ದರೆ ಮಾತ್ರವೇ ಒಳ್ಳೆಯ ಮುಖ್ಯಮಂತ್ರಿ ಆಗಬಹುದು; ಸಿ.ಟಿ.ರವಿ

ಮೈಸೂರು, ನ.28(ಎಸ್‌ಬಿಡಿ)– ಯೋಗ ಇದ್ದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಆದರೆ ಯೋಗ್ಯತೆ ಇದ್ದರೆ ಒಳ್ಳೆಯ ಮುಖ್ಯಮಂತ್ರಿಯಾಗಬಹುದು ಎಂದು ಬಿಜೆಪಿ ನಾಯಕ ಸಿ.ಟಿ.ರವಿ ಮಾರ್ಮಿಕವಾಗಿ ಹೇಳಿದರು.

ಮೈಸೂರಿನಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವುದಕ್ಕೇ ತಿಣುಕಾಡಬೇಕು. ಇನ್ನು ಮುಖ್ಯಮಂತ್ರಿ ಸ್ಥಾನವನ್ನು ಸುಲಭವಾಗಿ ಬಿಟ್ಟುಕೊಡ್ತೋಕೆ ಇವರೇನು ಪುಣ್ಯಕೋಟಿ ವಂಶಸ್ಥರಾ?. ನಮ್ಮದು ಪುಣ್ಯಕೋಟಿಯ ನಾಡು ಎಂದ ಮಾತ್ರಕ್ಕೆ ಇಲ್ಲಿರುವವರೆಲ್ಲಾ ಅದೇ ವಂಶಸ್ಥರಲ್ಲ. ಈಗ ಪುಣ್ಯಕೋಟಿಯನ್ನೇ ಕೊಂದು ತಿಂದು ಬದುಕುವುದನ್ನೇ ಸಮರ್ಥನೆ ಮಾಡಿಕೊಳ್ಳುವ ಜನರಿಂದ ಏನು ನಿರೀಕ್ಷಿಸಲು ಸಾಧ್ಯ ಮಾತಿಗೆ ತಪ್ಪಾರದು ಎಂಬುದನ್ನು ಮಾತಿಗೆ ಹೇಳ ಬಹುದು. ಆದರೆ ಆ ರೀತಿ ನಡೆದುಕೊಳ್ಳುವವರು ಎಷ್ಟು ಜನ ಇದ್ದಾರೆ. ಅವರಿಗೆ ಯೋಗ ಇದ್ದರೆ ಯಾರೂ ತಪ್ಪಿಸಲು ಸಾಧ್ಯವಿಲ್ಲ. ಆದರೆ ಯೋಗ್ಯತೆ ಇದ್ದರೆ ಒಳ್ಳೆಯ ಮುಖ್ಯಮಂತ್ರಿಯಾಗಬಹುದು ಎಂದರು.



ಯಾರೇ ಆದರೂ ಒಂದೇ: ಮೆಕ್ಕೆ ಜೋಳ ಖರೀದಿ ಮಾಡಿಲ್ಲ, ಅತಿವೃಷ್ಟಿ–ಅನಾವೃಷ್ಟಿ ನಷ್ಟಕ್ಕೆ ಪರಿಹಾರ ನೀಡಿಲ್ಲ, ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡಿಲ್ಲ, ರಸ್ತೆ ಗುಂಡಿ ಮುಚ್ಚಿಲ್ಲ, ರೈತರ ಆತ್ಮಹತ್ಯೆಯಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ, ಕಾಂಗ್ರೆಸ್‌ನ ಭ್ರಷ್ಟಾಚಾರ ವಿಪರೀತವಾಗಿದೆ, ಸರ್ಕಾರಿ ನೌಕರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆ ನಮ್ಮ ಕಾಳಜಿಯೇ ಹೊರತು, ಯಾರು ಮುಖ್ಯಮಂತ್ರಿ ಆಗುತ್ತಾರೆ ಎಂಬುದಲ್ಲ. ಯಾರೇ ಮುಖ್ಯಮಂತ್ರಿಯಾದರೂ ಕಾಂಗ್ರೆಸ್‌ನಿಂದ ಒಳ್ಳೆಯದನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಇದೇ ಭ್ರಷ್ಟಾಚಾರ, ಜನವಿರೋಧಿ ನೀತಿ ಮುಂದುವರೆಯುತ್ತದೆ ಎಂದಾದರೆ ಸಿಎಂ ಯಾರಾದರೇನು ಎಂದು ಪ್ರಶ್ನಿಸಿದರು.

> ನಾನು ರಾಜಕೀಯ ಕ್ಷೇತ್ರದಲ್ಲಿ ಇದ್ದೀನಿ. ಕೆಲವು ಸತ್ಯವನ್ನು ಮಾತನಾಡಿದರೆ ಅಪಾರ್ಥವಾಗುತ್ತದೆ. ನೀತಿ ದೊಡ್ಡದೋ ಜಾತಿ ದೊಡ್ಡದೋ ಸಮಾಜ ತೀರ್ಮಾನ ಮಾಡಬೇಕು. ಈ ಕಲಿಯುಗ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ನೀತಿಗಿಂತ ಅವರವರ ಜಾತಿಯೇ ದೊಡ್ಡದಾಗಿದೆ. ಆದರೆ ಜಾತಿ ಅಲ್ಲ ನೀತಿ ದೊಡ್ಡದು ಎಂಬುದನ್ನು ಧರ್ಮ ಹೇಳುತ್ತದೆ. ಧರ್ಮ ಗುರುಗಳು ತಮ್ಮ ಸಮುದಾಯದ ನಾಯಕರ ಪರ ನಿಲ್ಲುವುದರ ಬಗ್ಗೆ ರಾಜಕೀಯ ಕ್ಷೇತ್ರದವನಾಗಿ ಪ್ರತಿಕ್ರಿಯಿಸುವುದು ಸೂಕ್ತವಲ್ಲ. ಆದರೆ ನಮ್ಮ ಧರ್ಮ ಕರ್ಮ ಆಧಾರಿತವಾದ ಬದುಕನ್ನು ಅವಲಂಬಿಸಿದೆ. ಇಲ್ಲಿ ಒಳ್ಳೆಯ ಕೆಲಸ ಮಾಡಿದವರಿಗೆ ಮಾತ್ರ ಸತ್ತ ಮೇಲೂ ಗೌರವ ಸಿಗುತ್ತದೆ. ಕೆಟ್ಟ ಕೆಲಸ ಮಾಡುವವರು ಬದುಕಿದ್ದಾಗಲೂ, ಸತ್ತಾಗಲೂ ಗೌರವ ಸಿಗುವುದಿಲ್ಲ.
> -ಸಿ.ಟಿ.ರವಿ, ಬಿಜೆಪಿ ಮುಖಂಡ

ಸಾಧನೆ ಏನೆಂದು ಹೇಳುತ್ತಾರೆ?: ಅತೀ ಹೆಚ್ಚು ಬಾರಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿಗಳು, ತಮ್ಮ ಸಾಧನೆ ಏನೆಂದು ಹೇಳುತ್ತಾರೆ?. ಭ್ರಷ್ಟಾಚಾರ, ಬೆಲೆ ಏರಿಕೆ, ಸಮಾಜ ಒಡೆಯುವುದನ್ನೇ ಅವರ ಸಾಧನೆ ಎನ್ನಲಾಗುತ್ತದೆಯೇ?. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರೇಳಬೇಕಾದರೆ ಎಚ್ಚರವಿರಬೇಕು. ಒಡೆಯರ್ ಹಾದಿಯಲ್ಲಿ ಸಾಧಿಸಿ ತೋರಿಸಿದ್ದರೆ ಯೋಗ್ಯತೆ ಇರುತ್ತದೆ ಎಂದು ಸಿದ್ದರಾಮಯ್ಯ ಅವರಿಗೆ ಚಾಟಿ ಬೀಸಿದರು.

ಜನರ ನಡುವಿನ ಒಪ್ಪಂದವಲ್ಲ: ಊಹಾಪೋಹ ಮಾತ್ರ ಚರ್ಚೆಯಾಗುತ್ತಿದೆ. ಮಾತುಕತೆ ಏನಾಗಿದೆ ಎಂಬುದರ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಹೇಳುತ್ತಿಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಮಾರ್ಮಿಕವಾಗಿ ಮಾತನಾಡುತ್ತಿದ್ದಾರೆ. ಹಾಗಾಗಿ ಜನತೆಗೆ ಈ ಬಗ್ಗೆ ಸ್ಪಷ್ಟತೆ ಇಲ್ಲ. ಒಂದು ತಿಂಗಳಲ್ಲಿ ಗುಂಡಿ ಮುಚ್ಚಿ ಎಂದರು ಆದರೆ ಅದಾಗಿಲ್ಲ, ಭ್ರಷ್ಟಾಚಾರ ನಿಲ್ಲಿಸುತ್ತೇವೆ ಎಂದು ಭ್ರಷ್ಟಾಚಾರದ ಅಂಗಡಿಯನ್ನೇ ತೆರೆದಿದ್ದಾರೆ. ರೈತರ ನೆರವಿಗಿದ್ದೇವೆ ಎಂದು ಅವರನ್ನು ಸಂಕಷ್ಟಕ್ಕೆ ದೂಡಿದ್ದಾರೆ. ಹೀಗೆ ರಾಜ್ಯಕ್ಕೆ ನೀಡಿದ್ದ ಮಾತು ತಪ್ಪಿರುವುದು ನಮ್ಮ ಕಣ್ಮುಂದಿದೆ. ಆದರೆ ಜನರ ನಡುವೆ ಒಪ್ಪಂದವಾಗದ ವಿಚಾರದ ಬಗ್ಗೆ ಸತ್ಯ ತಿಳಿದಿಲ್ಲ. ಏನು ಮಾತು ಕೊಟ್ಟಿದ್ದರು ಎಂದು ಸಿದ್ದರಾಮಯ್ಯ, ಡಿಕೆಶಿ, ಇಲ್ಲವೇ ಮಲ್ಲಿಕಾರ್ಜುನ ಖರ್ಗೆಯವರಾದರೂ ಹೇಳಬೇಕು ಎಂದರು.

ಸನಾತನ ಧರ್ಮ ಅರಿತಿಲ್ಲ: ಮುಖ್ಯಮಂತ್ರಿಗಳು ಸನಾತನ ಧರ್ಮದಿಂದ ಸಂವಿಧಾನಕ್ಕೆ ಅಪಾಯವಿದೆ ಎಂದಿದ್ದಾರೆ. ಅವರಿಗೆ ಸನಾತನದ ಧರ್ಮ ಅರ್ಥವೇ ಆಗಿಲ್ಲ. ಸನಾತನ ಧರ್ಮ ಸತ್ಯ, ಪ್ರಕೃತಿ, ಬಹುತ್ವ ಕಾಲ ಕಾಲಕ್ಕೆ ಆಗುವ ಬದಲಾವಣೆಯ ಜೊತೆಗಿದೆ ರಿಲೀಜಿಯನ್ ಹಾಗೂ ಧರ್ಮ ಒಂದೇ ಅಲ್ಲ ರಿಲೀಜಿಯನ್ ಎನ್ನುವುದು ಒಂದು ದೇವರು, ಒಂದು ಪುಸ್ತಕದ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಸನಾತನ ಧರ್ಮ ಸೃಷ್ಟಿಯ ಜೊತೆಗೆ ಅವಲಂಬಿತವಾಗಿದೆ. ಅರ್ಥವಾಗದೆ ಏನೇನೋ ಹೇಳುತ್ತಿದ್ದೀರಿ. ಬಾಂಬ್ ಇಡುತ್ತಿರುವವರಿಂದ ಸಂವಿಧಾನಕ್ಕೆ ಅಪಾಯವಿದೆಯೇ ಹೊರತು ಸನಾತನ ಧರ್ಮದಿಂದಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ತಿರುಗೇಟು ನೀಡಿದರು.

ಕೆಎಂಎಫ್ ಮೂಲಕ 50 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿ

ಬೆಂಗಳೂರು, ನ.28– ರಾಜ್ಯ ಸರ್ಕಾರವು ರೈತರ ಹಿತದೃಷ್ಟಿಯಿಂದ ಮಹತ್ವದ ನಿರ್ಧಾರ ಕೈಗೊಳ್ಳುವ ಮೂಲಕ ರಾಜ್ಯದ ರೈತರಿಗೆ ಭರ್ಜರಿ ಗುಡ್‌ನ್ಯೂಸ್ ನೀಡಿದೆ. ಮಾರುಕಟ್ಟೆಯಲ್ಲಿನ ಬೆಲೆ ಇಳಿಕೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲು, ಕೆಎಂಎಫ್ ಮೂಲಕ ಬೃಹತ್ ಪ್ರಮಾಣದಲ್ಲಿ ಮೆಕ್ಕೆಜೋಳ ಖರೀದಿಸಲು ನಿರ್ಧರಿಸಲಾಗಿದೆ.

ಕೆಎಂಎಫ್ ಡಿ.1 ರಿಂದ ರಾಜ್ಯದಾದ್ಯಂತ 50,000 ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ನೇರವಾಗಿ ರೈತರಿಂದಲೇ ಖರೀದಿಸಲಿದೆ ಎಂದು ಕೆಎಂಎಫ್ ಎಂಡಿ ಶಿವಸ್ವಾಮಿ ಮಾಹಿತಿ ನೀಡಿದ್ದಾರೆ. ಈ ಖರೀದಿಗೆ ಪ್ರತಿ ಟನ್‌ಗೆ ರೂ. 2,400 ದರವನ್ನು ನಿಗದಿಪಡಿಸಲಾಗಿದೆ. ಇದು ಕನಿಷ್ಠ ಬೆಂಬಲ ಬೆಲೆ ದರದಲ್ಲಿ ನಡೆಯುತ್ತಿದ್ದು, ಇದರಿಂದ ರೈತರಿಗೆ ಉತ್ತಮ ಬೆಲೆ ಸಿಗುವ ನಿರೀಕ್ಷೆ ಇದೆ. ಗುಣಮಟ್ಟದ ಆಧಾರದ ಮೇಲೆ ದರದಲ್ಲಿ ಅಲ್ಪ ವ್ಯತ್ಯಾಸವಿರಬಹುದು, ಆದರೆ ಮೆಕ್ಕೆಜೋಳದ ತೇವಾಂಶವು ಕಡ್ಡಾಯವಾಗಿ 14 ಡಿಗ್ರಿ ಇರುವಂತೆ ನೋಡಿಕೊಳ್ಳಬೇಕು. ಪ್ರತಿಯೊಬ್ಬ ರೈತರಿಂದ ಗರಿಷ್ಠ 25 ಟನ್ ಮೆಕ್ಕೆಜೋಳವನ್ನು ಮಾತ್ರ ಖರೀದಿಸಲಾಗುತ್ತದೆ. ಈ ಹಿಂದೆ ಟೆಂಡರ್ ಮೂಲಕ ರೂ.2,150 ರಿಂದ 2,250 ದರದಲ್ಲಿ ಖರೀದಿಸಲಾಗುತ್ತಿತ್ತು. ಆದರೆ, ಸರ್ಕಾರದ ಸೂಚನೆಯಂತೆ ಈ ಬಾರಿ ದರವನ್ನು ಹೆಚ್ಚಿಸಲಾಗಿದೆ.

ಮೆಕ್ಕೆಜೋಳ ಮಾರಾಟ ಮಾಡಲು ಬಯಸುವ ರೈತರು ಮೊದಲು ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ. ಕೃಷಿ ಇಲಾಖೆ, ಇ–ಗವರ್ನೆನ್ಸ್, ಮತ್ತು ಎನ್‌ಐಸಿ ಮೂಲಕ ರೈತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ರೈತರಿಗೆ ಖರೀದಿ ಕೇಂದ್ರಕ್ಕೆ ಬರುವ ಕುರಿತು ಎಸ್‌ಎಂಎಸ್ ಮೂಲಕ ಮಾಹಿತಿ ಕಳುಹಿಸಲಾಗುತ್ತದೆ. ಈ ಸಂದೇಶ ಬಂದ ನಂತರ ರೈತರು ಗೊತ್ತುಪಡಿಸಿದ ಖರೀದಿ ಕೇಂದ್ರದಲ್ಲಿ ತಮ್ಮ ಮೆಕ್ಕೆಜೋಳವನ್ನು ಮಾರಾಟ ಮಾಡಬೇಕು.

ಖರೀದಿ ಪ್ರಕ್ರಿಯೆಯನ್ನು ಸುಗಮಗೊಳಿಸಲು ತುಮಕೂರಿನ ಗುಬ್ಬಿ, ಶಿವಮೊಗ್ಗದ ಶಿಕಾರಿಪುರ, ಧಾರವಾಡ, ಹಾಸನ ಮತ್ತು ಬೆಂಗಳೂರಿನ ರಾಜನಕುಂಟೆಯಲ್ಲಿ ಡಿ.1ರಿಂದಲೇ ಖರೀದಿ ಪ್ರಕ್ರಿಯೆ ಆರಂಭವಾಗಲಿದೆ.

ನಾಳೆ ವಾರ್ಷಿಕ ಮಹಾಸಭೆ

ಮೈಸೂರು, ನ.28– ಮೈಸೂರಿನ ಚಾಮುಂಡಿಪುರಂನಲ್ಲಿರುವ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆಯನ್ನು ನ.30(ಭಾನುವಾರ) ರಂದು ಏರ್ಪಡಿಸಲಾಗಿದ್ದು, ಎಲ್ಲಾ ಸದಸ್ಯರೂ ಭಾಗವಹಿಸುವಂತೆ ಸಂಘದ ಪ್ರಕಟಣೆ ತಿಳಿಸಿದೆ

ಮೈಸೂರು ಮಿತ್ರ ಶನಿವಾರ 29 ನವೆಂಬರ್ 2025

ಮುಂದಿನ ತಿಂಗಳು ಮಳವಳ್ಳಿಗೆ ರಾಷ್ಟ್ರಪತಿ ದ್ರೌಪತಿ ಮುರ್ಮು

ವೇದಿಕೆ, ಹೆಲಿಪ್ಯಾಡ್ ಸೇರಿದಂತೆ ಇತರೆ ಸ್ಥಳ ಪರಿಶೀಲನೆ



ದ್ರೌಪತಿ ಮುರ್ಮು

ಮಳವಳ್ಳಿ, ನ.28– ಡಿಸೆಂಬರ್ ಮೂರನೇ ವಾರ ಪಟ್ಟಣದಲ್ಲಿ ನಡೆಯುವ ಸುತ್ತೂರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪತಿ ಮುರ್ಮು ಆಗಮಿಸುವ ಹಿನ್ನೆಲೆಯಲ್ಲಿ ವೇದಿಕೆ ಸ್ಥಳ, ಹೆಲಿಪ್ಯಾಡ್ ಸೇರಿದಂತೆ ಇತರೆ ಸ್ಥಳಗಳನ್ನು ಕನಕಪುರ ದೇಗುಲ ಮಠದ ಕಿರಿಯ ಚನ್ನಬಸವ ಸ್ವಾಮೀಜಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ, ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಪಟ್ಟಣದ ಶಾಂತಿ ಕಾಲೇಜು ಮುಂಭಾಗ ಪುರಸಭೆಗೆ ಸೇರಿದ 33 ಎಕರೆ ಪ್ರದೇಶದಲ್ಲಿ ಶಿವಯೋಗಿಗಳ 1066ನೇ ಜಯಂತಿ ಕಾರ್ಯಕ್ರಮದ ವೇದಿಕೆ ನಿರ್ಮಾಣ, ದಾಸೋಹ, ಕುಡಿಯುವ ನೀರಿನ ಸೌಲಭ್ಯ, ಆಸನಗಳ ವ್ಯವಸ್ಥೆ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಚರ್ಚೆ ನಡೆಸಿ ಹಲವು ತೀರ್ಮಾನಗಳನ್ನು ಕೈಗೊಂಡರು.

ರಾಷ್ಟ್ರಪತಿ ಆಗಮಿಸುವ ಹಿನ್ನೆಲೆಯಲ್ಲಿ ಹೆಲಿಪ್ಯಾಡ್ ನಿರ್ಮಾಣಕ್ಕೆ ತಾಲೂಕಿನ ಮೈಸೂರು ರಸ್ತೆಯ ಮೂಗನಕೊಪ್ಪಲು ಬಳಿ, ಕೊಳ್ಳೇಗಾಲ ರಸ್ತೆಯ ನಾಗೇಗೌಡನದೊಡ್ಡಿ, ಕುಂದೂರು ವ್ಯಾಪ್ತಿಯ ಪ್ರದೇಶಗಳನ್ನು ಪರಿಶೀಲಿಸಲಾಯಿತು.

ಇದೇ ವೇಳೆ ಮಾಜಿ ಶಾಸಕ ಡಾ.ಕೆ.ಅನ್ನದಾನಿ ಅಧಿಕಾರಿಗಳಿಗೆ ಸಲಹೆಗಳನ್ನು ನೀಡಿದರು. ಈ ಸಂದರ್ಭ ಕನಕಪುರ ದೇಗುಲ ಮಠದ ಕಿರಿಯ ಶ್ರೀಗಳಾದ ಶ್ರೀಚನ್ನಬಸವ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕುಂದೂರು ರಸಸಿದ್ದೇಶ್ವರ ಮಠಾಧ್ಯಕ್ಷ ಶ್ರೀನಂಜುಂಡ ಸ್ವಾಮೀಜಿ, ರಾಗಿಬೊಮ್ಮನಹಳ್ಳಿ ಮಠದ ಶ್ರೀಪ್ರಭು ಸ್ವಾಮೀಜಿ ಇದ್ದರು.

ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಸೀಲ್ದಾರ್ ಲೋಕೇಶ್, ಲೋಕೋಪಯೋಗಿ ಕಾರ್ಯಪಾಲಕ ಇಂಜಿನಿಯರ್ ಹೆಚ್.ಆರ್ ಹರ್ಷ, ಎಇಇ ಸೋಮಶೇಖರ್, ಪುರಸಭೆ ಮುಖ್ಯಾಧಿಕಾರಿ ನಾಗರತ್ನ, ಜಯಂತಿ ಮಹೋತ್ಸವದ ಜೆಎಸ್ಎಸ್ ವಿದ್ಯಾಪೀಠದ ಸಂಚಾಲಕ ನಿರಂಜನ್ ಕುಮಾರ್, ಸದಾಶಿವಮೂರ್ತಿ, ಪಿ.ಎಂ. ಮಹಾದೇವಸ್ವಾಮಿ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು, ಅಖಿಲ ಭಾರತ ವೀರಶೈವ ಮಹಾಸಭಾ ಪದಾಧಿಕಾರಿಗಳು, ಮುಖಂಡರು, ಜಯಂತಿ ಮಹೋತ್ಸವದ ವಿವಿಧ ಸಮಿತಿಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಶಾಸಕ ನರೇಂದ್ರಸ್ವಾಮಿ, ಡಿಸಿ ಸೇರಿದಂತೆ ಗಣ್ಯರು ಸ್ಥಳ ಪರಿಶೀಲಿಸಿದರು.

> ಸುತ್ತೂರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತೋತ್ಸವ ಮಳವಳ್ಳಿಯಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಪುಣ್ಯವಾಗಿದೆ. ವಾರಗಳ ಕಾಲ ನಡೆಯುವ ಜಯಂತಿಗೆ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಎಲ್ಲಾ ಪೂರ್ವ ಸಿದ್ಧತೆಗಳ ಬಗ್ಗೆ ಚರ್ಚೆ ನಡೆಸಿ, ಹಲವು ತೀರ್ಮಾನಗಳನ್ನು ಸ್ವಾಮೀಜಿಗಳ ಮೂಲಕ ಕೈಗೊಳ್ಳಲಾಗುವುದು. –ಪಿ.ಎಂ.ನರೇಂದ್ರಸ್ವಾಮಿ, ಶಾಸಕ.

ಡಿ.11ರಿಂದ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿ





ಮಂಡ್ಯ, ನ.28– ಮಂಡ್ಯ ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ವತಿಯಿಂದ ಡಿ.11ರಿಂದ 14ರವರೆಗೆ ತಾಲೂಕಿನ ವಿ.ಸಿ. ಫಾರಂ ಕೃಷಿ ವಿವಿ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಜೂನಿಯರ್ ಬಾಲಕ ಮತ್ತು ಬಾಲಕಿಯರ ಕಬಡ್ಡಿ ಚಾಂಪಿಯನ್ ಶಿಪ್–ಕೆ.ಎಸ್.ಪುಟ್ಟಣ್ಣಯ್ಯ ಕಪ್–2025 ಪಂದ್ಯಾವಳಿ ನಡೆಯಲಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ 20 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರು ಸೇರಿದಂತೆ ಸುಮಾರು 62 ತಂಡಗಳು ಭಾಗವಹಿಸಲಿದ್ದು, 110 ಪಂದ್ಯಗಳು ನಡೆಯಲಿವೆ. 40 ನಿಮಿಷಗಳ ಆಟಕ್ಕೆ ಅವಕಾಶ ನೀಡಲಾಗಿದೆ ಎಂದು ವಿವರಿಸಿದರು.

ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು, 50 ತಾಂತ್ರಿಕ ಅಧಿಕಾರಿಗಳು, ಪಂದ್ಯಾವಳಿ ಆಯೋಜಕರನ್ನೊಳಗೊಂಡ ಸುಮಾರು 1300 ಮಂದಿಗೆ ವಸತಿ, ಊಟೋಪಚಾರ, ಕ್ರೀಡಾ ಸಮವಸ್ತ್ರ, ನಾಲ್ಕು ಮ್ಯಾಟ್ ಅಂಕಣಗಳು, ಬಹುಮಾನ, ಸಾರಿಗೆ ಹಾಗೂ ಇತರೆ ಮೂಲ ಸೌಲಭ್ಯಗಳನ್ನು ಮಾಡಲಾಗುತ್ತಿದೆ ಎಂದರು.

ಗಣ್ಯರ ವೇದಿಕೆ ಹಾಗೂ 5 ಸಾವಿರ ಮಂದಿ ಕುಳಿತು ಪಂದ್ಯಾವಳಿ ವೀಕ್ಷಿಸಲು 2 ಸಾವಿರ ಚದರ ಅಡಿಯ ಅತ್ಯುತ್ತಮ ದರ್ಜೆಯ ಗ್ಯಾಲರಿ ವ್ಯವಸ್ಥೆ, ಹೆಚ್ಚಿನ ಜನರ ವೀಕ್ಷಣೆಗಾಗಿ ಪ್ರತ್ಯೇಕ ಎಲ್ಇಡಿ ಪರದೆ ವ್ಯವಸ್ಥೆ ಮಾಡಲಾಗಿದ್ದು, ಪಂದ್ಯಾವಳಿಯಲ್ಲಿ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಕರ್ನಾಟಕ ಬಾಲಕ–ಬಾಲಕಿಯರ ಕಬಡ್ಡಿ ತಂಡವನ್ನು ಆಯ್ಕೆ ಮಾಡಲಾಗುತ್ತದೆ ಎಂದರು. ಪಂದ್ಯಾವಳಿ ವ್ಯವಸ್ಥೆಗಳನ್ನು ಸಮರ್ಥವಾಗಿ ನಿರ್ವಹಿಸಲು 200ಕ್ಕೂ ಹೆಚ್ಚು ಮಂದಿಯ ನುರಿತ ಸ್ವಯಂ ಸೇವಕರು, ಸಿಬ್ಬಂದಿಗಳ ತಂಡ ಭಾಗವಹಿಸಲಿದ್ದು, ಸುಮಾರು 50 ಲಕ್ಷಕ್ಕೂ ಹೆಚ್ಚು ವೆಚ್ಚದ ಸುಸಜ್ಜಿತ, ಯೋಜಿತ ಕಾರ್ಯಕ್ರಮ ಮಾಡಲಾಗುವುದು ಎಂದರು.

ಪಂದ್ಯಾವಳಿಯಲ್ಲಿ ಗೆದ್ದ ಬಾಲಕರ ತಂಡಕ್ಕೆ ಪ್ರಥಮ 50 ಸಾವಿರ, ದ್ವಿತೀಯ ಬಹುಮಾನ 30 ಸಾವಿರ, ಸೆಮಿಫೈನಲ್‌ನ ಎರಡು ತಂಡಗಳಿಗೆ ತಲಾ 15 ಸಾವಿರ ಹಾಗೂ ಬಾಲಕಿಯರ ತಂಡಕ್ಕೆ 40 ಸಾವಿರ ಪ್ರಥಮ, 20 ಸಾವಿರ ದ್ವಿತೀಯ, ಸೆಮಿಫೈನಲ್‌ನ 2 ತಂಡಗಳಿಗೆ ತಲಾ 10 ಸಾವಿರ ರೂ., ಟ್ರೋಫಿ ವಿತರಿಸಲಾಗುವುದು. 4 ದಿನಗಳ ಕಾಲ ನಡೆಯುವ ಹಗಲು ಮತ್ತು ರಾತ್ರಿ ಹೊನಲು ಬೆಳಕಿನ ಪಂದ್ಯಾವಳಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಕಲ ಸಿದ್ಧತೆ ಕೈಗೊಳ್ಳಲಾಗುವುದು ಎಂದರು.

ಕರ್ನಾಟಕ ರಾಜ್ಯ ಅಮೆಚೂರ್ ಅಸೋಸಿಯೇಷನ್‌ನ ಆಟಗಾರರು, ಪ್ರೊ. ಕಬಡ್ಡಿ ಆಟಗಾರರು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಆಟಗಾರರು ಆಗಮಿಸಲಿದ್ದಾರೆ. ಜೊತೆಗೆ ಒಂದು ದಿನ ಆರೋಗ್ಯ ಮತ್ತು ಫಿಟ್‌ನೆಸ್‌ಗೆ ಸಂಬಂಧಿಸಿದಂತೆ ಹೆಸರಾಂತ ಫಿಟ್‌ನೆಸ್ ತಜ್ಞರಿಂದ ವಿಚಾರ ಸಂಕಿರಣ ಏರ್ಪಡಿಸಲಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಗೊಂದಲ ಹೈಕಮಾಂಡ್ ನೋಡಿಕೊಳ್ಳುತ್ತದೆ

ಮಂಡ್ಯ: ರಾಜ್ಯದಲ್ಲಿ ಪವರ್ ಶೇರಿಂಗ್ ಬಗ್ಗೆ ನಡೆಯುತ್ತಿರುವ ಗೊಂದಲ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಿಸಿದ್ದು, ಆ ಪಕ್ಷದ ಹೈಕಮಾಂಡ್ ಅದನ್ನು ಬಗೆಹರಿಸಲಿದೆ. ಇದರಲ್ಲಿ ನಮ್ಮ ಪಾತ್ರವೇನೂ ಇಲ್ಲ ಎಂದು ಕಾಂಗ್ರೆಸ್ ಬೆಂಬಲಿತ ಪಕ್ಷೇತರ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಎಂಟತ್ತು ದಿನಗಳಿಂದ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಗೊಂದಲ ಏರ್ಪಟ್ಟಿರುವುದು ಸತ್ಯ. ಆಡಳಿತವನ್ನು ಯಾರು ಚೆನ್ನಾಗಿ ಮಾಡುತ್ತಾರೋ ಅವರು ಮುಂದುವರಿಯಬೇಕು. ಆದರೂ, ಮುಖ್ಯಮಂತ್ರಿ ಮುಂದುವರಿಯಬೇಕೋ ಅಥವಾ ಬದಲಾವಣೆ ಮಾಡಬೇಕೋ ಎಂಬುದನ್ನು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಜೊತೆಗೆ ಆ ಪಕ್ಷದ ಶಾಸಕರೂ ತೀರ್ಮಾನ ಮಾಡುತ್ತಾರೆ ಎಂದರು.

ಕಾಂಗ್ರೆಸ್ ಪಕ್ಷ ನನಗೆ ಬೆಂಬಲ ನೀಡಿದೆ. ಆದರೆ ನಾನು ಆ ಪಕ್ಷದ ಸಿಎಲ್‌ಪಿ ಸದಸ್ಯನೂ ಅಲ್ಲ. ಸದನದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲೇ ನಾನು ಕುಳಿತುಕೊಳ್ಳಬೇಕೇ ಹೊರತು ಕಾಂಗ್ರೆಸ್ ಪಕ್ಷದ ಸದಸ್ಯರ ಸಾಲಿನಲ್ಲಿ ಕುಳಿತುಕೊಳ್ಳಲಾಗದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿರುವುದು ಸತ್ಯ, ನಾನು ಅಭಿವೃದ್ಧಿ ವಿಚಾರದಲ್ಲಿ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ. ಅವರು ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ನಾಯಕತ್ವ ಬದಲಾವಣೆಗೆ ಹೈಕಮಾಂಡ್ ಸೂಚನೆ ಕೊಟ್ಟಿಲ್ಲ



ಮಂಡ್ಯ, ನ.28– ರಾಜ್ಯದಲ್ಲಿ ಸಿಎಂ ಬದಲಾವಣೆ ವಿಚಾರವಾಗಿ ಹೈಕಮಾಂಡ್ ಯಾವ ಸೂಚನೆಯನ್ನು ಸಿದ್ದರಾಮಯ್ಯ ಅವರಿಗೆ ಕೊಟ್ಟಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಯುದ್ದ, ಘರ್ಷಣೆ ಇಲ್ಲ. ಮೀಡಿಯಾದಲ್ಲಿ ಮಾತ್ರ ಈ ಬಗ್ಗೆ ಚರ್ಚೆ ಅಷ್ಟೆ, ನಮ್ಮಲ್ಲಿ ಯಾವುದೇ ಗೊಂದಲವೂ ಇಲ್ಲ. ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಲು ಕೆಲವರು ಕೇಳಿದ್ದಾರೆ. ಹೈಕಮಾಂಡ್ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿದ್ದಾರೆ. ಏನೇ ವಿಚಾರ ಇದ್ದರೂ ಹೈಕಮಾಂಡ್ ಇಬ್ಬರ ಜೊತೆ ಕುಳಿತು ಮಾತನಾಡುತ್ತಾರೆ. ಅಲ್ಲಿಯವರೆಗೆ ಯಾವುದೇ ಗೊಂದಲ ಆಗಬಾರದು ಎಂದರು.

ನಮ್ಮ ಪಕ್ಷದಲ್ಲಿ ಮುಖ್ಯಮಂತ್ರಿ ಯಾರು ಎನ್ನುವುದನ್ನು ತೀರ್ಮಾನ ಮಾಡಬೇಕಾದುದು ನಮ್ಮ ಹೈಕಮಾಂಡ್. ಈ ವಿಚಾರದಲ್ಲಿ ಹೊರಗಿನವರು ಯಾರಿಗೂ ಕಾಮೆಂಟ್ ಮಾಡುವ ಅಧಿಕಾರ ಇಲ್ಲ. ಪಕ್ಷ ಅಂದ ಮೇಲೆ ಎಷ್ಟೋ ಜನ ಮುಖ್ಯಮಂತ್ರಿ ಪದವಿಗೆ ಆಕಾಂಕ್ಷಿತರಿರುತ್ತಾರೆ. ಡಿಕೆಶಿ ಕಡೆಯವರು ಸಿಎಂ ಸ್ಥಾನ ಕೇಳಿದ್ದಾರೆ. ಅದು ದೊಡ್ಡ ವಿಷಯವಲ್ಲ. ಬಿಜೆಪಿ ಇದ್ದಾಗಲು ಇವೆಲ್ಲಾ ನಡೆದಿದೆ. ಹೈಕಮಾಂಡ್ ನಿರ್ಧಾರಕ್ಕೆ ಸಿದ್ದರಾಮಯ್ಯ, ಡಿಕೆಶಿ ಬದ್ಧರಿದ್ದಾರೆ ಎಂದರು.

ಪಕ್ಷದಲ್ಲಿನ ಸಣ್ಣಪುಟ್ಟ ಗೊಂದಲ ಆದಷ್ಟು ಬೇಗ ನಿವಾರಣೆ ಆಗುತ್ತದೆ. ಹೈಕಮಾಂಡ್ ಎಲ್ಲದಕ್ಕೂ ತೆರೆ ಎಳೆಯುತ್ತದೆ. ಎರಡೂವರೆ ವರ್ಷ ಬದಲಾವಣೆ ಬಗ್ಗೆ ಯಾರಿಗೂ ಗೊತ್ತಿಲ್ಲ ಅದರ ಬಗ್ಗೆ ಚರ್ಚೆ ಅವಶ್ಯಕತೆ ಇಲ್ಲ. ಯಾವ ಶಾಸಕರು ಯಾರ ಪರವಾಗಿದ್ದಾರೆ ಅನ್ನೋದನ್ನ ಮೀಡಿಯಾ ಮುಂದೆ ಹೇಳಬಾರದು. ಇದು ನಮ್ಮ ಪಕ್ಷದ ಆಂತರಿಕ ವಿಚಾರ ಎಂದರು.

ಆರತಿ ಉಕ್ಕಡದಲ್ಲಿ ಮಂಗಳಮುಖಿಯರ ಮಾರಾಮಾರಿ

ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್

ಮಂಡ್ಯ, ನ.28– ಶ್ರೀರಂಗಪಟ್ಟಣ ತಾಲೂಕಿನ ಪ್ರಸಿದ್ಧ ದೇವಾಲಯ ಆರತಿ ಉಕ್ಕಡದಮ್ಮ ಆವರಣದಲ್ಲಿ ಮಂಗಳಮುಖಿಯರ 2 ಗುಂಪು ಗಲು ರಂಪಾಟ ಮಾಡಿಕೊಂಡಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಒಂದು ಗುಂಪು ಮತ್ತೊಂದು ಗುಂಪಿನ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಸೆ.29ರಂದು ಆರತಿ ಉಕ್ಕಡದಮ್ಮ ದೇವಾಲಯ ಆವರಣದಲ್ಲಿ ನಡೆದಿರುವ ಹಲ್ಲೆ, ಗಲಾಟೆ ಬಗ್ಗೆ ಒಂದು ಗುಂಪು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಇದುವರೆಗೂ ನ್ಯಾಯ ಸಿಕ್ಕಿಲ್ಲ ಎಂದು ಆರೋಪಿಸಿ ಶುಕ್ರವಾರ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಅಳಲು ತೋಡಿ ಕೊಂಡರು. ಮಂಗಳಮುಖಿಯರ 2 ಗುಂಪುಗಳ ಸದಸ್ಯರ ನಡುವೆ ಅಂದು ಹಣದ ವಿಚಾರಕ್ಕೆ ದೇಗುಲದ ಮುಂದೆ ಕಿತ್ತಾಟ ನಡೆದಿದೆ. ಒಂದು ಗುಂಪು ಮೂವರು ಮಂಗಳಮುಖಿಯರ ಮೇಲೆ ಮನಸೋ ಇಚ್ಛೆ ಹಲ್ಲೆ ನಡೆಸುತ್ತಿರುವ ವಿಡಿಯೋ ಸೆರೆಯಾಗಿದೆ. ಘಟನೆಯಲ್ಲಿ ಅಂದು ಮೂವರು ಮಂಗಳಮುಖಿಯರಿಗೆ ಗಾಯವಾಗಿದೆ ಎಂದು ತಿಳಿಸಿದರು.

ಅಂದು ನಮ್ಮ ತಂಡದ ಮೂವರಿಗೆ ಮೈಮೇಲಿನ ಬಟ್ಟೆ ಹರಿದು, ದೊಣ್ಣೆ, ಕೈಗೆ ಸಿಕ್ಕ ವಸ್ತುವಿನಿಂದ ಇನ್ನೊಂದು ಮಂಗಳಮುಖಿ ಗುಂಪಿನಿಂದ ಹಲ್ಲೆ ನಡೆಸಲಾಗಿದೆ. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರೂ ಇದುವರೆಗೂ ನ್ಯಾಯ ಸಿಕ್ಕಿಲ್ಲ ಎಂದು ಮಂಗಳಮುಖಿಯರಾದ ರಾಧಾ, ಚೈತ್ರ.ಎಂ.ಕೆ ಹಾಗೂ ಚಂದನ ಆರೋಪಿಸಿದರು.



ಮೌನ ಮತ್ತು ತಂಡದವರು ಅಮಾಯಕ ಮಂಗಳಮುಖಿಯರ ಮೇಲೆ ಕೊಲೆ ಸಂಚು ರೂಪಿಸಿದ್ದಾರೆ. ಆರತಿ ಉಕ್ಕಡ ದೇವಸ್ಥಾನಕ್ಕೆ ರಾಧಾ, ಅಪ್ಸರಾ ಮತ್ತು ಸ್ನೇಹಿತರು ಹೋಗಿದ್ದಾಗ ಮೌನ ಮತ್ತು ತಂಡದವರು ಅವರ ಮೇಲೆ ದಾಳಿ ನಡೆಸಿ ಮಾರಣಾಂತಿಕವಾಗಿ ಹಲ್ಲೆ ಮಾಡಿ ಅವರ ಬಳಿ ಇದ್ದ ಚಿನ್ನಾಭರಣ ಕಿತ್ತುಕೊಂಡು ಶ್ರೇಯಾಳ ಪಾರ್ಟ್ನರ್ ಶರತ್ ಎಂಬುವರ ಮೂಲಕ ಮೂವರನ್ನು ಕಿಡ್ನಾಪ್ ಮಾಡಿಸಿ ಕುಂತಿ ಬೆಟ್ಟದ ಬಳಿ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿ ನಂತರ ಪೆಟ್ರೋಲ್ ಸುರಿದು ಹತ್ಯೆಗೈಯಲು ಪ್ರಯತ್ನ ಮಾಡಿದ್ದಾರೆ ಎಂದು ದೂರಿದ ಅವರು, ಹಲ್ಲೆ, ಕಿರುಕುಳ ನೀಡಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮೂರನೇ ಪುಟದಿಂದ

ಅಧಿಕ ಮಹಿಳೆಯರು, ಮಕ್ಕಳಿಗೆ ಅನುಕೂಲ

ಮಹಿಳೆಯರು ಸಬಲರಾದರೆ ಮಾತ್ರ ನಮಗೆ ದೊರೆತಿರುವ ಸ್ವಾತಂತ್ರ್ಯ ಸಾರ್ಥಕವಾಗುತ್ತದೆ. ಸಮಾಜದಲ್ಲಿ ಅಸಮಾನತೆ, ಲಿಂಗ ತಾರತಮ್ಯ ಹೋಗಲಾಡಿಸಬೇಕು. ಈ ವರ್ಷದ ಬಜೆಟ್‌ನಲ್ಲಿ 95,000 ಕೋಟಿ ರೂ.ಗಳನ್ನು ಮಹಿಳಾ ಕಲ್ಯಾಣಕ್ಕಾಗಿ ಮೀಸಲಿಡಲಾಗಿದೆ. ಲಿಂಗ ತಾರತಮ್ಯ ಹೋಗಲಾಡಿಸಲು ಎಲ್ಲಾ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

ಸರ್ಕಾರ ಎಲ್ಲರನ್ನು ಒಳಗೊಂಡ, ಸಾಮಾಜಿಕ ಆರ್ಥಿಕ ಶಕ್ತಿ ನೀಡುತ್ತಿದೆ. ಜಾತಿ, ಲಿಂಗ ಮತ್ತು ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುತ್ತಿಲ್ಲ. ಸಮಗ್ರ ಅಭಿವೃದ್ಧಿ ನಮ್ಮ ಗುರಿ, ಬಡವ ಬಲ್ಲಿದ ಎಂಬ ತಾರತಮ್ಯ ಹೋಗಲಾಡಿಸುವಲ್ಲಿ ಸರ್ಕಾರ ಕಾರ್ಯಪ್ರವೃತ್ತವಾಗಿದೆ.

ಐಸಿಡಿಎಸ್ ಕೇಂದ್ರ ಸರ್ಕಾರದ ಕಾರ್ಯಕ್ರಮವಾದರೂ ರಾಜ್ಯ ಸರ್ಕಾರ ಹೆಚ್ಚಿನ ಅನುದಾನ ಕೊಡುತ್ತಿದೆ. ಕೇಂದ್ರದಿಂದ 2,700 ರೂ. ಬಂದರೆ, ರಾಜ್ಯ ಸರ್ಕಾರ 8,500ರೂ. ಒದಗಿಸುತ್ತಿದೆ. ಇಡೀ ದೇಶದಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರಿಗೆ ಹೆಚ್ಚಿನ ಗೌರವಧನವನ್ನು ಕರ್ನಾಟಕ ಸರ್ಕಾರ ನೀಡುತ್ತಿದೆ.

ದೇಶದಲ್ಲೇ ಕರ್ನಾಟಕ ಮೊದಲು: ಶಕ್ತಿ ಮತ್ತು ಗೃಹಲಕ್ಷ್ಮಿ ಯೋಜನೆ ಜಾರಿಯಾದ ಮೇಲೆ ತಲಾ ಆದಾಯದಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಐಸಿಡಿಎಸ್ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿ ಮಾಡಿರುವ ರಾಜ್ಯಗಳಲ್ಲಿ ದೇಶದಲ್ಲಿಯೇ ಕರ್ನಾಟಕ ಮೊದಲನೇ ಸ್ಥಾನದಲ್ಲಿದೆ. ಮಹಿಳೆಯರಿಗೆ ಶಕ್ತಿ ಯೋಜನೆ ಜಾರಿಯಾದ ಮೇಲೆ ಉದ್ಯೋಗಕ್ಕೆ ಹೋಗುವ ಮಹಿಳೆಯರ ಪಾಲು ಶೇ. 23ರಷ್ಟು ಇದ್ದರೆ, ಗ್ರಾಮೀಣ ಭಾಗದಲ್ಲಿ ಶೇ.21ರಷ್ಟು ಹೆಚ್ಚಾಗಿದೆ.

ಮುಂದಿನ ದಿನಗಳಲ್ಲಿ ಮಕ್ಕಳು, ತಾಯಂದಿರ ಅಪೌಷ್ಟಿಕತೆ ತೊಲಗಿಸಿ ತಾಯಿ ಮತ್ತು ಶಿಶು ಮರಣ ಪ್ರಮಾಣ ಕಡಿಮೆ ಮಾಡಲಾಗುವುದು. ರಾಜ್ಯದ ಒಟ್ಟು 5,000 ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಪ್ರಾರಂಭಿಸಲಾಗಿದೆ, ಮುಂದಿನ ದಿನಗಳಲ್ಲಿ ಈ ತರಗತಿಗಳನ್ನು ಇನ್ನೂ ಹೆಚ್ಚಿನ ಕೇಂದ್ರಗಳಲ್ಲಿ ಪ್ರಾರಂಭಿಸಲಾಗುವುದು ಎಂದರು.

'ಅಕ್ಕಾ ಪಡೆ': ಇದೇ ಸಂದರ್ಭದಲ್ಲಿ ಮಹಿಳೆಯರ ರಕ್ಷಣೆ ಹಾಗೂ ಭದ್ರತೆ ಖಾತ್ರಿಪಡಿಸುವ 'ಅಕ್ಕಾ' ಪಡೆ ಲೋಕಾರ್ಪಣೆಗೊಳಿಸಲಾಯಿತು.

ಸ್ವರ್ಣಲೇಪಿತ ಕನಕನ ಕಿಂಡಿ ಅನಾವರಣ

ಈ ವೇಳೆ ಪ್ರಧಾನಿಯವರಿಗೆ ಭವ್ಯ ಸ್ವಾಗತ ಕೋರಲಾಯಿತು. ಮೋದಿಯವರು ಕೃಷ್ಣ ಮಠದ ಆವರಣವನ್ನು ಪ್ರವೇಶಿಸುತ್ತಿದ್ದಂತೆ ಪೂರ್ಣ ಕುಂಭ ಸ್ವಾಗತ (ಸಾಂಪ್ರದಾಯಿಕ ಗೌರವಗಳೊಂದಿಗೆ ಸ್ವಾಗತ) ನೀಡಲಾಯಿತು.

ಮೋದಿಯವರಿಗೆ ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಒಳಗೊಂಡಿರುವ ಬೆಳ್ಳಿ ಹೊದಿಕೆಯ ತುಳಸಿ ಜಪ ಮಾಲೆ ಮತ್ತು ಮುದ್ರೆಗಳನ್ನು ನೀಡಲಾಯಿತು, (ಇದನ್ನು ಮಾಧ್ವರು ಮತ್ತು ಬ್ರಾಹ್ಮಣ ಸಮುದಾಯಗಳು ದಕ್ಷಿಣ ಭಾರತದಲ್ಲಿ ತಮ್ಮ ದೈನಂದಿನ ಪೂಜಾ ವಿಧಿಗಳಿಗಾಗಿ ಬಳಸುತ್ತಾರೆ). ಬಳಿಕ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದ ಅಂಗವಾಗಿ ಭಗವದ್ಗೀತೆಯ 15ನೇ ಅಧ್ಯಾಯದ ಕೆಲವು ಶ್ಲೋಕಗಳನ್ನು ಪಠಿಸಿದರು.

ಸುಗುಣೇಂದ್ರ ತೀರ್ಥ, ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮತ್ತು ಇತರರ ಜೊತೆಯಲ್ಲಿ, ಪ್ರಧಾನಿ ಮೋದಿ ಸಾಮೂಹಿಕ ಪಠಣದಲ್ಲಿ ಭಾಗವಹಿಸಿ ಶ್ಲೋಕಗಳನ್ನು ಪಠಿಸಿದರು.

ನವಸಂಕಲ್ಪ ಮಂತ್ರ: ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಹಮ್ಮಿಕೊಂಡ ಲಕ್ಷ ಕಂಠ ಗೀತಾ ಪಠಣ ಕಾರ್ಯಕ್ರಮ ದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ನಾಗರಿಕರಿಗೆ 'ನವ ಸಂಕಲ್ಪ' ಮಾಡುವಂತೆ ಮನವಿ ಮಾಡಿದರು. ಎಲ್ಲರೂ ಈ ಒಂಬತ್ತು ಸಂಕಲ್ಪ ಮಾಡಿ; ವರ್ತಮಾನ ಮತ್ತು ಭವಿಷ್ಯಕ್ಕೆ ಇವು ಅಗತ್ಯ ಎಂದು ಒತ್ತಿ ಹೇಳಿದರು.

ಮೊದಲ ಸಂಕಲ್ಪ: ಜಲಸಂರಕ್ಷಣೆ ಮಾಡುವುದು; ಎರಡನೇ ಸಂಕಲ್ಪ: ಮರ ಬೆಳೆಸುವುದು, ತಾಯಿಯ ಹೆಸರಲ್ಲಿ ಒಂದು ಮರ ಅಭಿಯಾನ ಆರಂಭಿಸಿ; ಮೂರನೇ ಸಂಕಲ್ಪ: ಪ್ರತಿಯೊಬ್ಬರೂ ಕನಿಷ್ಠಪಕ್ಷ ಒಬ್ಬ ಬಡವರ ಜೀವನ ಸುಧಾರಿಸಿ; ನಾಲ್ಕನೇ ಸಂಕಲ್ಪ: ಸ್ವದೇಶಿ ಅಳವಡಿಸಿಕೊಳ್ಳಿ. ವೋಕಲ್–ಲೋಕಲ್ ಮಂತ್ರ ನಮ್ಮದಾಗಲಿದೆ; ಐದನೇ ಸಂಕಲ್ಪ: ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳಿ; ಆರನೇ ಸಂಕಲ್ಪ: ಆರೋಗ್ಯ ಪೂರ್ಣ ಜೀವನ ಶೈಲಿ ಅಳವಡಿಸಿಕೊಳ್ಳೋಣ. ಊಟದಲ್ಲಿ ಎಣ್ಣೆ ಕಡಿಮೆ ಮಾಡೋಣ, ಸಿರಿಧಾನ್ಯ ಬಳಸೋಣ; ಏಳನೇ ಸಂಕಲ್ಪ: ಯೋಗ ಅಳವಡಿಸಿಕೊಳ್ಳಿ, ಎಲ್ಲರೂ ಯೋಗಿಗಳಾಗಿ; ಎಂಟನೇ ಸಂಕಲ್ಪ: ಹಸ್ತಪ್ರತಿ ಸಂರಕ್ಷಣೆಗೆ ಸಹಯೋಗ ನೀಡಿ; ಒಂಬತ್ತನೇ ಸಂಕಲ್ಪ: ಕನಿಷ್ಠ ಪಕ್ಷ ದೇಶದ 25 ಪುಣ್ಯ ಕ್ಷೇತ್ರಗಳ ದರ್ಶನ ಮಾಡುತ್ತೇನೆ ಎಂಬ ಸಂಕಲ್ಪ ಮಾಡಿ. 2047 ಅಮೃತ ಕಾಲದ ಗುರಿಯನ್ನು ನನಸಾಗಿಸಲು ಭಾರತೀಯರು ಎಲ್ಲರೂ ತಮ್ಮ ಕರ್ತವ್ಯ ನಿಭಾಯಿಸಬೇಕು. ವಿಕಸಿತ ಕರ್ನಾಟಕ; ವಿಕಸಿತ ಭಾರತ ಸಂಕಲ್ಪ ನಮ್ಮದಾಗಲಿ ಎಂದರು.

ಜೋಳದ ಹೊಲದಲ್ಲಿ ಅಡಗಿದ್ದ ಹುಲಿ ಸೆರೆ



ಸೆರೆ ಸಿಕ್ಕ ಹುಲಿಯನ್ನು ಅಧಿಕಾರಿಗಳು ಪರಿಶೀಲಿಸುತ್ತಿರುವುದು.

> **ಕಾಡಂದಿ, ಜಾನುವಾರು ಬೇಟೆ...**
> ಸೆರೆ ಸಿಕ್ಕಿರುವ ಹುಲಿ ಮೆಕ್ಕೆ ಜೋಳದ ಹೊಲದಲ್ಲಿ ಕಾಡು ಹಂದಿ ಬೇಟೆಯಾಡಿ, ಕಳೆದ ಎರಡು ದಿನಗಳಿಂದ ಬೀಡು ಬಿಟ್ಟಿತ್ತು. ಇದಕ್ಕೂ ಮುನ್ನ ಕಾಡಂಚಿನ ಗ್ರಾಮಗಳಲ್ಲಿ ಜಾನುವಾರುಗಳನ್ನು ಬೇಟೆಯಾಡುತ್ತಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿತ್ತು.

ತರಾಟೆಗೆ ತೆಗೆದುಕೊಂಡಿದ್ದರು.

ಆನೆಗಳ ಬಳಕೆ: ಹುಲಿ 2–3 ಬಾರಿ ದಾಳಿಗೆ ಯತ್ನಿಸಿದ್ದರಿಂದ ಕೂಡಲೇ ಹುಲಿ ಸೆರೆ ಹಿಡಿಯದಿದ್ದರೆ ಹೊಲ, ತೋಟದಲ್ಲಿ ಕೆಲಸ ಮಾಡುವ ರೈತರ ಮೇಲೆರಗಬಹುದೆಂಬ ಎಚ್ಚರಿಕೆಯಿಂದ ಅರಣ್ಯಾಧಿಕಾರಿಗಳು ಗುರುವಾರ ಸಂಜೆ ವೇಳೆಗೆ ದುಬಾರೆ ಕ್ಯಾಂಪ್ ನಿಂದ ಕೂಂಬಿಂಗ್ ಕಾರ್ಯಾಚರಣೆಗೆ ಸುಗ್ರೀವ, ಪ್ರಶಾಂತ, ಹರ್ಷ ಹಾಗೂ ಅಜೇಯ ಆನೆಗಳನ್ನು ಕರೆಸಿಕೊಂಡಿದ್ದರು.

ರಾತ್ರಿಯೇ ಕಾರ್ಯಾಚರಣೆ: ಹುಲಿ ಮೆಕ್ಕೆ ಜೋಳದ ಹೊಲದಲ್ಲೇ ಸುಳಿದಾಡುತ್ತಿರುವುದನ್ನು ಗಮನಿಸಿದ ಅರಣ್ಯ ಸಿಬ್ಬಂದಿ ಮೇಲಾಧಿಕಾರಿಗಳ ಅನುಮತಿ ಪಡೆದು ತಕ್ಷಣ ಕಾರ್ಯಾ ಚರಣೆ ಆರಂಭಿಸಿದರು. ಪಶುವೈದ್ಯರಾದ ಡಾ.ವಾಸಿಂ ಮಿರ್ಜಾ, ಡಾ.ಆದರ್ಶ್, ಗುರಿಕಾರ, ಡಿಆರ್‌ಎಫ್ ರಂಜನ್, ಗುರಿಕಾರ ಅಕ್ರಂ ತಲಾ ಒಂದು ಆನೆ ಏರಿ ರಾತ್ರಿ 9 ಗಂಟೆಯಿಂದಲೇ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದರು. ಈ ವೇಳೆ ಮೆಕ್ಕೆ ಜೋಳ ಹೊಲದಲ್ಲಿ ಅಡಗಿದ್ದ ಹುಲಿಯನ್ನು ಪತ್ತೆ ಹಚ್ಚಲಾ ಯಿತು. ಅಜೇಯ ಆನೆ ಮೇಲೆ ಕುಳಿತಿದ್ದ ಡಿಆರ್‌ಎಫ್‌ಒ ರಂಜನ್ ಹುಲಿಗೆ ಅರ ವಳಿಕೆ ಮದ್ದು ನೀಡುವಲ್ಲಿ ಯಶಸ್ವಿಯಾದರು. ಬಳಿಕ ಹುಲಿ ಮಂಪರಿಗೆ ಜಾರುತ್ತಿದ್ದಂತೆ ಅದನ್ನು ಟೆಂಪೋದಲ್ಲಿದ್ದ ಬೋನ್ ಒಳಗೆ ಇಟ್ಟು, ಪ್ರಥಮ ಚಿಕಿತ್ಸೆ ನೀಡಿ, ಬಳಿಕ ಕೂರ್ಗಳ್ಳಿಯ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಮರಿಗಳಿಗಾಗಿ ಶೋಧ: ತಾಯಿಯನ್ನು ಸೆರೆ ಹಿಡಿದ ಬಳಿಕ ಮರಿಗಳಿಗಾಗಿ ಇಂದು ಬೆಳಗ್ಗೆ ಶೋಧ ಕಾರ್ಯ ಆರಂಭಿಸಲಾ ಯಿತು. ತಾಯಿ ಹುಲಿ ಕಾಣಿಸಿಕೊಂಡ ಮೆಕ್ಕೆ ಜೋಳದ ಹೊಲ ಸೇರಿದಂತೆ ಸುತ್ತಮುತ್ತ ಸಂಜೆವರೆಗೂ ಶೋಧ ಕಾರ್ಯ ನಡೆಸಿದರೂ ಮರಿಗಳ ಸುಳಿವು ಸಿಗಲಿಲ್ಲ. ಆದರೂ ಕೂಂಬಿಂಗ್ ಮುಂದು ವರೆಸಲಾಗಿದ್ದು, ಥರ್ಮಲ್ ಡ್ರೋನ್ ಬಳಸಿ ಪರಿಶೀಲಿಸಲಾಗುತ್ತಿದೆ.

ಕಾರ್ಯಾಚರಣೆಯಲ್ಲಿ ಹುಣಸೂರು ವಿಭಾಗದ ಡಿಸಿಎಫ್ ಮಹಮದ್ ಫಯಾಜುದ್ದೀನ್, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಮೈಸೂರು ಡಿಸಿಎಫ್ ಕೆ.ಪರಮೇಶ್, ಎಸಿಎಫ್ ಲಕ್ಷ್ಮೀಕಾಂತ್, ಹುಣಸೂರು ಎಸಿಎಫ್ ಮಹದೇವಯ್ಯ, ಹುಣಸೂರು ಆರ್‌ಎಫ್‌ಒ ನಂದಕುಮಾರ್, ವೀರನಹೊಸಳ್ಳಿ ಆರ್‌ಎಫ್‌ಒ ವಿನೋದ್ ಗೌಡ, ಇಟಿಎಫ್, ಎಲ್‌ಟಿಎಫ್, ಎಸ್‌ಟಿಪಿಎಫ್ ಸಿಬ್ಬಂದಿ ಸೇರಿದಂತೆ 80ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ನವಭಾರತ ತನ್ನ ಜನರನ್ನು ರಕ್ಷಿಸಲು ಬದ್ಧವಾಗಿದೆ

ಇಡೀ ದೇಶ ನೋಡಿದೆ ಎಂದರು. 'ನಾವು ಕೆಂಪುಕೋಟೆಯಿಂದ ಕೃಷ್ಣನ ಕರುಣೆಯ ಸಂದೇಶವನ್ನು ನೀಡುತ್ತೇವೆ ಮತ್ತು ಮಿಷನ್ ಸುದರ್ಶನ ಚಕ್ರವನ್ನು ಸಹ ಘೋಷಿಸುತ್ತೇವೆ' ಎಂದು ಪ್ರಧಾನಿ ಹೇಳಿದರು.

ಉಡುಪಿ ಪಟ್ಟಣವು ಐದು ದಶಕಗಳ ಹಿಂದೆಯೇ ಹೊಸ ಆಡಳಿತ ಮಾದರಿಯನ್ನು ಪ್ರಸ್ತುತಪಡಿಸಿತು. ಇದು ಇಂದು ಸ್ವಚ್ಛತೆ ಮತ್ತು ನೀರು ಸರಬರಾಜು ಕುರಿತು ರಾಷ್ಟ್ರೀಯ ನೀತಿಗಳಿಗೆ ಮಾರ್ಗದರ್ಶನ ನೀಡುತ್ತಿದೆ ಎಂದು ಅವರು ತಿಳಿಸಿದರು.

ಉಡುಪಿಯ ಪೇಜಾವರ ಮಠದ ಸ್ವಾಮಿ ವಿಶ್ವೇಶ ತೀರ್ಥರನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ರಾಮ ಜನ್ಮಭೂಮಿ ಚಳುವಳಿಯಲ್ಲಿ ಅವರ ಪಾತ್ರ ಎಷ್ಟು ದೊಡ್ಡದು ಎಂದು ಇಡೀ ದೇಶಕ್ಕೆ ಗೊತ್ತಿದೆ ಎಂದು ಹೇಳಿದರು. ಮಧ್ವಾಚಾರ್ಯರರು ಭಕ್ತಿಯ ಮಾರ್ಗ ತೋರಿಸಿಕೊಟ್ಟಿದ್ದಾರೆ. ಅವರ ಮಾರ್ಗದರ್ಶನದಿಂದ ಆರಂಭಗೊಂಡ ಈ ಅಷ್ಟ ಮಠಗಳು ಧರ್ಮ ಕಾರ್ಯದಲ್ಲಿ ತೊಡಗಿವೆ. ಕನಕದಾಸರಿಗೆ ನಮಿಸುವ ಪುಣ್ಯ ನನಗೆ ಸಿಕ್ಕಿದೆ. ನನ್ನಂತಹ ಎಲ್ಲಾ ಭಕ್ತರಿಗೂ ಕಿಂಡಿಯ ಮೂಲಕ ಕೃಷ್ಣ ದರ್ಶನ ಆಗುವಂತೆ ಮಾಡಿದ್ದು ಕನಕದಾಸರು. ಭಗವಾನ್ ಕೃಷ್ಣನ ಪ್ರೇರಣೆಯಿಂದಲೇ ಕೆಲವೊಂದು ಯೋಜನೆಗಳನ್ನ ಮಾಡಲಾಗಿದೆ ಎಂದು ಮೋದಿ ಹೇಳಿದರು.

ಪ್ರಧಾನಿ ಮೋದಿಗೆ 'ಭಾರತ ಭಾಗ್ಯ ವಿಧಾತ' ಬಿರುದು ನೀಡಿ ಸನ್ಮಾನ

ಉಡುಪಿ, ನ.28– ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಹಮ್ಮಿಕೊಂಡಿರುವ ಲಕ್ಷಕಂಠ ಗೀತಾ ಪಠಣ ಕಾರ್ಯಕ್ರಮದಲ್ಲಿ ಭಾಗಿಯಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ 'ಭಾರತ ಭಾಗ್ಯ ವಿಧಾತ' ಬಿರುದು ನೀಡಿ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು ಸನ್ಮಾನಿಸಿದರು. ಬಳಿಕ ಕಾಶಿ ಕಾರಿಡಾರ್ ರೀತಿಯಲ್ಲಿ ಉಡುಪಿ ಕಾರಿಡಾರ್ ಅಭಿವೃದ್ಧಿಪಡಿಸುವಂತೆ ಅವರು ಮನವಿ ಮಾಡಿದರು. ಲಕ್ಷ ಕಂಠ ಗೀತಾ ಕಾರ್ಯಕ್ರಮದ ಅಂಗವಾಗಿ ಭಗವದ್ಗೀತೆಯ 15ನೇ ಅಧ್ಯಾಯದ ಕೊನೆಯ ಕೆಲವು ಶ್ಲೋಕಗಳನ್ನು ಸಾಮೂಹಿಕವಾಗಿ ಪಠಣ ಮಾಡಲಾಯಿತು.



ಬಳಿಕ ಮೋದಿ ಅವರು, 'ಎಲ್ಲರಿಗೂ ನಮಸ್ಕಾರ..' ಎಂದು ಕನ್ನಡದಲ್ಲಿ ಮಾತು ಆರಂಭಿಸಿ, ಕನಕದಾಸರಿಗೆ ನಮಿಸುವ ಪುಣ್ಯ ನನಗೆ ಸಿಕ್ಕಿದೆ. ನನ್ನಂತಹ ಎಲ್ಲಾ ಭಕ್ತರಿಗೂ ಕಿಂಡಿಯ ಮೂಲಕ ಕೃಷ್ಣ ದರ್ಶನ ಆಗುವಂತೆ ಮಾಡಿದ್ದು ಕನಕದಾಸರು. ಭಗವಾನ್ ಕೃಷ್ಣನ ಪ್ರೇರಣೆಯಿಂದಲೇ ಕೆಲವೊಂದು ಯೋಜನೆಗಳನ್ನ ಮಾಡಲಾಗಿದೆ ಎಂದು ಹೇಳಿದರು.

ಏಕಲವ್ಯನಗರದಲ್ಲಿ 'ನಮ್ಮ ಕ್ಲಿನಿಕ್' ಉದ್ಘಾಟನೆ

ಪ್ರತಿಯೊಬ್ಬರಿಗೆ ಆರೋಗ್ಯ ಕಾಳಜಿ ಇರಲಿ: ಜಿಟಿಡಿ



ಮೈಸೂರಿನ ಏಕಲವ್ಯನಗರದಲ್ಲಿ 'ನಮ್ಮ ಕ್ಲಿನಿಕ್' ಅನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ನ.28– ಮೈಸೂರಿನ ಏಕಲವ್ಯನಗರದಲ್ಲಿ ನೂತನವಾಗಿ ಪ್ರಾರಂಭಿಸಿರುವ 'ನಮ್ಮ ಕ್ಲಿನಿಕ್' ಅನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಇಂದು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರಬೇಕು. ಜನರಿಗೆ ತುರ್ತು ವೈದ್ಯಕೀಯ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಗರದ ಹೊರವಲಯ ದಲ್ಲಿರುವ ಏಕಲವ್ಯನಗರಕ್ಕೆ ಹೆಚ್ಚುವರಿ ಕೇಂದ್ರ ಮಂಜೂರು ಮಾಡಿದ್ದು, ಸಾರ್ವಜನಿಕರು ಇಲ್ಲಿನ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ 14 ಆರೋಗ್ಯ ಕೇಂದ್ರಗಳಿದ್ದು, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಅವಶ್ಯಕತೆಗೆ ಅನುಗುಣವಾಗಿ 'ನಮ್ಮ ಕ್ಲಿನಿಕ್'ಗಳನ್ನು ಪ್ರಾರಂಭಿಸಲಾಗುತ್ತಿದೆ. ಈ ಕ್ಲಿನಿಕ್‌ನಲ್ಲಿ ಮಾರ್ಗಸೂಚಿಯಂತೆ ಸುಮಾರು 12 ವಿವಿಧ ಆರೋಗ್ಯ ಸೇವೆಗಳು ಲಭ್ಯವಿರಲಿವೆ. ಸಾರ್ವಜನಿಕರು ಕ್ಲಿನಿಕ್ ನೆರವಿನೊಂದಿಗೆ ಆರೋಗ್ಯವಂತರಾಗಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಕ್ಷೇತ್ರದ ಜನಪ್ರತಿನಿಧಿಗಳು, ಸ್ಥಳೀಯ ಮುಖಂಡರು ಮತ್ತು ಆರೋಗ್ಯ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು.

ನೀವಿಬ್ಬರೂ ಮಾತಾಡಿ...!

ಮಾತುಕತೆ ನಡೆಸುವಂತೆ ತಿಳಿಸಿದ್ದಾರೆ. ಹಾಗಾಗಿ ಅವರನ್ನು(ಡಿ.ಕೆ.ಶಿವಕುಮಾರ್) ನಾನು ಉಪಹಾರಕ್ಕಾಗಿ ಕರೆದಿದ್ದು, ಅಲ್ಲಿ ಚರ್ಚೆ ಮಾಡುತ್ತೇವೆ. ಹೈಕಮಾಂಡ್ ಹೇಳಿದ್ದನ್ನು ಒಪ್ಪುವುದಾಗಿ ನಾನು ಹಾಗೂ ಡಿ.ಕೆ.ಶಿವಕುಮಾರ್ ಅನೇಕ ಬಾರಿ ಹೇಳಿದ್ದೇವೆ. ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಪಕ್ಷದ ವರಿಷ್ಠರು ಹೇಳಿದಂತೆ ನಡೆದುಕೊಳ್ಳುವುದಾಗಿ ಈಗಾಗಲೇ ತಿಳಿಸಿದ್ದೇನೆ. ಈಗಲೂ ಮತ್ತು ನಾಳೆಯೂ ಇದನ್ನೇ ಹೇಳುತ್ತೇನೆ. ನವದೆಹಲಿಗೆ ಕರೆದರೆ ತೆರಳುತ್ತೇನೆ ಎಂದು ಸ್ಪಷ್ಟಪಡಿಸಿದರು.

ಡಿಕೆಶಿ ಪ್ರವಾಸ ಮುಂದೂಡಿಕೆ: ಅಧಿಕಾರ ಹಸ್ತಾಂತರ ಗೊಂದಲಕ್ಕೆ ಭಾನುವಾರ ಸಂಜೆ ವೇಳೆಗೆ ಪಕ್ಷದ ವರಿಷ್ಠರು ಪರಿಹಾರ ಸೂಚಿಸಲು ನಿರ್ಧರಿಸಿದ್ದಾರೆ. ಪಕ್ಷದ ವರಿಷ್ಠರು ಮಧ್ಯಪ್ರವೇಶ ಮಾಡಿ ಅಧಿಕಾರ ಹಸ್ತಾಂತರ ಗೊಂದಲ ನಿವಾರಣೆಗೆ ಸಭೆ ಸಮಯ ನಿಗದಿ ಮಾಡಿ, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಜೊತೆಗೆ ಪಕ್ಷದ ಮೂರ್‍ನಾಲ್ಕು ಹಿರಿಯ ನಾಯಕರಿಗೂ ದೆಹಲಿಗೆ ಬರುವಂತೆ ಸಂದೇಶ ರವಾನೆ ಮಾಡಿದ್ದರು. ಸೋನಿಯಾ ಗಾಂಧಿ ಶನಿವಾರ ಪಕ್ಷದ ಹಿರಿಯ ಮುಖಂಡರ ಸಭೆ ನಡೆಸಿದ ನಂತರ, ಕರ್ನಾಟಕದ ವಿಷಯವನ್ನು ಶನಿವಾರ ತಡರಾತ್ರಿ ಇಲ್ಲವೇ ಭಾನುವಾರದ ಸಭೆ ಯಲ್ಲಿ ಚರ್ಚಿಸಲು ತೀರ್ಮಾನಿಸಲಾಗಿತ್ತು. ಅದಾಗಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ದೆಹಲಿ ತಲುಪಿದ್ದು, ರಾತ್ರಿ 7:45ಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಲು ಫ್ಲೈಟ್ ಬುಕ್ ಮಾಡಿದ್ದರು. ಆದರೆ ಉಪಾಹಾರ ಚರ್ಚೆಗೆ ವರಿಷ್ಠರು ಸೂಚಿಸಿದ್ದರಿಂದ ಕೊನೆ ಕ್ಷಣದಲ್ಲಿ ದೆಹಲಿ ಪ್ರವಾಸ ಮುಂದೂಡಿದ್ದಾರೆ.

ಕ್ರೀಡಾಪಟುಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು

ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಮೈಸೂರು, ನ.28– ಸರ್ಕಾರ ಉತ್ತಮ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಆರ್ಥಿಕವಾಗಿಯೂ ಸಹಾಯ ಮಾಡಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಒತ್ತಾಯಿಸಿದರು.

ರಾಮಕೃಷ್ಣ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಮೈಸೂರಿನ ಮಾಜಿ ಸೈನಿಕ ದಿ.ಹವಾಲ್ದಾರ್ ನವೀನ್ ಹಾಗು ಭವ್ಯ ದಂಪತಿ ಪುತ್ರಿ ಕೇಂದ್ರೀಯ ವಿದ್ಯಾಲಯದಲ್ಲಿ 7ನೇತರಗತಿ ವಿದ್ಯಾರ್ಥಿನಿ, ಈಜುಪಟು ಎನ್.ಹಾರಿಕಾ ಅವರಿಗೆ ಪ್ರೋತ್ಸಾಹ ಧನವಾಗಿ 40 ಸಾವಿರ ರೂ.ವೈಯಕ್ತಿಕ ಚೆಕ್ ವಿತರಿಸಿ ಮಾತನಾಡಿದ ಅವರು, ಹಾರಿಕಾ ಅವರು ಬೆಂಗಳೂರಿನಲ್ಲಿ ನಡೆದ ಕೇಂದ್ರಿಯ ವಿದ್ಯಾಲಯಗಳ ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ 2 ಚಿನ್ನದ ಪದಕ 2 ಕಂಚಿನ ಪದಕ, ಕರ್ನಾಟಕ ರಾಜ್ಯ ಮಾಕ್ ಸ್ಟೇಟ್ ಮೀಟ್ ಈಜು ಸ್ಪರ್ಧೆಯಲ್ಲಿ 1 ಚಿನ್ನದ ಪದಕ, 1 ಬೆಳ್ಳಿ ಪದಕ ಪಡೆದು, ಡಿಸೆಂಬರ್‌ನಲ್ಲಿ ದೆಹಲಿಯಲ್ಲಿ ಸ್ಕೂಲ್ ಗೇಮ್ ಫೆಡರೇಷನ್ ಆಫ್ ಇಂಡಿಯಾ ನಡೆಸುವ ಈಜು ಸ್ಪರ್ಧೆಯ 4 ಈವೆಂಟ್‌ಗಳಿಗೆ ಆಯ್ಕೆಯಾಗಿದ್ದಾರೆ. ಇದುವರೆವಿಗೆ 50 ಕ್ಕೂ ಹೆಚ್ಚು ಪದಕಗಳನ್ನು ಪಡೆದು ಅತ್ಯುತ್ತಮ ಕ್ರೀಡಾಪಟುವಾಗಿದ್ದಾರೆ. ಈಕೆ ಈಜು ತರಬೇತುದಾರರಾದ ಪವನ್‌ರವರಿಂದ ತರಬೇತಿ ಪಡೆಯುತ್ತಿದ್ದಾರೆ. ಮುಂದೆ ಈಕೆಗೆ ವಿದ್ಯಾಭ್ಯಾಸಕ್ಕೂ ಸಹಾಯ ಮಾಡುತ್ತೇನೆ ಎಂದು ಬರವಸೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಪಿ. ದಿವಾಕರ, ರವಿಕುಮಾರ್, ರಮೇಶ್ ಬಾಬು, ಕೆ.ಬಿ.ನಾಣಯ್ಯ, ಶಂಕರಪ್ಪ, ಬಿ.ಎಂ ಚಿತ್ರಾ, ನಂಜುಂಡಸ್ವಾಮಿ ಇನ್ನಿತರರಿದ್ದರು.

ಹುಟ್ಟುಹಬ್ಬದ ಶುಭ ಹಾರೈಕೆ



ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಅವರಿಗೆ ಉದ್ಯಮಿಗಳಾದ ಕೆ.ಪಿ.ಪರಮೇಶ್, ಕೆ.ಎಸ್.ಯೋಗೇಶ್, ಫಿಶ್ ಲ್ಯಾಂಡ್ ಸುಧಾಕರ್ ಪೂಜಾರ್, ಅರುಣ್ ಪೂಜಾರ್, ಕೆ.ಎಸ್. ದಿನೇಶ್, ಸಮಾಜ ಸೇವಕ ಎಸ್.ಶ್ರೀಕಾಂತ್, ಕೆ.ವಿ ಕುಮಾರ್ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಶಾಂತಿನಗರದಲ್ಲಿ ಯುವಕನ ಹತ್ಯೆ ಪ್ರಕರಣ

ಅಪ್ರಾಪ್ತ ಸೇರಿ ಇಬ್ಬರ ಬಂಧನ

ಮೈಸೂರು, ನ. 28– ಮೈಸೂರಿನ ಶಾಂತಿನಗರದಲ್ಲಿ ಬುಧವಾರ ಮುಂಜಾನೆ ನಡೆದ ಯುವಕನ ಹತ್ಯೆ ಪ್ರಕರಣದಲ್ಲಿ ಅಪ್ರಾಪ್ತ ಸೇರಿದಂತೆ ಇಬ್ಬರನ್ನು ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬುಧವಾರ ಮುಂಜಾನೆ 5.45ರ ಸುಮಾರಿನಲ್ಲಿ ಹೋಟೆಲ್‌ನಲ್ಲಿ ಟೀ ಕುಡಿಯಲು ಹೋಗಿದ್ದ ಸೂಫಿಯನ್ (19) ಎಂಬ ಯುವಕನನ್ನು ಇಬ್ಬರು ದುಷ್ಕರ್ಮಿಗಳು ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು.

ಈ ದೃಶ್ಯ ಸಿಸಿ ಕ್ಯಾಮರಾದಲ್ಲಿ ದಾಖಲಾಗಿತ್ತು. ಈ ಸಂಬಂಧ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಹಂತಕರ ಪತ್ತೆಗಾಗಿ ಮೂರು ತಂಡಗಳನ್ನು ರಚಿಸಲಾಗಿತ್ತು.

ಸಿಸಿ ಕ್ಯಾಮರಾ ದೃಶ್ಯಾವಳಿ ಆಧರಿಸಿ, ನಿಖರ ಮಾಹಿತಿ ಮೇರೆಗೆ ಹಾಸನಕ್ಕೆ ತೆರಳಿದ ಪೊಲೀಸರ ತಂಡ ಉದಯಗಿರಿಯ ರಾಹಿಲ್(20) ಹಾಗೂ ಅಪ್ರಾಪ್ತ ಬಾಲಕನನ್ನು ಬಂಧಿಸಿದ್ದಾರೆ.

ಕೆಲ ದಿನಗಳ ಹಿಂದೆ ರಾಹಿಲ್‌ನ ಸಹೋದರನ ಮೇಲೆ ಸೂಫಿಯನ್ ಹಲ್ಲೆ ನಡೆಸಿದ್ದನೆನ್ನಲಾಗಿದ್ದು, ಅದಕ್ಕೆ ಪ್ರತೀಕಾರವಾಗಿ ಈ ಕೊಲೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತರಬೇತಿ ಶಿಬಿರದ ಸಮಾರೋಪ ಸಮಾರಂಭ

ಮೈಸೂರು, ನ.28(ಬಿಎಲ್‌ಯು)– ಮೈಸೂರಿನ ಲಕ್ಷ್ಮಿಪುರಂನ ಜ್ಞಾನಬುತ್ತಿ ಸಂಸ್ಥೆಯಲ್ಲಿ ನಡೆಯುತ್ತಿರುವ ಐಎಎಸ್ ಮತ್ತು ಕೆಎಎಸ್ ಪರೀಕ್ಷಾ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಡಿಸೆಂಬರ್ 1ರಂದು ನಡೆಯಲಿದೆ.

ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಡಾ.ಎಸ್.ಎಲ್.ಚನ್ನಬಸವಣ್ಣ ಅಧ್ಯಯನ ಪುಸ್ತಕ ಬಿಡುಗಡೆ ಮಾಡಲಿದ್ದು, ಮೈಸೂರಿನ ಹೆಚ್ಚುವರಿ ಪ್ರಾದೇಶಿಕ ಆಯುಕ್ತೆ ಕವಿತಾ ರಾಜಾರಾಂ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಲೇಖಕ ಪ್ರೊ.ಎಂ.ಕೃಷ್ಣಗೌಡ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಟಿ.ಸಿ.ಸುದೀಪ, ಪ್ರೊ.ಹೊನ್ನಯ್ಯ, ಪ್ರೊ.ಈ.ಶಿವಪ್ರಸಾದ್, ಪ್ರೊ.ವಿ.ಜಯಪ್ರಕಾಶ್, ಎಸ್.ಗಣೇಶ್, ರಾಜೀವ್ ಶರ್ಮಾ, ಮಂಜುನಾಥ್, ಮಹದೇವಪ್ಪ ಯು.ಎಂ.ಶರದ್ ರಾವ್, ಡಾ.ಕೃಷ್ಣಕುಮಾರ್, ನಾಗರಾಜು, ರೋಹನ್ ರವಿಕುಮಾರ್, ಡಾ.ಕೃಷ್ಣ ಡಾ.ಮೋಹನ್, ಡಾ.ಕೃಪಗಣೇಶ್, ಡಾ.ಎಸ್.ಬಿ.ಎಂ. ಪ್ರಸನ್ನ, ಪ್ರೊ.ಸಿ.ಕೆ.ಕಿರಣ್ ಕೌಶಿಕ್, ಕೆ.ವೈ.ನಾಗೇಂದ್ರ, ಕೂಡ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಜ್ಞಾನಬುತ್ತಿ ಸಂಸ್ಥೆಯ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ತಿಳಿಸಿದ್ದಾರೆ.

ಉಚಿತ ಪೆರೋಪಿ ಕಾರ್ಯಕ್ರಮ



ಎಸ್‌ಬಿಎಂ ಮಂಜು ಸ್ನೇಹ ಬಳಗ ಹಾಗೂ ಗೋಕುಲಂ ಬೃಂದಾವನ ನಿವಾಸಿಗಳ ಸಹಯೋಗದೊಂದಿಗೆ ಬೆಂಗಳೂರು ಕಂಪಾನಿಯೋ ಸಂಸ್ಥೆ ವತಿಯಿಂದ 13 ದಿನಗಳ ಉಚಿತ ಪೆರೋಪಿ ಕಾರ್ಯಕ್ರಮವನ್ನು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಉದ್ಘಾಟಿಸಿದರು ಈ ಸಂದರ್ಭದಲ್ಲಿ ಗೋಕುಲಂ ಬೃಂದಾವನ ನಿವಾಸಿಗಳು ಹಾಗೂ ಬೆಂಗಳೂರು ಕಂಪಾನಿಯೋ ಸಂಸ್ಥೆಯ ರಘುನಾಥ್ ಸಫಾರೆ ಉಪಸ್ಥಿತರಿದ್ದರು.

ಮೈಸೂರಲ್ಲಿ 'ಸಂವಿಧಾನ ಜಾಗೃತಿಗಾಗಿ ಭೀಮನಡೆ ಅಭಿಯಾನ'

ಕಾಂಗ್ರೆಸ್ ನಿರಂತರವಾಗಿ ಸಂವಿಧಾನವನ್ನು ಅವಮಾನಿಸುತ್ತಾ ಬಂದಿದೆ

• ಮಾಜಿ ಸಚಿವರೂ ಆದ ಎಂಎಲ್ಸಿ ಸಿ.ಟಿ.ರವಿ ಆಕ್ರೋಶ • ಸಂವಿಧಾನದ ವಿಷಯದಲ್ಲಿ ನಿರಂತರವಾಗಿ ಸುಳ್ಳು ಹೇಳುತ್ತಾ ನಂಬಿಸುವ ಪ್ರಯತ್ನ ಮಾಡುತ್ತಿದೆ

ಮೈಸೂರು, ನ.28(ಎಸ್‌ಬಿಡಿ)– ಸುಳ್ಳಿನ ಮೆರವಣಿಗೆ ನೋಡಿ ಅದನ್ನೇ ಸತ್ಯ ಎಂದು ನಂಬಬಾರದು. ಸಂವಿಧಾನದ ಆಶಯವನ್ನೇ ಬದಿಗೊತ್ತಿ ಆಡಳಿತ ನಡೆಸಿರುವ ಕಾಂಗ್ರೆಸ್‌ನ ಸುಳ್ಳು ಆರೋಪವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಬಿಜೆಪಿ ವತಿಯಿಂದ ನಗರದ ನಜರ್‌ಬಾದ್‌ನಲ್ಲಿರುವ ವಿ.ಕೆ. ಫಂಕ್ಷನ್ ಹಾಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ 'ಸಂವಿಧಾನ ಜಾಗೃತಿಗಾಗಿ ಭೀಮನಡೆ ಅಭಿಯಾನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸತ್ಯ ಹಾಗೂ ಮಿತ್ಯ ಯಾವುದೆಂದು ತಿಳಿದುಕೊಳ್ಳಬೇಕು. ಸತ್ಯ ಹೊಸಿಲು ದಾಟುವ ಮುನ್ನವೇ ಸುಳ್ಳು ಊರೆಲ್ಲಾ ಸುತ್ತಿರುತ್ತದೆ. ಸುಳ್ಳಿನ ಮೆರವಣಿಗೆ ನೋಡಿ ಅದನ್ನೇ ಸತ್ಯ ಎಂದು ನಂಬಬಾರದು. ಸಂವಿಧಾನವನ್ನು ನಿರಂತರವಾಗಿ ಅಪಮಾನಿಸಿರುವ ಕಾಂಗ್ರೆಸ್ಸಿಗರ ಮಾತನ್ನೇ ಸತ್ಯ ಎಂದು ತಿಳಿಯಬಾರದು ಎಂದರು.

ಕಾಂಗ್ರೆಸ್‌ನಿಂದಲೇ ಅಂಬೇಡ್ಕರ್‌ಗೆ ಹಿನ್ನಡೆ: ಸಂವಿಧಾನ ರಚನಾ ಸಭೆಗೆ ಹೋಗದಂತೆ ಡಾ.ಬಿ. ಆರ್.ಅಂಬೇಡ್ಕರ್ ಅವರನ್ನು ಮುಂಬೈನಲ್ಲಿ ಸೋಲಿಸಿದ್ದು ಕಾಂಗ್ರೆಸ್. ದೇಶಕ್ಕೆ ಸಂವಿಧಾನ ರಚಿಸಲು ಐವರ್ ಜೆನ್ನಿಂಗ್ ಎಂಬ ಐರಿಶ್ ಪ್ರಜೆಯನ್ನು ಜವಾಹರ ಲಾಲ್ ನೆಹರೂ ಸೂಚಿಸಿದ್ದರು. ಇದಕ್ಕೆ ಗಾಂಧೀಜಿ ಆಕ್ಷೇಪ ವ್ಯಕ್ತಪಡಿಸಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರು ಸೂಚಿಸಿದರು. ಸ್ವಾತಂತ್ರ್ಯ ನಂತರ ಚುನಾವಣೆಯಲ್ಲಿ ಅಂಬೇಡ್ಕರ್ ಲೋಕಸಭೆ ಪ್ರವೇಶಿಸುವುದನ್ನು ತಪ್ಪಿಸಿದರು. ಅವರ ಸಹಾಯಕರಾಗಿದ್ದವರನ್ನೇ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿ, ಸೋಲಿಸುವ ಮೂಲಕ ಆಗಲೇ ಮನೆ ಒಡೆಯುವ ಕೆಲಸ ಶುರು ಮಾಡಿದರು. ಎರಡು ವರ್ಷಗಳ ನಂತರ ನಡೆದ ಉಪಚುನಾವಣೆಯಲ್ಲೂ ಸೋಲಿಸುವ ಮೂಲಕ ಸಂವಿಧಾನದ ಆಶಯವನ್ನೂ ಸೋಲಿಸಿದರು. ಅಂಬೇಡ್ಕರ್ ಅವರ ಅಂತ್ಯ ಸಂಸ್ಕಾರಕ್ಕೆ ದೆಹಲಿಯಲ್ಲಿ ಒಂದಿಷ್ಟು ಜಾಗ ನೀಡಲಿಲ್ಲ ಎಂದು ಕಿಡಿಕಾರಿದರು.

ನೆಹರು ಅವರು ಮೀಸಲಾತಿ, ದೇಶದ ಪ್ರಗತಿಗೆ ಅಡ್ಡಿಯಾಗುತ್ತದೆ ಎಂದು ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದ್ದರು. ಆದರೆ ಕಾಂಗ್ರೆಸ್ ಏಕಸಾಮ್ಯ ಮುರಿದು ಬಿಜೆಪಿ ಬೆಂಬಲದೊಂದಿಗೆ ವಿ.ಪಿ.ಸಿಂಗ್ ಅವರು ಪ್ರಧಾನಿ ಆದಾಗ ಹಿಂದುಳಿದ ವರ್ಗಕ್ಕೆ ಮೀಸಲಾತಿ ದಕ್ಕಿತು. 1990ರಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ 'ಭಾರತ ರತ್ನ' ಘೋಷಿಸಬೇಕೆಂಬ ಅಟಲ್ ಬಿಹಾರಿ ವಾಜಪೇಯಿ ಅವರ ಪ್ರಸ್ತಾಪಕ್ಕೆ ವಿ.ಪಿ.ಸಿಂಗ್ ಅನುಮೋದಿಸಿದರು. ಅಂಬೇಡ್ಕರ್ ಅವರಿಗೆ ಭಾರತ ರತ್ನ ನೀಡದ ಕಾಂಗ್ರೆಸ್ ಸರ್ಕಾರ, ಅವರನ್ನು ಚುನಾವಣೆಯಲ್ಲಿ ಸೋಲಿಸಿದ ವ್ಯಕ್ತಿಗೆ ಪದ್ಮಭೂಷಣ ನೀಡಿ ಗೌರವಿಸಿತು. ಸಂವಿಧಾನದ ವಿಧಿಗಳನ್ನು ದುರುಪಯೋಗಪಡಿಸಿಕೊಂಡು ನಾನಾ ರಾಜ್ಯಗಳ ಸರ್ಕಾರ ವಜಾಗೊಳಿಸುವ ಮೂಲಕ ಸರ್ವಾಧಿಕಾರ ಮೆರೆಯಿತು. ಕಾಂಗ್ರೆಸ್ ಧೋರಣೆಯಿಂದ ಬೇಸರಗೊಂಡು ಕಾನೂನು ಸಚಿವರಾಗಿದ್ದ ಅಂಬೇಡ್ಕರ್ ಅವರು ನಾಲ್ಕು ಕಾರಣಗಳನ್ನು ನೀಡಿ, ರಾಜೀನಾಮೆ ನೀಡಿದರು. ಈ ಸತ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದರು.

2015 ನ.26ರವರೆಗೆ ದೇಶದಲ್ಲಿ ಸಂವಿಧಾನ ಗೌರವ ದಿವಸ ಆಚರಣೆ ಮಾಡುತ್ತಿರಲಿಲ್ಲ. ಅದಕ್ಕೂ ಮೊದಲು ಲಾ ಡೇ ಎಂದು ಕಾಟಾಚಾರಕ್ಕೆ ಆಚರಿಸಿ, ಸಂವಿಧಾನ ಅಂಗೀಕರಿಸಿದ ದಿನದ ಮಹತ್ವವನ್ನೇ ಕಾಂಗ್ರೆಸ್ ಮರೆಮಾಚಿತ್ತು. ಕಾಂಗ್ರೆಸ್‌ನವರಿಗೆ ಸಂವಿಧಾನ ಹಾಗೂ ಅಂಬೇಡ್ಕರ್ ಅವರ ಬಗ್ಗೆ ಗೌರವವಿಲ್ಲ. ಮೋದಿ ಅವರು ಪ್ರಧಾನಿ ಆಗುವವರೆಗೂ ಸಂವಿಧಾನ ಗೌರವ ದಿವಸ ಆಚರಿಸಲಿಲ್ಲ ಎಂದು ಇದೇ ವೇಳೆ ವಾಗ್ದಾಳಿ ನಡೆಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ಸಂಸದ ಯದುವೀರ್, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮಾಜಿ ಶಾಸಕ ಹರ್ಷವರ್ಧನ್, ಅಭಿಯಾನದ ವಿಭಾಗ ಮುಖ್ಯಸ್ಥರಾದ ರಾಜ್ಯ ಓಬಿಸಿ ಘಟಕದ ಅಧ್ಯಕ್ಷ ರಘು ಕೌಟಿಲ್ಯ, ಪ್ರಫುಲ್ಲಾ ಮಲ್ಲಾಡಿ, ಮಾಜಿ ಮೇಯರ್‌ಗಳಾದ ಸಂದೇಶ್‌ಸ್ವಾಮಿ, ಶಿವಕುಮಾರ್, ಎಸ್ಸಿ ಮೋರ್ಚಾ ನಗರಾಧ್ಯಕ್ಷ ವಿ.ಶೈಲೇಂದ್ರ, ಮುಖಂಡರಾದ ಡಾ.ರೇವಣ್ಣ, ಮಹೇಶ್, ಕಿರಣ್ ಜಯರಾಮೇಗೌಡ, ಅನಿಲ್, ಕಾರ್ತಿಕ್, ಮಂಗಳಾ ಸೋಮಶೇಖರ್, ಸೋಮಸುಂದರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ಬಿಜೆಪಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಸಂವಿಧಾನ ಜಾಗೃತಿಗಾಗಿ ಭೀಮನೆಡೆ ಅಭಿಯಾನ' ಕಾರ್ಯಕ್ರಮವನ್ನು ಮಾಜಿ ಸಚಿವ ಸಿ.ಟಿ.ರವಿ ಉದ್ಘಾಟಿಸಿದರು.

> ಸಂವಿಧಾನವನ್ನು ಈವರೆಗೆ 106 ಬಾರಿ ತಿದ್ದುಪಡಿ ಮಾಡಿದ್ದು, ಇದರಲ್ಲಿ 75 ಬಾರಿ ತಿದ್ದುಪಡಿ ಆಗಿರುವುದು ಕಾಂಗ್ರೆಸ್ ಸರ್ಕಾರದಿಂದ. ಅದರಲ್ಲೂ ಒಂದೇ ಕುಟುಂಬದವರಿಂದ 58 ಬಾರಿ ತಿದ್ದುಪಡಿ ಆಗಿದೆ. ಹೀಗೆ ಸಂವಿಧಾನದ ಮೂಲ ಆಶಯ ಮೀರಿ ಪ್ರಜಾಪ್ರಭುತ್ವ ದಮನಕ್ಕೆ ಯತ್ನಿಸಿದ ಕಾಂಗ್ರೆಸ್, ಬಿಜೆಪಿ ವಿರುದ್ಧ ವ್ಯವಸ್ಥಿತ ಅಪಪ್ರಚಾರ ನಡೆಸಿತು. ಕಾಂಗ್ರೆಸ್ ಷಡ್ಯಂತರವನ್ನು ಮೆಟ್ಟಿ ನಿಲ್ಲುವ ಶಕ್ತಿ ಬಿಜೆಪಿಗಿದೆ. ಆಡಳಿತಾವಧಿಯಲ್ಲಿ ದಾಖಲೆ ನಿರ್ಮಿಸುವ ವಿಚಾರ ಚರ್ಚೆಯಲ್ಲಿದೆ. ಆದರೆ ದೇವರಾಜ ಅರಸು ಅವರು 8 ವರ್ಷ ನಾನ್‌ಸ್ಟಾಪ್ ಮುಖ್ಯಮಂತ್ರಿಯಾಗಿದ್ದರು. ಆದರೆ ಸಿದ್ದರಾಮಯ್ಯ ಬ್ರೇಕಿಂಗ್ ಮುಖ್ಯಮಂತ್ರಿ ಎಂಬುದನ್ನು ಮರೆಯಬಾರದು.
>
> -ರಘು ಕೌಟಿಲ್ಯ ಅಧ್ಯಕ್ಷ ರಾಜ್ಯ ಓಬಿಸಿ ಮೋರ್ಚಾ

ಕನ್ನಡ ರಾಜ್ಯೋತ್ಸವ



ನೃಪತುಂಗ ಸಾಂಸ್ಕೃತಿಕ ವೇದಿಕೆ ವತಿಯಿಂದ ಕಾಳಿದಾಸ ರಸ್ತೆ ನೃಪತುಂಗ ಬಯಲು ರಂಗ ಮಂಟಪದ ಮುಂಭಾಗ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕೊಟ್ರೇಸಿ ಬಾಬು, ನಗರ ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ಡಾ.ರಮೇಶ್, ಮದನ್ ಮಹದೇಶ್, ಶಿವಣ್ಣ, ಸುಭಾಷ್, ಶ್ರೀನಿವಾಸ್, ಎಂಎನ್‌ಪಿ ದಯಾನಂದ, ಮೋಹನ್‌ಕುಮಾರ್ ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು, ನ.28– ಕರ್ನಾಟಕ ರಾಜ್ಯದ ಬ್ರಾಹ್ಮಣ ಸಮುದಾಯದ ಪ್ರತಿಭಾವಂತ ಪದವೀಧರರು ನಾಗರಿಕ ಸೇವೆಗಳಾದ ಐಎಎಸ್ ಅಥವಾ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ತರಬೇತಿ ಪಡೆಯುವ ಸಂಬಂಧ 2025–26 ನೇ ಸಾಲಿಗೆ ಪ್ರವೇಶಾತಿ ಪಡೆದು ಪಾವತಿಸಲಾದ ತರಬೇತಿ ಶುಲ್ಕದ ಮೊತ್ತವನ್ನು ಗರಿಷ್ಠ 1 ಲಕ್ಷರೂಗಳಿಗೆ ಮಿತಿಗೊಳಿಸಿ ಡಿ.ಬಿ.ಟಿ ಮೂಲಕ ನೇರವಾಗಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗುವುದರಿಂದ ಈ ಯೋಜನೆಯ ಲಾಭ ಪಡೆದುಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ಮೈಸೂರು ಇವರನ್ನು ಸಂಪರ್ಕಿಸಬಹುದು. ದೂ.ಸಂ 8861646939.

ಮೈಸೂರಲ್ಲಿ ಶ್ರೀ ಶಾಂತನಾಥ ತೀರ್ಥಂಕರರ

ಪಂಚಕಲ್ಯಾಣ ಮಹೋತ್ಸವ



ಕನಕಗಿರಿ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಅರೆತಿಪ್ಪೂರಿನಶ್ರೀ ಸಿದ್ಧಾಂತ ಕೀರ್ತಿ ಭಟ್ಟಾರಕ ಸ್ವಾಮೀಜಿ ನೇತೃತ್ವದಲ್ಲಿ ಭಗವಾನ್ 1008 ಶ್ರೀ ಶಾಂತಿನಾಥ ತೀರ್ಥಂಕರ ಪಂಚಕಲ್ಯಾಣದ ಜಿನಬಿಂಬಗಳ ಅಭಿಷೇಕ ನೆರವೇರಿಸಿದರು.

ಮೈಸೂರು, ನ28(ಎಸ್‌ಪಿಎನ್)– ಮೈಸೂರಿನ ಜಗನಮ್ಮೋಹನ ಅರಮನೆ ಆವರಣದಲ್ಲಿ ಭಗವಾನ್ 1008 ಶ್ರೀ ಶಾಂತಿನಾಥ ತೀರ್ಥಂಕರರ ಮಾನಸ್ತಂಭೋಪರಿ ಜಿನ ಬಿಂಬಗಳ ಪಂಚಕಲ್ಯಾಣ ಪೂಜಾ ಮಹೋತ್ಸವ ಕಾರ್ಯಕ್ರಮ ಶುಕ್ರವಾರ ನೆರವೇರಿತು.

ಕನಕಗಿರಿ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಅರೆತಿಪ್ಪೂರಿನ ಶ್ರೀ ಸಿದ್ಧಾಂತ ಕೀರ್ತಿ ಭಟ್ಟಾರಕ ಸ್ವಾಮೀಜಿ ನೇತೃತ್ವದಲ್ಲಿ ಭ. 1008 ಶ್ರೀ ಶಾಂತಿನಾಥ ತೀರ್ಥಂಕರ ಮಾನಸ್ತಂಭೋಪರಿ ಜಿನಬಿಂಬಗಳ ಪಂಚ ಕಲ್ಯಾಣ ಪೂಜಾ ಮಹೋತ್ಸವ ವೇಳೆ ಅಭಿಷೇಕ ನೆರವೇರಿಸಿದರು.

ಎರಡನೇ ದಿನದ ಪಂಚ ಕಲ್ಯಾಣ ಮಹೋತ್ಸವದ ಪೂಜಾ ವಿಧಿವಿಧಾನದಲ್ಲಿ ತೀರ್ಥಂಕರರ ಜನ್ಮಾಭಿಷೇಕ ಅಂಗವಾಗಿ ಪಾಂಡುಕ ಶಿಲೆಯ ಮೇಲೆ ಬಾಲ ತೀರ್ಥಂಕರರಿಗೆ ಪಂಚಾಮೃತ ಮತ್ತು ಜನಮಂಗಳ ಕಳಸಗಳಿಂದ ಅಭಿಷೇಕ ನೇರವೇರಿತು. ಇದಕ್ಕೂ ಮೊದಲು ಬಾಲ ತೀರ್ಥಂಕರರನ್ನು ನಗರದ ಶಾಂತಿನಾಥ ಬಸದಿಯಿಂದ ಜಗನ್ಮೋಹನ ಅರಮನೆಯ ಆವರಣಕ್ಕೆ ಭವ್ಯ ಮೆರವಣಿಗೆ ಮೂಲಕ ಕರೆತರಲಾಯಿತು.

ಮಧ್ಯಾಹ್ನ ವೇದಿಕೆ ಕಾರ್ಯಕ್ರಮದಲ್ಲಿ ಕನಕಗಿರಿಯ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಪ್ರವಚನ ನೀಡುತ್ತಾ, 1997 ರಲ್ಲಿ ಬನುಮಯ್ಯ ಕಾಲೇಜಿನ ಆವರಣದಲ್ಲಿರುವ ಶ್ರೀ ಶಾಂತಿನಾಥ ತೀರ್ಥಂಕರರ ಪಂಚ ಕಲ್ಯಾಣ ಮಹೋತ್ಸವ ನೆರವೇರಿತ್ತು. ಇದೀಗ 2025ರಲ್ಲಿ ಪಂಚ ಕಲ್ಯಾಣ ಮಹೋತ್ಸವ ಇಂದು ನೆರವೇರುತ್ತಿದೆ. 125 ವರ್ಷಗಳ ಹಿಂದೆ ಶ್ರೀ ಶಾಂತಿನಾಥ ತೀರ್ಥಂಕರ ಬಸದಿಯನ್ನು ಅರಮನೆ ಆವರಣದಿಂದ ಬನುಮಯ್ಯ ಕಾಲೇಜು ಆವರಣಕ್ಕೆ ರಾಜಾಜ್ಞೆಯಂತೆ ಸ್ಥಳಾಂತರಗೊಳಿಸಲಾಯಿತು ಎಂದರು.

ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಜಿತೇಂದ್ರ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜ್, ಅರೆತಿಪ್ಪೂರಿನ ಸಿದ್ಧಾಂತ ಕೀರ್ತಿ ಭಟ್ಟಾರಕ ಸ್ವಾಮೀಜಿ, ಹೆಚ್.ಪಿ. ರಕ್ಷಿತ್, ಎಂ.ಎಲ್.ವಿಜಯರತ್ನ ರೀಜಿನಲ್ ಟ್ರಸ್ಟ್ ಸಹಕಾರ್ಯದರ್ಶಿ ಎಂ.ವಿ.ಜಯ ರತ್ನಮ್ಮ, ರಾಜಕೀರ್ತಿ, ಸುರೇಶ್ ಜೈನ್ ಇದ್ದರು

ಪಿಎಂ ವಿಕ್ಸಿತ್ ಭಾರತ್ ರೋಜ್‌ಗಾರ್ ಯೋಜನೆ ಹೋಟೆಲ್ ಉದ್ಯಮಕ್ಕೆ ಸಹಾಯಕಾರಿ

ಹೊಸ ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹಕಾರಿ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ 'ಪಿ.ಎಂ. ವಿಕ್ಸಿತ್ ಭಾರತ್ ರೋಜ್‌ಗಾರ್ ಯೋಜನೆ' ಕುರಿತ ಜಾಗೃತಿ ಕಾರ್ಯಕ್ರಮವನ್ನು ಪ್ರಾದೇಶಿಕ ಭವಿಷ್ಯ ನಿಧಿ(ಪಿ.ಎಫ್) ಆಯುಕ್ತ ವಿನೀತ್ ಕುಮಾರ್ ಉದ್ಘಾಟಿಸಿದರು.

ಮೈಸೂರು, ನ.28(ಎಂಟಿವೈ)– ಪಿ.ಎಂ. ವಿಕ್ಸಿತ್ ಭಾರತ್ ರೋಜ್‌ಗಾರ್ ಯೋಜನೆ ಹೋಟೆಲ್ ಸೇರಿದಂತೆ ಹೊಸ ಉದ್ಯೋಗ ಆರಂಭಿಸುವವರಿಗೆ ಹೆಚ್ಚಿನ ನೆರವು ಒದಗಿಸುತ್ತದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ(ಪಿ.ಎಫ್) ಆಯುಕ್ತ ವಿನೀತ್ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ಹೋಟೆಲ್ ಮಾಲೀಕರ ಸಂಘ ಮತ್ತು ಹೋಟೆಲ್ ಮಾಲೀಕರ ಧರ್ಮದತ್ತಿ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 'ಪಿ.ಎಂ. ವಿಕ್ಸಿತ್ ಭಾರತ್ ರೋಜ್‌ಗಾರ್ ಯೋಜನೆ' ಕುರಿತ ಜಾಗೃತಿ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪಿ.ಎಂ. ವಿಕ್ಸಿತ್ ಭಾರತ್ ರೋಜ್‌ಗಾರ್ ಯೋಜನೆ' ಉದ್ಯೋಗ ಸೃಷ್ಟಿ ಮತ್ತು ಯುವಕರಿಗೆ ಅವಕಾಶ ವಿಸ್ತರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಹೊಸ ಉದ್ಯೋಗಾವಕಾಶ ಕಲ್ಪಿಸುವ ಉದ್ಯೋಗದಾತರಿಗೆ ಸರ್ಕಾರದಿಂದ ನೇರ ಹಣಕಾಸು ನೆರವು ದೊರೆಯುತ್ತದೆ. ಹೊಸ ನೇಮಕಾತಿ ಮಾಡಿದ ಅಭ್ಯರ್ಥಿಗಳ ಪಿಎಫ್ ಕೊಡುಗೆಯಲ್ಲಿ ಕೇಂದ್ರ ಸರ್ಕಾರ ಹೆಚ್ಚಿನ ಸಹಾಯ ಧನ ಒದಗಿಸುತ್ತದೆ. ಹೋಟೆಲ್ ಉದ್ಯಮವು ಹೆಚ್ಚಿನ ಯುವಶಕ್ತಿ ಬಳಸುವ ಮತ್ತು ಉದ್ಯೋಗ ಸೃಷ್ಟಿ ಮಾಡುವ ಪ್ರಮುಖ ಕ್ಷೇತ್ರವಾಗಿರುವುದರಿಂದ ಈ ಯೋಜನೆ ಹೋಟೆಲ್ ಉದ್ಯಮಿಗಳಿಗೆ ಪ್ರಯೋಜನಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಯೋಜನೆಯ ಪ್ರಯೋಜನ ಪಡೆಯುವ ವಿಧಾನ, ದಾಖಲೆ ಪ್ರಕ್ರಿಯೆ, ಆನ್‌ಲೈನ್ ನೋಂದಣಿ, ಸರ್ಕಾರದಿಂದ ಲಭಿಸುವ ಶೇಕಡಾವಾರು ಸಹಾಯ ಧನ ಸೇರಿದಂತೆ ಇನ್ನಿತರ ವಿಚಾರದ ಬಗ್ಗೆ ಮಾಹಿತಿ ನೀಡಿದರು.


ಕಾರ್ಯಕ್ರಮದಲ್ಲಿ ಇಪಿಎಫ್‌ಓ ಎನ್‌ಫೋರ್ಸ್‌ಮೆಂಟ್ ಆಫೀಸರ್ ಶ್ರುತಿ ಬಿ.ಎಸ್, ಇಪಿಎಫ್‌ಓ ಖಾತಾಧಿಕಾರಿ ಪ್ರಫುಲ್ ಇಟ್ಟಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿ ಶಾಸ್ತ್ರಿ, ಹೋಟೆಲ್ ಮಾಲೀಕರ ಧರ್ಮದತ್ತಿ ಗೌರವ ಕಾರ್ಯದರ್ಶಿ ಸುಬ್ರಹ್ಮಣ್ಯ ತಂತ್ರಿ, ಹೋಟೆಲ್ ಮಾಲೀಕರ ಸಂಘದ ಗೌರವ ಕಾರ್ಯದರ್ಶಿ ಎ.ಆರ್. ರವೀಂದ್ರ ಭಟ್ ಹಾಗೂ ವಿವಿಧ ಸಂಸ್ಥೆಗಳ ಸದಸ್ಯರು, ಹೋಟೆಲ್ ಉದ್ಯಮಿಗಳು ಪಾಲ್ಗೊಂಡಿದ್ದರು.

ಇಂದು ವಿವಿದೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ನ.28– ಮೇಟಗಳ್ಳಿ ಶಾಖಾ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ನ.29 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಜಯದೇವ ನಗರ, ಭೈರವೇಶ್ವರ ನಗರ, ಲೋಕನಾಯಕ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಚಿತ್ತೋರಗಢದ 'ಬಪ್ಪಿ ಲಹಿರಿ'ಗೆ 5 ಕೋಟಿ ರೂ.ಗೆ ಬ್ಲಾಕ್‌ಮೇಲ್




ಚಿತ್ತೋರಗಢ: ಸದಾ ಮೈಮೇಲೆ ಚಿನ್ನದ ಆಭರಣಗಳನ್ನು ಧರಿಸಿರುವುದರಿಂದಲೇ ಪ್ರಸಿದ್ಧಿ ಪಡೆದಿರುವ ರಾಜಸ್ಥಾನದ ಚಿತ್ತೋರಗಢದ ಹಣ್ಣಿನ ವ್ಯಾಪಾರಿ ಕನ್ನಯ್ಯಲಾಲ್ ಖತಿಕ್ ಎಂಬುವವರಿಗೆ 5 ಕೋಟಿ ನೀಡುವಂತೆ ಬೆದರಿಕೆ ಕರೆ ಬಂದಿದೆ.

ಕರೆ ಮಾಡಿದವರು ಗ್ಯಾಂಗ್‌ಸ್ಟರ್ ರೋಹಿತ್ ಗೋದರಾ ಗ್ಯಾಂಗಿನವರು ಎಂದು ಹೇಳಿರುವುದಾಗಿ ವರದಿಯಾಗಿದೆ. ಖತಿಕ್ ಅವರಿಗೆ ಚಿನ್ನದ ಮೇಲಿರುವ ಪ್ರೀತಿಗಾಗಿ 'ಚಿತ್ತೋರಗಢದ ಬಪ್ಪಿ ಲಹರಿ' ಎಂದೂ ಕರೆಯುವುದುಂಟು. ಎರಡು ದಿನದ ಹಿಂದೆ ಮಿಸ್ಡ್ ಕಾಲ್ ಬಂದಿತ್ತು. ನಂತರ ವಾಟ್ಸಾಪ್ ಮೂಲಕ ಅದೇ ಸಂಖ್ಯೆಯಿಂದ ಕರೆ ಬಂದಿತ್ತು. ಅವುಗಳನ್ನು ಸ್ವೀಕರಿಸದ ಖತಿಕ್‌ಗೆ ನಂತರ ಧ್ವನಿ ಸಂದೇಶ ಕಳುಹಿಸಲಾಗಿತ್ತು.

ಮುಂದೆ ಎಂದೂ ಚಿನ್ನವನ್ನು ಧರಿಸುವಂತಿಲ್ಲ. ಒಪ್ಪದಿದ್ದರೆ 5 ಕೋಟಿ ಪರಿಹಾರ ನೀಡಬೇಕು ಎಂದು ಬೆದರಿಕೆಯೊಡ್ಡಲಾಗಿತ್ತು. ಈ ಕುರಿತು ಖತಿಕ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಬಿಕಾನೆರ್ ಮೂಲದವನಾದ ಗೊದರಾ, ಕೆನಡಾದಲ್ಲಿ ನೆಲೆಸಿದ್ದಾರೆ ಎಂದೆನ್ನಲಾಗಿದೆ. ಈತನ ಮೇಲೆ ಭಾರತದ ವಿವಿಧ ಪೊಲೀಸ್ ಠಾಣೆಗಳಲ್ಲಿ ಸುಮಾರು 32 ಪ್ರಕರಣಗಳಿವೆ.

ಅಯ್ಯಪ್ಪ ಭಕ್ತರಿಗೆ ಪ್ರಯಾಣಿಕ ವಿಮಾನಯಾನ ಸಚಿವಾಲಯದಿಂದ ಗಿಫ್ಟ್

ನವದೆಹಲಿ: ಶಬರಿಮಲೆಗೆ ಪವಿತ್ರ ಯಾತ್ರೆ ಕೈಗೊಳ್ಳುವ



ಅಯ್ಯಪ್ಪ ಭಕ್ತರು ಪವಿತ್ರ ಇರುಮುಡಿಯನ್ನು ವಿಮಾನಗಳಲ್ಲಿ ಚೆಕ್–ಇನ್ ಲಗೇಜ್ ಆಗಿ ಕೊಂಡೊಯ್ಯುವ ಬದಲು ಕ್ಯಾಬಿನ್ ಲಗೇಜ್ ಆಗಿ ಕೊಂಡೊಯ್ಯಲು ಅವಕಾಶ ನೀಡಲಾಗುವುದು ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ನಾಗರಿಕ ವಿಮಾನಯಾನ ಸಚಿವ ಕೆ. ರಾಮ್ ಮೋಹನ್ ನಾಯ್ಡು 'ಎಕ್ಸ್'ನಲ್ಲಿ ಮಾಡಿರುವ ವೀಡಿಯೊ ಪೋಸ್ಟ್‌ನಲ್ಲಿ ಶುಕ್ರವಾರದಿಂದ ಜನವರಿ 20 ರವರೆಗೆ ರಿಯಾಯಿತಿ ಲಭ್ಯವಿದೆ ಎಂದು ಹೇಳಿದರು.

ಪವಿತ್ರ ಇರುಮುಡಿಗೆ ಸಂಬಂಧಿಸಿದ ಆಳವಾದ ಭಾವನೆಗಳನ್ನು ಅರ್ಥಮಾಡಿಕೊಂಡ ನಾಗರಿಕ ವಿಮಾನಯಾನ ಸಚಿವಾಲಯ ಭಕ್ತರು ವಿಮಾನಗಳಲ್ಲಿ ಅದನ್ನು ತಮ್ಮೊಂದಿಗೆ ಕೊಂಡೊಯ್ಯಲು ಅನುಮತಿ ನೀಡಲು ನಿರ್ಧರಿಸಿದೆ, ಅವರ ಸಾಂಪ್ರದಾಯಿಕ ಆಚರಣೆಗಳು ಅಡೆತಡೆಯಿಲ್ಲದೆ ಮುಂದುವರಿಯುವುದನ್ನು ಈ ಕ್ರಮ ಖಚಿತಪಡಿಸುತ್ತದೆ. ಜನರ ಭಾವನೆಗಳನ್ನು ಸಂಪೂರ್ಣವಾಗಿ ಗೌರವಿಸುವಾಗ ಎಲ್ಲಾ ಅಗತ್ಯ ಭದ್ರತಾ ಪ್ರೋಟೋಕಾಲ್‌ಗಳನ್ನು ಅನುಸರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಲೈಂಗಿಕ ಕಿರುಕುಳ ಆರೋಪ: ಕೇರಳ ಕಾಂಗ್ರೆಸ್ ಶಾಸಕನ ವಿರುದ್ಧ ದೂರು ದಾಖಲು

ತಿರುವನಂತಪುರ: ಹಲವು ಮಹಿಳೆಯರ ಮೇಲೆ



ಲೈಂಗಿಕ ದೌರ್ಜನ್ಯವೆಸಗಿದ ಆರೋಪ ಎದುರಿಸುತ್ತಿರುವ ಪಾಲಕ್ಕಾಡ್ ಶಾಸಕ ರಾಹುಲ್ ಮಮ್‌ಕೂತಥಿಲ್ ವಿರುದ್ಧ ಸಂತ್ರಸ್ತ ಮಹಿಳೆಯೊಬ್ಬರ ಹೇಳಿಕೆ ಆಧಾರದ ಮೇಲೆ ಶುಕ್ರವಾರ ವಲಿಯಮಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಭೇಟಿ ಮಾಡಿದ್ದ ದೂರುದಾರೆ ರಾಹುಲ್ ಮಮ್‌ಕೂತಥಿಲ್ ವಿರುದ್ಧ ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದರು. ಸಿಎಂ ಭೇಟಿ ಬಳಿಕ ಠಾಣೆಗೆ ಆಗಮಿಸಿದ ಮಹಿಳೆ ಪೊಲೀಸರಿಗೆ ವಿವರವಾಗಿ ಹೇಳಿಕೆ ನೀಡಿ ದೂರು ದಾಖಲಿಸಿದ್ದಾರೆ.

ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯ, ಬಲವಂತದ ಗರ್ಭಪಾತ ಮತ್ತು ಜೀವ ಬೆದರಿಕೆ ಸಂಬಂಧವಾಗಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಾಯ್ದೆಗಳ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇನ್ನು ಮಹಿಳೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಸಂಪರ್ಕಿಸಿದ ನಂತರ ಮಮ್‌ಕೂಟತಿಲ್ ತಲೆಮರೆಸಿಕೊಂಡಿರುವುದಾಗಿ ವರದಿಯಾಗಿದೆ. ಸದ್ಯ ಪತ್ತೆಹಚ್ಚಲು ಕಾರ್ಯಾಚರಣೆ ಆರಂಭಿಸಿದ್ದಾರೆ.

ಟ್ರಂಪ್ ಸುಂಕ ಸಮರದ ಮಧ್ಯೆಯೂ ನಿರೀಕ್ಷೆಗೂ ಮೀರಿ ಜಿಡಿಪಿ ವೃದ್ಧಿ

ನವದೆಹಲಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್



ಸುಂಕ ಸಮರ ವಿಧಿಸಿದ್ದರೂ ಜುಲೈ–ಸೆಪ್ಟೆಂಬರ್ ಅವಧಿಯ ಎರಡನೇ ತ್ರೈಮಾಸಿಕದಲ್ಲಿ ಭಾರತದ ಆರ್ಥಿಕತೆ ನಿರೀಕ್ಷೆಗೂ ಮೀರಿ ವೃದ್ಧಿಯಾಗಿದೆ.

ಈ ಅವಧಿಯಲ್ಲಿ ಹಲವು ಸಂಸ್ಥೆಗಳು ಜಿಡಿಪಿ 7% ರಷ್ಟು ಪ್ರಗತಿ ಸಾಧಿಸಬಹುದು ಎಂದು ಅಂದಾಜು ಮಾಡಿದ್ದವು. ಆದರೆ ಈ ನಿರೀಕ್ಷೆಗೂ ಮೀರಿ ಜಿಡಿಪಿ 8.2% ರಷ್ಟು ಪ್ರಗತಿ ಸಾಧಿಸಿದೆ. ಕಳೆದ ಹಣಕಾಸು ವರ್ಷದ ಈ ಅವಧಿಯಲ್ಲಿ 5.6% ಬೆಳವಣಿಗೆ ಸಾಧಿಸಿತ್ತು.

ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ 48.63 ಲಕ್ಷ ಕೋಟಿ ರೂ.ಗಳಾಗಿದ್ದು ಒಂದು ವರ್ಷದ ಹಿಂದೆ ಈ ಅವಧಿಯಲ್ಲಿ 44.94 ಲಕ್ಷ ಕೋಟಿ ರೂ. ದಾಖಲಾಗಿತ್ತು. ಕೃಷಿ ಮಾತ್ರ 3.5% ಬೆಳವಣಿಗೆ ಸಾಧಿಸಿದೆ. ಅತಿವೃಷ್ಟಿ ಕಾರಣದಿಂದ ಕೃಷಿಯಲ್ಲಿ ಜಾಸ್ತಿ ಪ್ರಗತಿ ಕಂಡು ಬಂದಿಲ್ಲ.

ಯಾವ ವಲಯದ ಪಾಲು ಎಷ್ಟು: ಉತ್ಪಾದನೆ 9.1%, ನಿರ್ಮಾಣ 8%, ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವೆಗಳು 27%, ವ್ಯಾಪಾರ, ಹೋಟೆಲ್, ಸಾರಿಗೆ ಇತ್ಯಾದಿಗಳು 17%, ವಿದ್ಯುತ್, ನೀರು ಇತ್ಯಾದಿ 3%, ಗಣಿಗಾರಿಕೆ 1%, ಕೃಷಿ ಅರಣ್ಯ, ಮೀನುಗಾರಿಕೆ 14%, ಸಾರ್ವಜನಿಕ ಆಡಳಿತ, ರಕ್ಷಣೆ ಇತ್ಯಾದಿ ಸೇವೆಗಳು 16%

ಶ್ರೀಲಂಕಾಕ್ಕೆ ಆಪರೇಷನ್ ಸಾಗರ್ ಬಂಧು ಅಡಿ ಭಾರತದಿಂದ ಸಹಾಯಹಸ್ತ

ಕೊಲಂಬೋ, ನ. 28: ದಿತ್ವಾ ಚಂಡಮಾರುತದಿಂದ ಶ್ರೀಲಂಕಾದಲ್ಲಿ ಸಂಭವಿಸಿದ ಜೀವ ಹಾನಿಗೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ಸೂಚಿಸಿದ್ದಾರೆ. ಹಾಗೇ, ನೆರೆಯ ದ್ವೀಪ ರಾಷ್ಟ್ರವಾದ



ಶ್ರೀಲಂಕಾಕ್ಕೆ 'ಆಪರೇಷನ್ ಸಾಗರ್ ಬಂಧು' ಅಡಿಯಲ್ಲಿ ನೆರವು ನೀಡಿದ್ದಾರೆ. ಚಂಡಮಾರುತದಿಂದ ನಲುಗಿರುವ ಶ್ರೀಲಂಕಾಕ್ಕೆ ಭಾರತ ಮೊದಲ ಹಂತದ ಪರಿಹಾರ ಸಾಮಗ್ರಿಗಳು ಮತ್ತು ಹೆಚ್‌ಎಡಿಆರ್ ಬೆಂಬಲವನ್ನು ರವಾನಿಸಿದೆ. ಪರಿಸ್ಥಿತಿ ಹದಗೆಟ್ಟರೆ ಹೆಚ್ಚಿನ ನೆರವು ಮತ್ತು ಸಹಾಯವನ್ನು ನೀಡಲು ಸಿದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ದಿತ್ವಾ ಚಂಡಮಾರುತದಿಂದ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಶ್ರೀಲಂಕಾದ ಜನರಿಗೆ ನನ್ನ ಹೃತ್ಪೂರ್ವಕ ಸಂತಾಪಗಳು. ಪ್ರಾಣ ಕಳೆದುಕೊಂಡವರ ಕುಟುಂಬಗಳ ಸುರಕ್ಷತೆ ಮತ್ತು ಚೇತರಿಕೆಗಾಗಿ ನಾನು ಪ್ರಾರ್ಥಿಸುತ್ತೇನೆ. ನಮ್ಮ ಹತ್ತಿರದ ಕಡಲ ನೆರೆಯವರೊಂದಿಗೆ ಭಾರತವು ಸದಾ ನಿಲ್ಲುತ್ತದೆ. ಆಪರೇಷನ್ ಸಾಗರ್ ಬಂಧು ಅಡಿಯಲ್ಲಿ ಭಾರತ ಶ್ರೀಲಂಕಾಕ್ಕೆ ಪರಿಹಾರ ಸಾಮಗ್ರಿಗಳು ಮತ್ತು ಪ್ರಮುಖ ಹೆಚ್‌ಎಡಿಆರ್ ಬೆಂಬಲವನ್ನು ತುರ್ತಾಗಿ ರವಾನಿಸಿದೆ. ಅಗತ್ಯವಿದ್ದರೆ ಇನ್ನೂ ಹೆಚ್ಚಿನ ನೆರವು ಮತ್ತು ಸಹಾಯವನ್ನು ಒದಗಿಸಲು ನಾವು ಸಿದ್ಧರಾಗಿದ್ದೇವೆ ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೀಳರಿಮೆಗೊಳಗಾಗದೆ ಕರ್ತವ್ಯ ನಿರ್ವಹಿಸುವ ಪೌರಕಾರ್ಮಿಕರು


ಪೌರಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ಡಾ.ಮಂತರಗೌಡ ಮಾತನಾಡಿದರು.

ಮಡಿಕೇರಿ, ನ.28–ಸಮಾಜದಲ್ಲಿ ಪೌರ ಕಾರ್ಮಿಕರು ಯಾವುದೇ ಕೀಳರಿಮಿಗೆ ಒಳಗಾಗದೆ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿರುತ್ತಾರೆ ಇಂಥ ಕೆಲಸ ಮಾಡುವವರನ್ನು ನಾವು ಎಷ್ಟು ಗೌರವಿಸಿದರೂ ಸಾಲದು ಎಂದು ಶಾಸಕ ಡಾ.ಮಂತರ ಗೌಡ ಅಭಿಪ್ರಾಯಪಟ್ಟಿದ್ದಾರೆ.

ನಗರದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದ 'ಪೌರಕಾರ್ಮಿಕರ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿ, ನಗರವನ್ನು ಸ್ವಚ್ಛತೆಯಾಗಿಟ್ಟು, ನಮಗೆ ಪರಿಶುದ್ಧ ಗಾಳಿ ದೊರೆಯ ಬೇಕಾದರೆ ಪೌರಕಾರ್ಮಿಕರ ಸೇವೆ ಪ್ರಮುಖವಾಗಿದೆ. ಆ ನಿಟ್ಟಿನಲ್ಲಿ ಪೌರಕಾರ್ಮಿಕರನ್ನು ಗೌರವಿಸಿ, ಅವರಿಗೆ ಸರ್ಕಾರದ ಸೌಲಭ್ಯಗಳು ತಲುಪ ಬೇಕು ಎಂದು ತಿಳಿಸಿದರು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಮಾತನಾಡಿ, ಪೌರಕಾರ್ಮಿಕರು ನಗರ ಹಾಗೂ ಪರಿಸರ ಶುಚಿತ್ವಕ್ಕೆ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದಾರೆ. ಅಂತವರನ್ನು ಸದಾ ಸ್ಮರಿಸಬೇಕು. ಪೌರ ಕಾರ್ಮಿಕರು ತಮ್ಮ ವೃತ್ತಿಯೊಂದಿಗೆ ಆರೋಗ್ಯದ ಕಡೆಯೂ ಹೆಚ್ಚಿನ ಗಮನಹರಿಸಬೇಕು ಎಂದು ಸಲಹೆ ಮಾಡಿದರು. ಉಪಾಧ್ಯಕ್ಷ ಮಹೇಶ್ ಜೈನಿ ಮಾತನಾಡಿ, ಪೌರಕಾರ್ಮಿಕರು ಸ್ವಚ್ಛತಾ ಸೇನಾನಿಗಳಾಗಿದ್ದು, ಪೌರಕಾರ್ಮಿಕರಿಗೆ ಸಮಾಜ ಸದಾ ಆಭಾರಿಯಾಗಿರಬೇಕು. ದಸರಾ ಸೇರಿದಂತೆ ರಾಷ್ಟ್ರೀಯ ಹಬ್ಬ ವಿಶೇಷ ಸಂದರ್ಭದಲ್ಲಿ ಇವರ ಪಾತ್ರ ಹೆಚ್ಚಿನದ್ದು ಎಂದರು.

ನಗರಸಭೆ ಸದಸ್ಯೆ ಅನಿತಾ ಪೂವಯ್ಯ ಮಾತನಾಡಿ, ಪೌರಕಾರ್ಮಿಕರು ತಾವು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಮುಖಗವಸು, ಕೈಗವಸು, ಕಾಲಿಗೆ ಬೂಟು ಹಾಕಿಕೊಂಡು ಕರ್ತವ್ಯ ನಿರ್ವಹಿಸಬೇಕು. ಇದರಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರೆ, ಸದಸ್ಯ ಅರುಣ್‌ಶೆಟ್ಟಿ ಮಾತನಾಡಿ ನಗರಸಭೆಯಲ್ಲಿ 23 ಚುನಾಯಿತ ಹಾಗೂ 5 ನಾಮ ನಿರ್ದೇಶಿತ ಸದಸ್ಯರಿದ್ದರೂ ಪೌರ ಕಾರ್ಮಿಕರ ದಿನಾಚರಣೆಗೆ ಕೇವಲ 5 ಮಂದಿ ಆಗಮಿಸಿದ್ದಾರೆ. ಈ ರೀತಿ ಆದಲ್ಲಿ ಪೌರಕಾರ್ಮಿಕರನ್ನು ಎಷ್ಟರ ಮಟ್ಟಿಗೆ ಗೌರವಿಸುತ್ತೇವೆ ಎಂದು ತಿಳಿಯುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ನಗರಸಭೆ ಎಂಜಿನಿಯರ್ ಸತೀಶ್ ಬಿಸಿಲು, ಮಳೆ ಗಾಳಿ, ಚಳಿ ಎನ್ನದೆ ಪೌರ ಕಾರ್ಮಿಕರು ಸೂರ್ಯ ಹುಟ್ಟುವುದಕ್ಕೂ ಮೊದಲೇ ಕರ್ತವ್ಯ ನಿರ್ವಹಿಸುತ್ತಾರೆ ಎಂದರು.

ಪೌರಕಾರ್ಮಿಕರ ದಿನಾಚರಣೆ ಪ್ರಯುಕ್ತ ವಿವಿಧ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸನ್ಮಾನಿಸಲಾಯಿತು. ಮುಡಾ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಸತ್ಯನಾರಾಯಣ, ನಾಮ ನಿರ್ದೇಶಿತ ಸದಸ್ಯರಾದ ಜುಲೈಕಾಬಿ, ಮುತ್ತುರಾಜ್, ಪ್ರಮುಖ ಪ್ರಕಾಶ್ ಆಚಾರ್ಯ, ಇತರರಿದ್ದರು. ಎಇಇ ಹೇಮಂತ್ ಕುಮಾರ್ ಸ್ವಾಗತಿಸಿದರು. ಲೆಕ್ಕಾಧಿಕಾರಿ ತಾಹಿರ್ ನಿರೂಪಿಸಿದರು.

ಭೂಮಿ ಪೂಜೆ: ಜಿಲ್ಲಾಡಳಿತ, ಜಿಪಂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಗರದ ಐಟಿಐ ಕಾಲೇಜಿನ ಬಳಿ 379 ಲಕ್ಷ ರೂ. ವೆಚ್ಚದಲ್ಲಿ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ 448 ಲಕ್ಷ ರೂ. ವೆಚ್ಚದಲ್ಲಿ ಬಾಲಕಿಯರ ವಿದ್ಯಾರ್ಥಿ ನಿಲಯ ನೂತನ ಕಟ್ಟಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾ ಕ್ರೀಡಾಂಗಣ ಬಳಿ 250 ಲಕ್ಷ ರೂ. ವೆಚ್ಚದಲ್ಲಿ ಕ್ರೀಡಾ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಮಂದ್‌ನ ರಕ್ಷಣೆ ನಮ್ಮೆಲ್ಲರ ಹೊಣೆ


ಕೊಡವ ಸಮಾಜದ ಕೋಲ್ ಮಂದ್‌ನಲ್ಲಿ ಶಾಸಕದ್ವಯರು ಆಲದ ಗಿಡ ನೆಟ್ಟರು.

ಮಡಿಕೇರಿ, ನ.28– ಮಂದ್‌ನ ರಕ್ಷಣೆಯ ಜವಾಬ್ದಾರಿ ನಮ್ಮೆಲ್ಲರ ಹೊಣೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ನಗರದ ಕೊಡವ ಸಮಾಜದ ಕೋಲ್ ಮಂದ್‌ನಲ್ಲಿ 'ಅಲ್ ಮರ ನಡ್‌ಪ'(ಆಲದ ಮರ ನೆಡುವ) ಕಾರ್ಯಕ್ರಮದಲ್ಲಿ ಆಲದ ಗಿಡ ನೆಟ್ಟು ಮಾತನಾಡಿ ಸುಮಾರು 250 ವರ್ಷಗಳ ಇತಿಹಾಸವಿರುವ ಮಂದ್‌ನಲ್ಲಿದ ಬೃಹತ್ ಮರ ಕಳೆದ ಮಳೆಗಾಲದಲ್ಲಿ ಮುರಿದು ಬಿದ್ದ ಪರಿಣಾಮ ನೂತನ ಕಟ್ಟೆ ನಿರ್ಮಿಸಿ ಆಲದ ಮರವನ್ನು ನೆಡಲಾಗಿದೆ. ಮಂದ್‌ನ ರಕ್ಷಣೆಯ ಜವಾಬ್ದಾರಿ ನಮ್ಮೆಲ್ಲರ ಹೊಣೆ ಎಂದು ಶಾಸಕ ಪೊನ್ನಣ್ಣ ತಿಳಿಸಿದರು.

ಶಾಸಕ ಮಂತರ್‌ಗೌಡ ಮಾತನಾಡಿ, ಹಿಂದೂ ಸಂಪ್ರದಾಯದ ಧಾರ್ಮಿಕ ಆಚರಣೆಯಂತೆ ಊರಿಗೆ ಒಂದು ಆಲದಮರ ಇರುತಿತ್ತು. ಅದರಂತೆ ಇಲ್ಲಿನ ಮಂದ್‌ನಲ್ಲಿ ಕೊಡವ ಸಂಪ್ರದಾಯದಂತೆ ಅರಳಿಮರ ನೆಡ ಲಾಗಿರುವುದು ಹೆಮ್ಮೆಯ ವಿಷಯವೆಂದರು. ಮಂದ್‌ನ ಅಭಿವೃದ್ಧಿಗೆ ಅನುದಾನದಲ್ಲಿ ಹಾಗೂ ವೈಯಕ್ತಿಕ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಸಂಸದ ಯದುವೀರ್ ಮಾತನಾಡಿ, ಕೊಡಗಿನ ಸಂಸ್ಕೃತಿ, ಐನ್ ಮನೆಗಳು, ಕೋಟೆ, ಸಂಸ್ಕೃತಿಯ ನೆಲೆಯಾದ ಮಡಿಕೇರಿಯಲ್ಲಿ ಪುರಾತನ ಮಂದ್ ರಕ್ಷಣೆ ನಮ್ಮೆಲ್ಲ ಹೊಣೆ ಎಂದರು.

ಮಾಜಿ ಎಂಎಲ್‌ಸಿ ಶಾಂತೆಯಂಡ ವೀಣಾ ಅಚ್ಚಯ್ಯ ಪುರಾತನ ನೆಲೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲ ಹೊಣೆ ಎಂದರು. ಇದಕ್ಕೂ ಮುನ್ನ ಕೊಡವ ಸಂಪ್ರದಾಯ ಉಡುಪಿನೊಂದಿಗೆ ತಳಿಯಕ್ಕಿ ದೀಪ ಹಿಡಿದು ದುಡಿ ಕೊಟ್ಟು ಹಾಡಿನೊಂದಿಗೆ ಶಾಸಕ ಪೊನ್ನಣ್ಣ ಅವರನ್ನು ನೂತನ ಮಂದ್‌ಗೆ ಕರೆತರಲಾಯಿತು.

ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ, ಉಪಾಧ್ಯಕ್ಷ ಕೇಕಡ ವಿಜುದೇವಯ್ಯ, ಗೌರವ ಕಾರ್ಯದರ್ಶಿ ಬೊಪ್ಪಂಡ ಸರಳ ಕರುಂಬಯ್ಯ, ಜಂಟಿಕಾರ್ಯದರ್ಶಿ ನಂದಿನೆರವಂಡ ದಿನೇಶ್, ನಿರ್ದೇಶಕರಾದ ಶಾಂತೆಯಂಡ ವಿಶಾಲ್ ಕಾರ್ಯಪ್ಪ, ಮಂಡೀರ ಸದಾಮುದ್ದಪ್ಪ, ಕಾಳಚಂಡ ಅಪ್ಪಣ್ಣ, ಮೂವೆರ ಜಯರಾಂ, ಪುತ್ತರಿರ ಕರುಣ್ ಕಾಳಯ್ಯ, ನಂದಿನೆವಂಡ ರವಿಬಸಪ್ಪ, ಕನ್ನಂಡ ಕವಿತ ಕಾವೇರಮ್ಮ, ಕಾಂಡೇರ ಲಲ್ಲು, ಪಾಲೆ ಯಂಡ ರೂಪ, ಕೊಡವಕೇರಿ ಪದಾಧಿಕಾರಿಗಳಿದ್ದರು

ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ



ನಾಪೋಕ್ಲು: ನೇಣು ಬಿಗಿದುಕೊಂಡು ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಇಲ್ಲಿಗೆ ಸಮೀಪದ ಚೆರಿಯಪರಂಬುಲ್ಲಿ ನಡೆದಿದೆ.

ಇಲ್ಲಿನ ಪೈಸಾರಿ ನಿವಾಸಿ ಗಣೇಶ್ ಹಾಗೂ ಜಾನಕಿ ದಂಪತಿ ಪುತ್ರಿ ಸ್ಥಳೀಯ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಥಮ ಪಿಯುಸಿ ವಿದ್ಯಾರ್ಥಿ ಚಿತ್ರ (17) ಆತ್ಮಹತ್ಯೆ ಮಾಡಿಕೊಂಡಿರುವ ವಿದ್ಯಾರ್ಥಿನಿ.

ತಿಂಗಳಿನಿಂದ ಚಿತ್ರ ಕಾಲೇಜಿಗೆ ಹೋಗದೆ ಮನೆಯಲ್ಲಿಯೇ ಇದ್ದಳು ಎನ್ನಲಾಗಿದೆ. ಶುಕ್ರವಾರ ಬೆಳಿಗ್ಗೆ ಪೋಷಕರು ಕೆಲಸಕ್ಕೆ ತೆರಳಿದ ನಂತರ ಕೋಣೆಯೊಳಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ತಂದೆ ಗಣೇಶ್ ನೀಡಿದ ದೂರಿನ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಚ್.ಆರ್.ನಂದ ನಿಧನ



ನಾಪೋಕ್ಲು, ನ.28–ಪಾಲೂರು ಗ್ರಾಮದ ನಿವಾಸಿ ಎಚ್.ಆರ್.ನಂದ (57) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಅವರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು. ಮೃತರು ತಾಯಿ, ಪತ್ನಿ ಹಾಗೂ ಪುತ್ರ, ಮತ್ತು ಪುತ್ರಿ ಸೇರಿದಂತೆ ಬಂಧು ಬಳಗವನ್ನು ಆಗಲಿದ್ದಾರೆ.

ಕಾರ್ಮಿಕ ಸಂಹಿತೆ ರದ್ದತಿಗೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ

ಮಡಿಕೇರಿ, ನ.28–ಕೇಂದ್ರ ಸರ್ಕಾರದ ನಾಲ್ಕು ಕಾರ್ಮಿಕ ಸಂಹಿತೆಗಳು ದುಡಿಯುವ ವರ್ಗಕ್ಕೆ ಮಾರಕವಾಗಿದೆ ಎಂದು ಆರೋಪಿಸಿ ಕಾರ್ಮಿಕ ಸಂಹಿತೆಗಳ ಪ್ರತಿಗಳನ್ನು ದಹಿಸುವ ಮೂಲಕ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್(ಸಿಐಟಿಯು) ಸಂಘಟನೆ ಪ್ರತಿಭಟನೆ ನಡೆಸಿತು.

ಸಿಐಟಿಯು ಸಂಘಟನೆಯ ಪ್ರಮುಖರಾದ ಪಿ.ಆರ್.ಭರತ್, ಪಿ.ಎ. ಸಾಬು ನೇತೃತ್ವದಲ್ಲಿ ಬುಧವಾರ ಮಧ್ಯಾಹ್ನ ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಸಂಹಿತೆಯ ಪ್ರತಿಗಳನ್ನು ಸುಡುವ ಮೂಲಕ ಸಂಘಟನೆಯ ಪದಾಧಿಕಾರಿಗಳು ಮತ್ತು ಸದಸ್ಯರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು.

ಕಾರ್ಮಿಕ ಮುಖಂಡ ಪಿ.ಆರ್.ಭರತ್ ಮಾತನಾಡಿ, ಕಾರ್ಮಿಕರಿಗೆ ಪೂರಕವಾಗಿದ್ದ 29 ಕಾರ್ಮಿಕ ಕಾನೂನುಗಳನ್ನು ನಾಲ್ಕು ಸಂಹಿತೆಗಳನ್ನಾಗಿ ರೂಪಿಸುವ ಮೂಲಕ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಸಂಹಿತೆಗಳು ಉಳ್ಳವರ ಪರವಾಗಿವೆಯೇ ಹೊರತು ಕಾರ್ಮಿಕರ ಹಿತವನ್ನು ಕಾಪಾಡುವಂತದ್ದಲ್ಲ. ತಕ್ಷಣವೆ ಈ ನಾಲ್ಕು ಸಂಹಿತೆಗಳನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಸಂಘಟನೆಯ ಪ್ರಮುಖ ಪಿ.ಎ.ಸಾಬು ಮಾತನಾಡಿ, ನೂತನ ಕಾರ್ಮಿಕ ಸಂಹಿತೆಗಳ ಮೂಲಕ ಕಾರ್ಮಿಕರ ದುಡಿಯುವ ಅವಧಿಯನ್ನು 12 ಗಂಟೆ ಗಳಿಗೆ ಹೆಚ್ಚಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇದು ಕೇವಲ ಕಾರ್ಮಿಕರಿಗಷ್ಟೆ ಅಲ್ಲ, ಬಿಸಿಯೂಟ ತಯಾರಕರು, ಅಂಗನವಾಡಿ ನೌಕರರಿಗೂ ಸಂಬಂಧಿಸಿದ್ದಾಗಿದೆ. ಇಂತಹ ಕಾನೂನುಗಳ ಮೂಲಕ ಕೇಂದ್ರ ಸರ್ಕಾರ ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಸಿಐಟಿಯು ಸಂಹಿತೆಯ ಪ್ರತಿ ಸುಡುವುದರ ಮೂಲಕ ಪ್ರತಿಭಟನೆ ನಡೆಸಿತು

ಕಾರ್ಮಿಕ ಮುಖಂಡ ಎನ್.ಡಿ.ಕುಟ್ಟಪ್ಪ ಮಾತನಾಡಿ, ಕಾರ್ಮಿಕ ಸಂಹಿತೆಗಳ ಮೂಲಕ ಕಾರ್ಮಿಕ ಸಮುದಾಯವನ್ನು ದಬ್ಬಾಳಿಕೆಗೆ ಗುರಿಪಡಿಸಲು ಕೇಂದ್ರ ಮುಂದಾಗಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ರಮೇಶ್, ಹರಿದಾಸ್, ಮಂಜು, ಆಸ್ಪತ್ರೆ ನೌಕರರ ಸಂಘದ ಅಧ್ಯಕ್ಷೆ ಜಾನಕಿ ರಜನಿ ಮೊದಲಾದವರು ಪಾಲ್ಗೊಂಡಿದ್ದರು.

ಕರಾಟೆಯಲ್ಲಿ ದೈವಿಕ್ ಸಾಧನೆ



ನಾಪೋಕ್ಲು, ನ.28–ಇಂಟರ್ ನ್ಯಾಷನಲ್ ಮುಬಿನಿ ಹಾ ಶಿಟೋ–ಆರ್ ವೈಯು ಕರಾಟೆ ಅಸೋಸಿಯೇಷನ್ ಆಯೋಜಿಸಿದ 32ನೇ ರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಬಿ.ಎಸ್ ದೈವಿಕ್ ಬೆಳ್ಳಿ ಮತ್ತು ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿದ್ದಾರೆ.

ಈ ಪಂದ್ಯಾವಳಿಯಲ್ಲಿ ಸ್ಥಳಿಯ ಸೇಕ್ರೆಡ್ ಹಾರ್ಟ್ ಆಂಗ್ಲ ಮಾಧ್ಯಮ ಶಾಲೆಯ ಐದನೇ ತರಗತಿ ವಿದ್ಯಾರ್ಥಿ ಬಿ.ಎಸ್ ದೈವಿಕ್ ಭಾಗವಹಿಸಿ ಕುಮಿಟೆ ವಿಭಾಗದಲ್ಲಿ ಬೆಳ್ಳಿ ಪದಕ ಮತ್ತು ಕಟಾದಲ್ಲಿ ಕಂಚಿನ ಪದಕವನ್ನು ಪಡೆದುಕೊಂಡು ಸಾಧನೆ ಮಾಡಿದ್ದಾರೆ. ಇವರು ಸ್ಥಳಿಯ ನಿವಾಸಿ ಸವಿನ್ ಕುಮಾರ್ ಕುಮಾರ್ ಮತ್ತು ವನಿತಾ ದಂಪತಿಗಳ ಪುತ್ರ ಇವರು ಚೆಟ್ಟಿಯಾರಂಡ ದಿಲನ್ ತಿಮ್ಮಯ್ಯ ಮತ್ತು ದೀರಜ್ ಕರಿಯಪ್ಪ ಸಹೋದರರಿಂದ ತರಬೇತಿ ಪಡೆಯುತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಕಾವೇರಿ ಕಾರ್ನಿವಲ್

ವಿರಾಜಪೇಟೆ, ನ.28–ಕಾವೇರಿ ಪದವಿ ಪೂರ್ವ ಕಾಲೇಜು ವತಿಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವರ್ಷಂ ಪ್ರತಿ ನಡೆಸಿಕೊಂಡು ಬರುತ್ತಿರುವ ಜಿಲ್ಲಾ ಮಟ್ಟದ ವಿವಿಧ ಕ್ರೀಡೆ ಹಾಗೂ ಆಟೋಟ ಸ್ಪರ್ಧೆ ಕಾವೇರಿ ಕಾರ್ನಿವಲ್ ಕಾರ್ಯಕ್ರಮವನ್ನು ಡಿ.2 ರಂದು ಕಾಲೇಜಿನ ಆವರಣದಲ್ಲಿ ಕಾಲೇಜು ಆಡಳಿತ ಮಂಡಳಿ ಹಾಗೂ ದಾನಿಗಳ ಸಹಕಾರದಲ್ಲಿ ಪೂರ್ವಾಹ್ನ 9 ರಿಂದ ಸಂಜೆ 4 ಗಂಟೆಯವರೆಗೆ ನಡೆಸಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲ ನುಚ್ಚಿಮಣಿಯಂಡ ಎಂ ನಾಣಯ್ಯ ಹೇಳಿದರು.

ಇದು 8ನೇ ವರ್ಷದ ಸ್ಪರ್ಧೆಗಳಾಗಿದ್ದು ಇದರಲ್ಲಿ ಜಿಲ್ಲೆಯ 45 ಶಾಲಾ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಬಗೆಯ ತಿಂಡಿ, ತಿನಿಸುಗಳು, ತಂಪು ಪಾನಿಯಗಳು, ಮನರಂಜನೆಯ ಆಟಗಳ ಸುಮಾರು 25 ಮಳಿಗೆಗಳನ್ನು ಇಡುವುದರ ಮೂಲಕ ತಮ್ಮ ಪ್ರತಿಭೆ ಅನಾವರಣಗೊಳಿಸಲು ವೇದಿಕೆ ಕಲ್ಪಿಸಿದೆ ಎಂದು ಹೇಳಿದರು.

ಕಾರ್ಯಕ್ರಮ ಸಂಯೋಜಕಿ ಪ್ರೊ ಆಲೆಮಾಡ ಗಾಯತ್ರಿ ಮಾತನಾಡಿ, ಕಾವೇರಿ ಕಾರ್ನಿವಲ್ ನಂತಹ ಆಚರಣೆಗಳಿಂದ ವಿದ್ಯಾರ್ಥಿಗಳ ದೈನಂದಿನ ಕಲಿಕೆಯ ಒತ್ತಡದಿಂದ ಮನಸ್ಸನ್ನು ಪ್ರಫುಲ್ಲಗೊಳಿಸಲು ಸದವಕಾಶ ಲಭಿಸುತ್ತದೆ. ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರ ಹಾಕಲು ಸಹಕಾರಿಯಾಗುವುದಲ್ಲದೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೆ ಉತ್ತೇಜನ ಸಿಗುತ್ತದೆ. ಎಲ್ಲಾ ವಿದ್ಯಾರ್ಥಿಗಳ ಸಮಾಗಮ, ಪರಸ್ಪರ ನಡುವಿನ ಪರಿಚಯ, ಒಡನಾಟ, ಸ್ನೇಹ ಸಂಬಂಧ ಬಾಂಧವ್ಯಗಳನ್ನು ಬೆಳೆಸಲು ಒಂದು ವೇದಿಕೆ ಆಗಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರೊ, ಪುಟ್ಟಿಚಂಡ ಡಯಾನಾ ಸೋಮಯ್ಯ, ಉಪನ್ಯಾಸಕರಾದ ಅಮ್ಮಂಡ ಅನುಪಮಾ ತಿಮ್ಮಯ್ಯ, ಕೂಕಂಡ ಬೋಪಣ್ಣ ಉಪಸ್ಥಿತರಿದ್ದರು.

ಆಸ್ಪತ್ರೆ, ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಉಪಲೋಕಾಯುಕ್ತರ ದಿಢೀರ್ ಭೇಟಿ


ಸರ್ಕಾರಿ ಆಸ್ಪತ್ರೆಯ ತುರ್ತು ನಿಗಾ ಘಟಕಕ್ಕೆ ಭೇಟಿ ನೀಡಿ, ಸಾರ್ವಜನಿಕರೊಂದಿಗೆ ಉಪಲೋಕಾಯುಕ್ತ ಫಣೀಂದ್ರ ಅಹವಾಲುಗಳನ್ನು ಆಲಿಸಿದರು

ಚಾಮರಾಜನಗರ, ನ. 28– ರಾಜ್ಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್ ಫಣೀಂದ್ರ ಇಂದು ಬೆಳಿಗ್ಗೆಯೇ ಪಟ್ಟಣದಲ್ಲಿರುವ ತಾಯಿ ಮಕ್ಕಳ ಆಸ್ಪತ್ರೆ ಹಾಗೂ ಹೊರವಲಯದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ದಿಢೀರ್ ಭೇಟಿ ನೀಡಿದ್ದರು.

ನಗರದ ಬಿ. ರಾಚಯ್ಯ ಜೋಡಿರಸ್ತೆಯಲ್ಲಿರುವ ಆಸ್ಪತ್ರೆಯ ತುರ್ತು ನಿಗಾ ಘಟಕಕ್ಕೆ ಭೇಟಿ ನೀಡಿ, ಆವರಣದಲ್ಲಿ ಇದ್ದ ಸಾರ್ವಜನಿಕರೊಂದಿಗೆ ಆಸ್ಪತ್ರೆಯಲ್ಲಿ ಯಾವ ಸಮಸ್ಯೆಗಳು ಇವೆ? ವೈದ್ಯರು ಹೊರಗಡೆಯಿಂದ ಔಷಧಿ ಖರೀದಿಸಲು ಚೀಟಿ ಬರೆಯುತ್ತಿದ್ದಾರೆಯೇ? ವೈದ್ಯರು ಸರಿಯಾದ ಸಮಯಕ್ಕೆ ಲಭ್ಯವಿದ್ದು, ಸೇವೆ ನೀಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದಾಗ ವೈದ್ಯರ ಸೇವೆ ಚಿಕಿತ್ಸಾ ಸೇವೆ ಉತ್ತಮವಾಗಿದೆ. ಆದರೆ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲ. ರೋಗಿಗಳಿಗೆ ಬಿಸಿ ನೀರು ನೀಡಲಾಗುತ್ತಿಲ್ಲ. ಶೌಚಾಲಯಗಳು, ಸ್ನಾನಗೃಹಗಳಲ್ಲಿ ಶುಚಿತ್ವ ಇಲ್ಲ, ರೋಗಿಗಳನ್ನು ನೋಡಿ ಕೊಳ್ಳಲು ಬರುವವರಿಗೆ ಕುಳಿತುಕೊಳ್ಳಲು ಸೂಕ್ತ ಸ್ಥಳಾವಕಾಶವಿಲ್ಲವೆಂದು ಹೇಳಿದರು. ಈ ಎಲ್ಲಾ ಅಹವಾಲುಗಳನ್ನು ಆಲಿಸಿದ ಉಪಲೋಕಾಯುಕ್ತರು ಪರಿಶೀಲಿಸಿ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗುವುದು ಎಂದರು.

ತಾಯಿ ಮಕ್ಕಳ ಆಸ್ಪತ್ರೆಗೆ ತೆರಳಿ ವಾರ್ಡ್‌ಗಳಲ್ಲಿ ದಾಖಲಾಗಿದ್ದ ಮಹಿಳೆಯರೊಂದಿಗೆ ಮಾತನಾಡಿ ಆಸ್ಪತ್ರೆಯಲ್ಲಿ ನಿಮಗೆ ಚಿಕಿತ್ಸೆ ಸೌಲಭ್ಯಗಳಿಗೆ ಕೊರತೆ ಇದೆಯೇ? ಎಷ್ಟು ದಿನಕೊಮ್ಮೆ ಹಾಸಿಗೆ ಮೇಲಿನ ಹೊದಿಕೆಗಳನ್ನು ಬದಲಾಯಿಸಲಾಗುತ್ತಿದೆ? ಇಲ್ಲಿ ನೀಡಲಾಗುತ್ತಿರುವ ಊಟ ಉಪಹಾರದ ಗುಣಮಟ್ಟ ಹೇಗಿದೆ ಎಂಬುದನ್ನು ಕೇಳಿ ಉತ್ತರ ಪಡೆದುಕೊಂಡರು.

ಶೌಚಾಲಯಗಳನ್ನು ವೀಕ್ಷಿಸಿದ ವೇಳೆ ಶುಚಿತ್ವ ಇಲ್ಲದಿರುವುದನ್ನು ಕಂಡು ಆಸ್ಪತ್ರೆ ವೈದ್ಯಾಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಬಿಸಿ ನೀರು ಲಭ್ಯವಿಲ್ಲದಿರುವ ಬಗ್ಗೆ ಬಂದ ದೂರುಗಳ ಸಂಬಂಧ ಅಧಿಕಾರಿಗಳನ್ನು ಪ್ರಶ್ನಿಸಿ ಶುಚಿತ್ವ, ಇನ್ನಿತರ ದಿನನಿತ್ಯದ ಕೆಲಸಗಳನ್ನು ಸಮರ್ಪಕವಾಗಿ ಉಸ್ತುವಾರಿ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಆಸ್ಪತ್ರೆಗೆ ತುರ್ತಾಗಿ ಒದಗಿಸಬೇಕಿರುವ ಸೌಲಭ್ಯಗಳ ಬಗ್ಗೆ ಆದ್ಯ ಗಮನ ಹರಿಸಲಾಗುವುದು. ಸಣ್ಣ ಪುಟ್ಟ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರತಿಕ್ರಿಯಿಸಿದರು.

ಹಾಜರಾತಿ ನಮೂದಿಸಿ: ಜಿಲ್ಲಾ ಸರ್ಜನ್ ಕಚೇರಿಗೆ ತೆರಳಿ ವೈದ್ಯರು, ಆಸ್ಪತ್ರೆಯ ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು. ಈ ವೇಳೆ ಕೆಲವರು ಸಹಿ ಮಾಡದಿರುವುದನ್ನು ಗಮನಿಸಿ ಪ್ರಶ್ನಿಸಿದಾಗ ಹಲವು ವೈದ್ಯರು ಜಿಲ್ಲಾಸ್ಪತ್ರೆಯಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಉತ್ತರ ಬಂದಿತು. ಈ ಬಗ್ಗೆ ಹಾಜರಾತಿಯಲ್ಲಿ ಸ್ಪಷ್ಟವಾಗಿ ನಮೂದು ಮಾಡಬೇಕು. ಕ್ಯಾಶ್ ಡಿಕ್ಲೇರೇಷನ್, ಚಲನ್ ವಹಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಆಸ್ಪತ್ರೆ ಭೇಟಿಗೂ ಮೊದಲು ನಗರಸಭೆಗೆ ಸೇರಿದ ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಅಲ್ಲಿ ಕೈಗೊಂಡಿರುವ ಪ್ರಕ್ರಿಯೆಯನ್ನು ವೀಕ್ಷಿಸಿದರು. ಹಸಿಕಸ, ಒಣಕಸವನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ಸೂಕ್ತ ರೀತಿಯಲ್ಲಿ ವಿಲೇವಾರಿಯಾಗಬೇಕು. ತ್ಯಾಜ್ಯ ಸಂಸ್ಕರಣೆ ವೈಜ್ಞಾನಿಕವಾಗಿ ಆಗಬೇಕು ತ್ಯಾಜ್ಯ ಸಂಸ್ಕರಣ ಘಟಕದಿಂದ ಸುತ್ತಮುತ್ತಲಿನ ಪ್ರದೇಶಗಳಿಗೆ ಯಾವುದೇ ಮಾಲಿನ್ಯ ಉಂಟಾಗಬಾರದು. ಘಟಕದ ಸುತ್ತಲೂ ಯಾವುದೇ ಬಡಾ ವಣೆ ನಿರ್ಮಾಣಕ್ಕೆ ಅವಕಾಶ ನೀಡಬಾರದು. ಸಂಸ್ಕರಣ ಘಟಕದಿಂದ ಅಕ್ಕಪಕ್ಕದ ಜಮೀನು, ಪರಿಸರಕ್ಕೆ ಯಾವುದಾರೂ ಹಾನಿಯಾಗುತ್ತಿದೆಯೇ ಎಂಬ ಬಗ್ಗೆ ಕೃಷಿ, ತೋಟಗಾರಿಕೆ, ಪಶುಪಾಲನೆ, ಪರಿಸರ ಮಾಲಿನ್ಯ ಮಂಡಳಿ, ಆರೋಗ್ಯ ಇಲಾಖೆಯ ಅಧಿಕಾರಿಗಳ ತಂಡ ರಚಿಸಿ ಅಧ್ಯಯನ ಕೈಗೊಂಡು ಎರಡು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಉಪಲೋಕಾಯುಕ್ತರು ಆದೇಶಿಸಿದರು.

ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಿ.ಎಂ. ಪಾಟೀಲ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ಲೋಕಾಯುಕ್ತ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಜಿಲ್ಲಾ ಸರ್ಜನ್ ಡಾ. ಚಿನ್ನಬೋವಿ, ಸಿಮ್ಸ್‌ನ ಪ್ರಭಾರ ಡೀನ್ ಡಾ. ಕೆ.ಟಿ. ಅಜಯ್, ಜಿಲ್ಲಾ ಪರಿಸರ ಅಧಿಕಾರಿ ಕೆ.ಎಲ್. ಸವಿತಾ, ನಗರಸಭೆಯ ಪ್ರಭಾರ ಆಯುಕ್ತ ಪ್ರಕಾಶ್, ಪರಿಸರ ಎಂಜಿನಿಯರ್ ರೂಪಾ, ಇನ್ನಿತರರು ಉಪಸ್ಥಿತರಿದ್ದರು.

ಅಧಿಕಾರಿ ನೌಕರರಿಗೆ ಕರ್ತವ್ಯ ಪ್ರಜ್ಞೆ ಅಗತ್ಯ

ಚಾಮರಾಜನಗರ: ಜನರ ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಸವಲತ್ತುಗಳನ್ನು ತಲುಪಿಸುವ ಜವಾಬ್ದಾರಿ ಕಾರ್ಯಾಂಗದ ಮೇಲಿದ್ದು, ಇದರ ಮುಖ್ಯ ಭಾಗವಾಗಿರುವ ಸರ್ಕಾರಿ ಅಧಿಕಾರಿ ನೌಕರರಿಗೆ ಕರ್ತವ್ಯ ಪ್ರಜ್ಞೆ ಅಗತ್ಯ ಎಂದು ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ತಿಳಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಲೋಕಾಯುಕ್ತದಲ್ಲಿ ಬಾಕಿ ಇರುವ ದೂರು ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಕುರಿತ ಕಾರ್ಯದಲ್ಲಿ ಮಾತನಾಡಿದ ಅವರು, ಉತ್ತಮ ಜೀವನಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಜನರಿಗೆ ತಲುಪಿಸುವ ಹಾಗೂ ಅಭಿ ವೃದ್ಧಿ ಕಾರ್ಯಗಳನ್ನು ನಿರ್ವಹಿಸುವ ಹೊಣೆಗಾರಿಕೆ ಇರುವ ಅಧಿಕಾರಿ ನೌಕರರು ಕಾರ್ಯಾಂಗದ ಮುಖ್ಯ ಭಾಗಿದಾರರಾಗಿದ್ದಾರೆ. ಕಟ್ಟಕಡೆಯ ವ್ಯಕ್ತಿಗೂ ಎಲ್ಲ ಸವಲತ್ತುಗಳು ದೊರೆಯಬೇಕು. ಯಾವುದೇ ಸಮಸ್ಯೆ ಬಾರದಂತೆ ಕರ್ತವ್ಯ ನಿರ್ವಹಿಸುವ ಹೆಚ್ಚಿನ ಜವಾಬ್ದಾರಿ ಕಾರ್ಯಾಂಗದ ಮೇಲಿದೆ ಎಂದರು.

ಆಡಳಿತ, ಕರ್ತವ್ಯದಲ್ಲಿ ಶ್ರದ್ದೆ ಇರಬೇಕು. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಪ್ರಭಾವ ಬೀರುವುದು ದುರಾಡಳಿತಕ್ಕೆ ಕಾರಣವಾಗಲಿದೆ. ಕಾನೂನಿನ ಪ್ರಕಾರ ಯಾವ ಕೆಲಸಗಳನ್ನು ಮಾಡಬೇಕಿದೆಯೋ ಅದನ್ನು ಚ್ಯುತಿ ಬಾರದಂತೆ ಮಾಡಬೇಕು. ನಿಯಮಾವಳಿ ಉಲ್ಲಂಘನೆಯಾಗಬಾರದು. ಮಾಡಲೇ ಬೇಕಾದ ಕೆಲಸವನ್ನು ಯಾವುದೇ ವಿಳಂಬವಿಲ್ಲದೆ ನಿರ್ವಹಿಸಬೇಕು. ಇಲ್ಲವಾದಲ್ಲಿ ಲೋಕಾಯುಕ್ತ ತನ್ನ ಕೆಲಸವನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಿ.ಎಂ. ಪಾಟೀಲ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ, ಲೋಕಾಯುಕ್ತ ಎಸ್.ಪಿ. ಉದೇಶ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಇನ್ನಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಗಗನಚುಕ್ಕಿಯಲ್ಲಿ ಕಾಲುಜಾರಿ ಬಿದ್ದಿದ್ದ ವ್ಯಕ್ತಿಯ ಶವ ಪತ್ತೆ



ಕೊಳ್ಳೇಗಾಲ: ಗಗನಚುಕ್ಕಿಯ ಕಾವೇರಿ ನದಿಯಲ್ಲಿ ಕಾಲು ಜಾರಿ ಬಿದ್ದಿದ್ದ ವ್ಯಕ್ತಿಯ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಕೋಲಾರ ಪಟ್ಟಣದ ನೂರ್ ನಗರ ಬಡಾವಣೆ ಅಜಂಖಾನ್(35)ಮೃತ ದುರ್ದೈವಿ. ಕಳೆದ ಶನಿವಾರ ತನ್ನ ಕುಟುಂಬ ಸಮೇತ ಮಗನ ಹರಕೆ ಮುಡಿ ಸೇವೆ ಮಾಡಿದ್ದ ಕೂದಲನ್ನು ಕಾವೇರಿ ನದಿಯಲ್ಲಿ ವಿಸರ್ಜಿಸಲು ಹೋದಾಗ ಕಾಲುಜಾರಿ ನೀರಿಗೆ ಬಿದ್ದು ಕೊಚ್ಚಿ ಹೋಗಿದ್ದ ಅಜಂಖಾನ್ ಶವ ಇಂದು ಗಗನಚುಕ್ಕಿ ಪ್ರಪಾತದ ಆಳದ ನೀರಿನಲ್ಲಿದ್ದನ್ನು ಪತ್ತೆ ಹಚ್ಚಿದ್ದ ನುರಿತ ಈಜುಗಾರರಾದ ಸೈಯದ್ ಯೂನಸ್ ಹಾಗೂ ಮಳವಳ್ಳಿ ಮುಯಿನ್ ಎನ್ನುವರು ನೀರಿನಿಂದ ಮೇಲೆತ್ತಿದ್ದಾರೆ.

ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಇಲ್ಲಿನ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಅಮಚವಾಡಿ ಪಿಯು ಕಾಲೇಜಲ್ಲಿ ಸಂವಿಧಾನ ಆಚರಣೆ



ಚಾಮರಾಜನಗರ, ನ.28–ಸಂವಿಧಾನ ಜನರ ಜೀವನಾಡಿಯಾಗಿದ್ದು, ದೇಶದ ಸಂವಿಧಾನವನ್ನು ಗೌರವಿಸುವ ಜೊತೆಗೆ ಕಾನೂನುಗಳನ್ನು ಪಾಲಿಸುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಆದ್ಯ ಕರ್ತವ್ಯವಾಗಿದೆ ಎಂದು ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದು ಶೇಖರ್ ತಿಳಿಸಿದರು.

ತಾಲೂಕಿನ ಅಮಚವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದ್ದು, ಜನರು ಹಕ್ಕುಗಳನ್ನು ಅನುಭವಿಸುವಂತೆ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಬೇಕು ಎಂದರು.

ಉಪನ್ಯಾಸಕ ಸುರೇಶ್ ಎನ್. ಋಗ್ವೇದಿ ಮಾತನಾಡಿ, ಡಾ.ಅಂಬೇಡ್ಕರ್ ವಿಶ್ವದ ಜ್ಞಾನ ಭಂಡಾರ. ಅವರು ಕೊಟ್ಟಿರುವ ಸಂವಿಧಾನ ವಿಶಿಷ್ಟ ವಿಭಿನ್ನವಾಗಿದೆ. ಅವರ ವಿಚಾರಧಾರೆಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳ ಬೇಕಾಗಿದೆ ಎಂದರು. ಜಿಲ್ಲಾ ಪಂಚಾಯತ್ ತರಬೇತಿ ಸಂಯೋಜಕ ಟಿ.ಜೆ. ಸುರೇಶ್ ಮಾತನಾಡಿ ಸಂವಿಧಾನ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಭಾರತೀಯರೆಲ್ಲರಿಗೂ ಸೇರಿದ್ದು, ಪ್ರತಿಯೊಬ್ಬರೂ ಸಂವಿಧಾನದ ಪೀಠಿಕೆಯನ್ನು ಅರ್ಥೈಸಿಕೊಂಡು ಪರಿಪಾಲಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಇಲಾಖೆಯ ತ್ರಿವೇಣಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಪ್ರಾಂಶುಪಾಲ ಶಿವನಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರಾದ ಮೂರ್ತಿ, ಬಸವಣ್ಣ, ಸುರೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾವ್ಯ ಇದ್ದರು.

ಪತ್ರಕರ್ತರು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಬೇಕು


ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣದಲ್ಲಿ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು

ಚಾಮರಾಜನಗರ, ನ.28–ಪತ್ರಕರ್ತರು ನಿಷ್ಠೆಯಿಂದ ಕಾರ್ಯ ನಿರ್ವಹಿಸುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವಂತೆ ಶಾಸಕ ಸಿ. ಪುಟ್ಟರಂಗ ಶೆಟ್ಟಿ ಸಲಹೆ ನೀಡಿದ್ದಾರೆ.

ನಗರದ ವರ್ತಕರ ಭವನದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿ, ಪತ್ರಿಕಾ ರಂಗವು ಕಣ್ಣಿಗೆ ಕಾಣದ ಅಸ್ತ್ರವಾಗಿದ್ದು ಒಳ್ಳೆಯದು ಹಾಗೂ ಕೆಟ್ಟದ್ದನ್ನು ನೇರವಾಗಿ ಗುರುತಿಸುವ ಅಂಗವಾಗಿದೆ. ಟಿವಿ ಮಾಧ್ಯಮಗಳಲ್ಲಿ ತಪ್ಪು ಸುದ್ದಿಗಳು ಬಂದರೂ ಪತ್ರಿಕೆಗಳಲ್ಲಿ ನಿಖರವಾಗಿ ಬರುತ್ತವೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆರೆಗೋಡು ಸೋಮಶೇಖರ್ ಮಾತನಾಡಿ, ಸಂಘದ ಪದಾಧಿಕಾರಿಗಳು ಪತ್ರಿಕೋದ್ಯಮದ ಘನತೆ ಹೆಚ್ಚಿಸುವುದಲ್ಲದೆ ಸಂಘದ ಏಳಿಗೆಗೆ ಶ್ರಮಿಸಬೇಕು. ಗ್ರಾಮೀಣ ಪತ್ರಕರ್ತರಿಗೆ ಬಸ್‌ಪಾಸ್ ನೀಡುವಂತೆ ದಶಕಗಳ ಹೋರಾಟದ ಫಲವಾಗಿ ಸಿಎಂ ಸಿದ್ದರಾಮಯ್ಯ ಅವರು ಬಸ್ ಪಾಸ್ ಘೋಷಣೆ ಮಾಡಿದ್ದಾರೆ. ಬಸ್ ಪಾಸ್ ಎಲ್ಲರಿಗೂ ಸಿಗುವಂತೆ ಮಾಡಲು ಕೆಲ ನಿಯಮ ಸಡಿಲಿಕೆ ಮಾಡಬೇಕಿದೆ. ಉಳಿದಂತೆ ನಿವೃತ್ತ ಪತ್ರಕರ್ತರಿಗೆ ಮಾಸಾಶನ ಕೊಡುವ ನಿಟ್ಟಿನಲ್ಲಿ ಕಠಿಣ ಪರಿಸ್ಥಿತಿಗಳಿದ್ದು ಅದನ್ನು ಸಡಿಲಿಕೆ ಮಾಡಿ ಅನುಕೂಲ ಕಲ್ಪಿಸಿಕೊಡಬೇಕಿದೆ ಎಂದರು.

ವಿಧಾನಪರಿಷತ್ ಸದಸ್ಯ ಶಿವಕುಮಾರ್ ಮಾತನಾಡಿ, ಪತ್ರಕರ್ತರು ಒಗ್ಗಟ್ಟಿನಿಂದ ಇರಬೇಕು. ಪ್ರಾಮಾಣಿಕತೆ ಇದ್ದರೆ ಗೌರವ ಸಿಗುತ್ತದೆ. ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ ವೈಯಕ್ತಿಕವಾಗಿ 25 ಸಾವಿರ ಕೊಡುವುದಾಗಿ ಘೋಷಿಸಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಎನ್. ಸಿದ್ದಲಿಂಗ ಸ್ವಾಮಿ ಪ್ರಾಸ್ತವಿಕವಾಗಿ ಮಾತನಾಡಿ, ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಸಹಕಾರ ನೀಡಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿದರು. ಸಮಾರಂಭದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಟೆಲೆಕ್ಸ್ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಸಂಘದ ನಿಕಟಪೂರ್ವ ಅಧ್ಯಕ್ಷ ದೇವರಾಜ ಕಪ್ಪಸೋಗೆ, ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಶಶಿಧರ್, ರಾಜ್ಯ ಸಮಿತಿ ಸದಸ್ಯ ಮಹೇಂದ್ರ, ಖಜಾಂಚಿ ಪುಟ್ಟರಾಜು ಇತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ

- ಮೊಬೈಲ್ ಫೋನ್ ಶೋರೂಂಗೆ ಸೇಲ್ ಗರ್ಲ್
- ಶಿಕ್ಷಣ ತರಬೇತಿ ಕೇಂದ್ರಕ್ಕೆ ರಿಸೆಪ್ಷನಿಸ್ಟ್, ಮಾರ್ಕೆಟಿಂಗ್ ಟೆಲಿಕಾಲರ್ ಬೇಕಾಗಿದ್ದಾರೆ.

ಕೇವಲ ಹೊಸ ಅಭ್ಯರ್ಥಿಗಳಿಗೆ

ಸಂಪರ್ಕಿಸಿ: 9886409722

ಡ್ರೈವರ್ ಬೇಕಾಗಿದ್ದಾರೆ

ನಾಲ್ಕು ಚಕ್ರದ ಗೂಡ್ಸ್ ವಾಹನ ಚಲಾಯಿಸಲು ಡಿ.ಎಲ್. ಹೊಂದಿರುವ ಅಭ್ಯರ್ಥಿಗಳು (ಫರ್ನಿಚರ್ಸ್ ಮತ್ತು ಮ್ಯಾಟ್ರೆಸ್ ಡೆಲಿವರಿಗೆ) ವಯೋಮಿತಿ 18 ರಿಂದ 40 ವರ್ಷ. ಸಂಬಳ: 18,000. ESI & PF ಸೌಲಭ್ಯವಿರುತ್ತದೆ.

Mob: 8884551387

ಬೇಕಾಗಿದ್ದಾರೆ

ಕರ್ನಾಟಕದಾದ್ಯಂತ ಪ್ರತಿಷ್ಠಿತ ಕಂಪನಿ ಮತ್ತು ಆಫೀಸ್ ಕೆಲಸಗಳಿಗೆ 7th, 10th, ITI, B.Com., B.Sc., BE, Any Degree ಪಾಸ್ / ಫೇಲ್ ಆದಂತಹ ಯುವಕ, ಯುವತಿಯರು, ವಿದ್ಯಾರ್ಥಿಗಳು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ, ವಸತಿ ಇರುತ್ತದೆ. ಸಂಬಳ 20,000 ರಿಂದ 75,000.

Mob: 9916788422

House for Sale

20x30, North face, Bogadhi 2nd Stage North near Nirmithi Kendra. 60 Lakh.

Mob: 7892595158

SITE FOR SALE

ಡಾ. ರಾಜ್‌ಕುಮಾರ್ ರೋಡ್ – 30X40

ಸಾತಗಳ್ಳಿ 2ನೇ ಹಂತ – 20X30

ಬನ್ನೂರ್ ರೋಡ್ – 30X40

ಪೊಲೀಸ್ ಬಡಾವಣೆ – 30X40

Mob: 9448447035

ಆರೋಗ್ಯಮಾತೆ ಸಮುದಾಯ ಭವನ

ಹುಲಿಕೆರೆ, ಕೆ.ಆರ್.ಎಸ್. ರಸ್ತೆ, ಮೈಸೂರು

ಎಲ್ಲಾ ಶುಭ ಸಮಾರಂಭಗಳಿಗೆ ಲಭ್ಯವಿದೆ



200 ಜನ ಆಸನ ಸಾಮರ್ಥ್ಯ

ಸಕಲ ಸೌಲಭ್ಯ ಲಭ್ಯವಿದೆ

ಅತಿ ಕಡಿಮೆ ದರ

ಮೊ: 9739785892

TV ಕೆಟ್ಟಿದೆಯೇ ?

LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.

Teju Electronics, ಅಗ್ರಹಾರ

Mob: 9342114069

ಬೇಕಾಗಿದ್ದಾರೆ

ಜವಾಬ್ದಾರಿಯುತ ಯುವಕ ಯುವತಿಯರು ಆರೋಗ್ಯವಂತ ಹಿರಿಯ ನಾಗರಿಕರ ಸಹಾಯಕ್ಕಾಗಿ ಮುಖತಃ ಸಂದರ್ಶನಕ್ಕಾಗಿ ಸಂಪರ್ಕಿಸಿ. ಇಂದು 3–4 ಗಂಟೆವರೆಗೆ

ಸಂಧ್ಯಾರಾಗ, ಲಕ್ಷ್ಮೀಪುರಂ ಮೈಸೂರು

Phone : 9886510555 8095598555

WANTED

1) Supervisor- BE/Diploma in Electrical
2) Electricians- ITI/Diploma in Electrical
3) Welders
4) Helpers

To work in Nanjangud Industrial Area, No. 7259016514 (9.30am - 6.00pm)

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್

15000 ಸಾವಿರ, PF & ESI ನೊಂದಿಗೆ ಮೇಟಗಳ್ಳಿ ಸುತ್ತ ಮುತ್ತ ಪ್ರದೇಶದಲ್ಲಿ ಸಂಪರ್ಕಿಸಿ:

9035367083 / 6361548626

SITE FOR SALE

ಜ್ಞಾನಭಾರತಿ ಬಡಾವಣೆ, 2nd Phase, ರಾಷ್ಟ್ರೋತ್ಥಾನ ಶಾಲೆ ಹತ್ತಿರ, ದಡದಹಳ್ಳಿ, ನಿವೇಶನ ಸಂಖ್ಯೆ 363, ಅಳತೆ 36X40, corner site, East face. Direct owner contact:

Mob: 9663402349

OPEN FASHION SHOW CONTEST

STYLISH KID CONTEST 3.0

Mysore 2025 Age 2 to 6 years

13th SATURDAY 4 pm REGISTER NOW

ORGANIZED BY Alpha International School Mysore

+91 7829937469 +91 7899744799 +91 9108351235 +91 8971087059

SITE FOR SALE

40x45 E/F, Bharath Hitech Layout, Attached to Mysore-Mangalore National Highway, after Yelwala. Call:

Mob: 7338445413

ಉದ್ಯೋಗವಕಾಶ

ಯಾವುದೇ ವಿದ್ಯಾಭ್ಯಾಸವಾಗಿದ್ದರು ಪಾಸ್/ಫೇಲ್ ಆಗಿರುವ ಮಹಿಳೆಯರು, ಯುವತಿಯರು, ಹಾಗೂ ಯುವಕರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಉಚಿತ ಊಟ ಮತ್ತು ವಸತಿಯೊಂದಿಗೆ ಆಕರ್ಷಕ ಸಂಬಳ 15000 ರಿಂದ 25000. ಮೊದಲು ಬಂದವರಿಗೆ ಆದ್ಯತೆ.

9743135666 / 9739292222

'R' ರಿಯಲ್ ಎಸ್ಟೇಟ್

ಸೈಟುಗಳನ್ನು ಕೊಳ್ಳಲು/ಮಾರಲು

40x60 ಸೈಟುಗಳು ಮಾರಾಟಕ್ಕಿವೆ.

ಸಂಪರ್ಕಿಸಿ: 9538412881

ಸೈಟು ಮಾರಾಟಕ್ಕಿದೆ

N/F 30x50 DTCP 11"A" ಖಾತೆ ರೇರಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ 23 ಲಕ್ಷಗಳು GSS ಅಮೃತ್ ಕೆರಾಕೊ ಲೇಔಟ್ ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು. ಸಂಪರ್ಕಿಸಿ:

9742198093

ಬೇಕಾಗಿದ್ದಾರೆ

ಪತ್ರಬರಹಗಾರರ ಕಛೇರಿಗೆ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಅನುಭವವುಳ್ಳ ನುರಿತ ಮಹಿಳಾ ಡಿ.ಟಿ.ಪಿ ಆಪರೇಟರ್ ಬೇಕಾಗಿದ್ದಾರೆ

ವಿಳಾಸ: ಕಾಳಿದಾಸ ಎಂಟರ್‌ಪ್ರೈಸಸ್, ತ್ರಿವೇಣಿ ಸರ್ಕಲ್, ಡಾ. ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿನಗರ, ಮೈಸೂರು

9880999105

SITE FOR SALE

30x40 (MUDA Approved) near Sri Rampura Ring Road, Mysuru

Mob : 8050345574

SITE REQUIRED

ದೇವನೂರು 3ನೇ ಹಂತ, ರಾಜೀವ್ ನಗರ, ಸಾತಗಳ್ಳಿ 'ಎ' ಜೋನ್, 'ಬಿ' ಜೋನ್, ಡಿಟಿಎಸ್ ರಾವ್ ನಗರ 30x40, 40x60, 50x80

ಓನರ್ ಸಂಪರ್ಕಿಸಿ:

Mob: 7338648879

RAI ESTATES

RERA APPROVED · MUDA APPROVED · E-KHATA

ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ

- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604

#10, 1st Floor, New Sayyaji Rao Road, Bamboo Bazar, Mysuru - 570 001

WANTED

Sales Executive for Agsar Paints Pvt. Ltd.

Experience: 1-5 years in Paints / Building Materials / FMCG (preferred).

Qualification: Any Graduate.

Salary: Attractive package with incertives.

9840691864 / 8939999417

OLD AGE HOME

ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರಿಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್‌ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ

Mob: 9607172737

Solar Water Heaters

Built for Modern Living



SUNZONE SOLAR SYSTEM

VM Double Road, Kuvempunagar, Mysuru

9845175443

INVESTOR REQUIRED

To Develop Food Products Export Business, Required upto 50 Lakhs Investment. 20% Devident with legal Security, Interested person can Invest from 2 Lakh to 5 Lakhs.

Contact SRR SWADESHIMART.COM 7019012485

ನೇರ ಆಯ್ಕೆ ಉದ್ಯೋಗವಕಾಶ

ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:

Mob: 8095133188

SITE FOR SALE

BVL Premio 1st Phase (Ready Layout) 30x50 West Face

Mob: 9945789945

ಉದ್ಯೋಗ ಅವಕಾಶ

ಕರ್ನಾಟಕದಾದ್ಯಂತ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ ಮತ್ತು ವೇರ್‌ಹೌಸ್/ಬ್ಯಾಂಕ್/ಆಫೀಸ್ ಕೆಲಸಗಳಿಗೆ 4th, 10th, ITI, B.Com, B.Sc, BE, B.Tech, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಹಾಗೂ ಚಾಲಕರು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ ಓಟಿ, 15200 – 86000

7406996362

ಬೇಕಾಗಿದ್ದಾರೆ

ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಂಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE.

6366718368, 9739121355

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

Mob: 9964733988

ಸೈಟು ಮಾರಾಟಕ್ಕಿದೆ

35X55, N/E Corner ಐಶ್ವರ್ಯ ಗಾರ್ಡನ್, ಮೈಸೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ, ಇಲವಾಲದ ನಂತರ.

Mob: 7338445482

ಹೊಸ ಲೇಔಟ್ಸ್ ಆರಂಭವಾಗಿದೆ

- T.N ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14–25 ಲಕ್ಷ
- ಬನ್ನೂರು ರಸ್ತೆ – ಮಾನಸಿ ನಗರ ಹಿಂಬಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25–49 ಲಕ್ಷ
- ಬೋಗಾದಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ ಜಬ್ಬಿ ಹುಂಡಿ ಹಿಂಬಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse

81230 75038

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 7975101020

ವಧು–ವರಾನ್ವೇಷಣೆ

ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)

9343175000

IMKTA - PRE-SCHOOL TEACHER TRAINING

Diploma Courses for SSLC, PU or any Degree Candidates.

Regular / Saturday / Correspondence Courses with practical training.

www: imkta.in

ALPHA INTERNATIONAL SCHOOL @ Srirampura

Call: 7829937469

ONLINE TRAINING AVAILABLE

SITE FOR SALE

MUDA Approved

Ananda Sagara

Pragathi Nagar

Nityanand Sagara

Paramanand Sagara

Kuberananda Sagara

30x40 50x80 & 40x60

JK 8951144240

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ

ಮೈಸೂರು ನಗರದ ಉನ್ನತ ಕಂಪನಿ, ಕಾರ್ಖಾನೆಗಳಲ್ಲಿ, ಹಾಸ್ಟೆಲ್‌ಗಳಲ್ಲಿ, ಕೆಲಸ ಮಾಡಲು, Helper, ಗಳು ಸುನಂದ ಸ್ಟಾಫ್ ಕಂಪನಿಯಲ್ಲಿ ಕೆಲಸ ಮಾಡಲು ಹೌಸ್ ಕೀಪಿಂಗ್ ಹಾಗೂ ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರ ಹಾಸ್ಟೆಲ್, ಇಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ, ಹೌಸ್‌ಕೀಪಿಂಗ್, ಹಾಗೂ ಅನುಭವವುಳ್ಳ ಪಾರ್ಟ್‌ಟಾಯ್ ಗಳು ಕೆಲಸಕ್ಕೆ ಬೇಕಾಗಿದ್ದಾರೆ. ಹುಡುಗರು / ಮಹಿಳೆಯರಿಗೆ ಅವಕಾಶವಿರುತ್ತದೆ. ESI, PF ಸೌಲಭ್ಯ ಇರುತ್ತದೆ ಉನ್ನತ ಸಂಬಳ 10000 ರಿಂದ 18000 ರವರೆಗೆ, ವಿದ್ಯಾಭ್ಯಾಸ: 7th 10th PUC. Any degree. (ಬಿ.ಕಾಂ) & ITI, Diploma.

Mob: 9036461347 / 9036757650 / 9611208553

ಹೋಟೆಲ್ ಕೆಲಸಕ್ಕೆ

ಹುಡುಗರು / ಹೆಂಗಸರು ಬೇಕಾಗಿದ್ದಾರೆ ದೋಸೆ, ಟೀ, ಪಾರ್ಸಲ್ ಕೌಂಟರ್, ಕ್ಯಾಷಿಯರ್.

9606238790 / 9986998606

FOR SALE

20x30 Old Houses @ Kuvempunagar, RK Nagar

40x120 Site@ 80 Feet Road in Dattagalli

20x30 New Duplex House @ Utthanahalli & Dattagalli

40x60@ JP Ngr, Shardha Lyt

30x40 House Near Kamakshi Hospital, JP Nagar

20x30 House @ Srirampura

PRAKRUTHI PROPERTIES

95386 90359, 90359 90359

FOR SALE

30x40 Sites Near RT Nagar BSNL Layout @ Just 22 Lakhs

20x30, 30x40 MUDA Approved Sites Near Rainbow School Bogadi

30x40|30x50 MUDA Sites KHB Attach, HD Kote Road.

2 & 3 BHK Apartments @ Ramakrishna Ngr

Commercial Properties Also Available

PRAKRUTHI PROPERTIES

95386 90359, 90359 90359

Ready to work in bank & finance as a recovery service.

1) Required female & male telecaller, fresher 8K salary + incentive. Experience will discuss. (2) Required field executive, freshers 12K salary + incentive + petrol allowance. Experience 20% hike. Work place: SLV Enterprises, 423, 3rd Floor, Chamaraja Double Road, Near Ramaswamy Circle, above Kanakadurga Finance, Mysore-570 004. Contact:

Mob: 9945166614 or landline 0821-4502039

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಮೂಲ ಕ್ರಯ ಪತ್ರ ಕಳೆದಿದೆ

ಚಾಮರಾಜನಗರ ತಾಲ್ಲೂಕು, ಅಟ್ಟುಗುಳಿಪುರ ಗ್ರಾಮದ ನಿವಾಸಿ ಪಿ. ಮಹದೇವಪ್ಪ ಬಿನ್ ಲೇ. ಪುಟ್ಟಮಾದಪ್ಪ ಆದ ನನಗೆ ಗ್ರಾಮದ ಸ.ನಂ. 106ರಲ್ಲಿ 2.20 ಎಕರೆ ಜಮೀನಿದ್ದು, ಸದರಿ ಜಮೀನಿನ ಮೂಲ ಕ್ರಯ ಪತ್ರ ಚಾ.ನಗರಕ್ಕೆ ಬರುವಾಗ ಕಳೆದುಹೋಗಿದ್ದು, ಸಿಕ್ಕಿದವರು ಪೊಲೀಸ್ ಠಾಣೆಗೆ ತಲುಪಿಸಬೇಕಾಗಿ ವಿನಂತಿ.

ತ್ರಿಭುಜಾಕಾರದ ಸೈಟು ಮಾರಾಟಕ್ಕಿದೆ

Total 1112 sq.ft. just Rs. 1112 per sq.ft. ಮಾರುಕಟ್ಟೆ ಬೆಲೆಯಲ್ಲಿ. 40% discount. ಯತ್ ಮೆಗಾಸಿಟಿ, ಇಲವಾಲದ ನಂತರ, ಮೈಸೂರು–ಹುಣಸೂರು ರಸ್ತೆ.

Mob: 8971444919

ಕೆಲಸಕ್ಕೆ ಬೇಕಾಗಿದ್ದಾರೆ

Washing machine, TV installation ಮತ್ತು ರಿಪೇರ್ ಮಾಡಲು ಹುಡುಗರು ಬೇಕಾಗಿದ್ದಾರೆ. Age below 35 years

ಹೆಸರು – ಭರತ್

ಸಂಪರ್ಕಿಸಿ – 9880151303

ನಿವೃತ್ತ ನೌಕರರಿಗೆ ಉದ್ಯೋಗವಕಾಶ ಸೆಮಿನಾರ್

ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು ಬಿಸಿನೆಸ್ ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: Fixed salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗಿವ ದಾಖಲಾತಿಗಳು: ಫೋಟೋ, ಪಾನ್‌ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ. ಸ್ಥಳ: Maurya Residency, Sri Harsha Road, Mysore-1. Time: 11 am & Date 1-12-2025. (Followed by lunch).

9448376423, 9886883858

S.K. Construction

ಮಾರಾಟಕ್ಕಿದೆ, 20x30 ಮನೆ, 3 BHK Duplex, All teak ಇಂಜಿನಿಯರ್ ಕನ್‌ಸ್ಟ್ರಕ್ಷನ್, ಅತೀ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ, ಶಾಂತವೇರಿ ಗೋಪಾಲಗೌಡ ನಗರದಲ್ಲಿ with loan ಸಹಿತ ಮಾಡಿಕೊಡುತ್ತೇವೆ.

Mob: 8904202804

ಸದ್ಗುರು ಮ್ಯಾರೇಜಸ್

ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸಬಹುದು.

9448229184, 7899625268

ಹೊಸ ಮನೆ ಮಾರಾಟಕ್ಕಿದೆ

ಇಲವಾಲದ ಸೇಂಟ್ ಜೋಸೆಫ್ ಸ್ಕೂಲ್ ಹತ್ತಿರ 20x30 ಅಳತೆಯ 3 ಬಿಹೆಚ್‌ಕೆ ಡ್ಯೂಪ್ಲೆಕ್ಸ್ ಫುಲ್ ಫರ್ನಿಷ್ಡ್ ಓನ್ ಬೋರ್‌ವೆಲ್ MUDA Approved ಮನೆ ಮಾರಾಟಕ್ಕಿದೆ. ಬೆಲೆ: 69 ಲಕ್ಷ.

ನಂಜುಂಡಸ್ವಾಮಿ ಹೆಚ್.ಎಸ್. ಮಾಜಿ ಸೈನಿಕರು

9483862050 / 8660625801

WANTED

PU female Office Assistant @ Saraswathipuram, Kamakshi Hospital Road, Vishwamanava Double Road (Near Murugan Medicals).

Mob: 93421-25252

WANTED

For a petrol bunk in city partor full time sales boys or girls for filling petrol, diesel, gas, cashier plus helper. Salary as per qualification & experience. Pref. PUC & above.

9901120389, 9844002226

House for sale

30x40 North face Ground floor, independent house in J.P. Nagar.

Mob: 9741817450

Coffee Land Sale in Coorg and Homestay.

Mob: 7019970108

ಬೇಕಾಗಿದ್ದಾರೆ

ಕ್ಯಾಷಿಯರ್ ಹೆಲ್ಪರ್, ಸೂಪರ್‌ವೈಸರ್ ಮತ್ತು ಏರ್ ಬಾಯ್, ನಜರ್‌ಬಾದ್ ಭಾರತ್ ಪೆಟ್ರೋಲಿಯಂ, ನಾಗಸರೋಜ್ ಫ್ಯೂಯಲ್ ಬಂಕ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಊಟದ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ:

9019230313 /9731571439

ಬೇಕಾಗಿದ್ದಾರೆ

ಪುರುಷರು ಮಾತ್ರ ಬೇಕಾಗಿದ್ದಾರೆ. ಹೆಲ್ಪರ್ ಕೆಲಸಕ್ಕೆ ಯಾವುದೇ ವಿದ್ಯಾಭ್ಯಾಸ ಬೇಕಿಲ್ಲ. ಸಂಬಳ 17,500 + ESI + PF. ವಯಸ್ಸು: 18 ರಿಂದ 45. 8 hours duty, 3, Shifts. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ: CIPET College ಹತ್ತಿರ, ರಿಂಗ್ ರೋಡ್, ಮೇಟಗಳ್ಳಿ, ಮೈಸೂರು.

Mob: 99868 74574

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್ (ಚಿನಕುರಳಿ), ಹೌಸ್‌ಕೀಪಿಂಗ್ ಸೂಪರ್‌ವೈಸರ್ (ವಿಜಯನಗರ), ಹೌಸ್‌ಕೀಪಿಂಗ್ – ರಾತ್ರಿ ಪಾಳಯಕ್ಕೆ (ಒಂಟಿಕೊಪ್ಪಲ್).

Mob: 9739166772 / 9731663856 / 9743873483

ಸೈಟು ಬೇಕಾಗಿದೆ

ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.

Mob: 96860 71750

SITE FOR SALE

20x30 W/F (MUDA Approved) Pusya Badavane Next to Roopa Nagar (Bogadi) 28 Lakhs (Direct registration).

Mob: 9448406566

ಬೇಕಾಗಿದ್ದಾರೆ

ಪ್ರತಿಷ್ಠಿತ ಕಂಪನಿಗಳಲ್ಲಿ ಮಹಿಳಾ ಟೆಲಿಕಾಲರ್ಸ್ (ಮೈಸೂರಿನವರಿಗೆ ಮಾತ್ರ) ಮತ್ತು Loan recovery ಮಾಡಲು Collection Executives ಕುಶಾಲನಗರ ಮತ್ತು ಸೋಮವಾರಪೇಟೆ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಆದ್ಯತೆ.

Mob: 9980929313, 9901945444, 9900610534

ಸಂದರ್ಶನದ ದಿನಾಂಕ: 2–12–2025 ಮಂಗಳವಾರ

ಬೇಕಾಗಿದ್ದಾರೆ

ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.

Mob: 6364748485

SITES FOR SALE

40×60 MUDA Site for Sale Near R.T. Nagar, Mysore. 96 Lakhs

30x40 Site for Sale in Dattagalli Near Christ Public School Mysore. 65 Lakhs

20×30 Site For Sale in Vijayanagar 4th Stage, Mysore. 52 Lakhs. Contact:

PH: 9900464111

ಬೇಕಾಗಿದ್ದಾರೆ

ಹೆಬ್ಬಾಳು ಮೇಟಗಳ್ಳಿ ಹೂಟಗಳ್ಳಿ ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಹುಡುಗರು ಬೇಕಾಗಿದ್ದಾರೆ ವಿದ್ಯಾರ್ಹತೆ, Diploma mech. ITI ,8th TO 2nd PUC ವರೆಗೆ. ಊಟ, ವಸತಿ, ESI PF ಸೌಲಭ್ಯ ಸಂಬಳ 12,500 ರಿಂದ 20,000 ಇರುತ್ತದೆ.

Ph· 8951869646 / 9902645646

100% ಉದ್ಯೋಗವಕಾಶ ವರ್ಕ್ ಫ್ರಂ ಹೋಂ

ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ. ವಯಸ್ಸು 18 ರಿಂದ 65 ವರೆಗೆ ಆಫೀಸ್‌ಗಳಿಗೆ 4th, 7th, 10th, ITI, Any ಡಿಗ್ರಿ ಪಾಸ್ / ಫೇಲ್ ಆದ ಯುವಕ, ಯುವತಿಯರಿಗೆ ಹಾಗೂ ESI, PF ನೊಂದಿಗೆ ಮೊದಲ ಆದ್ಯತೆ ಇಂದೇ ಕರೆ ಮಾಡಿ ಸಂಬಳ: 22,000–45000.

Mob: 6362024878

ತಕ್ಷಣ ಬೇಕಾಗಿದ್ದಾರೆ

ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ (ಎಸ್‌ಎಸ್‌ಎಲ್‌ಸಿ ಮತ್ತು ಐಟಿಐ Any Trade). Age limit: 18 to 45 years. Salary: Rs. 18,000. ಸೌಲಭ್ಯತೆ: ESI, PF and canteen ಸೌಲಭ್ಯವಿರುತ್ತದೆ.

Contact: 7019380847 7019822622 / 6362491336

SITE FOR SALE

40x60 East face Near Netaji Circle. Buyer only contact:

9448324232, 9480606154

ಸಾಲ / Loans

* House / Site Purchase

* Construction Loan

* House / Site Mortgage

Loans for MUDA, Corporation & Revenue Property.

77605-98705

LUXURY HOUSE FOR SALE

DTS Rao Layout, Sathagally, brand new luxury three floors 37 squares, ground 2 BHK, first and second 3 BHK duplex, own borewell 2 car parking with all modern facility. Contact:

9986742260 / 9986494502

ಬೇಕಾಗಿದ್ದಾರೆ

ಅಡುಗೆ ಕೆಲಸ ಹಾಗೂ ಮನೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

Address: Alanahalli, Shanthidhama (Nandini Layout), Mysore.

Mob: 9900515650

ಸೈಟು ಮಾರಾಟಕ್ಕೆ ಇದೆ

KRS ನಿಸರ್ಗ ಲೇಔಟ್ (KHB ಅಲಾಟೆಡ್) ಬ್ಲಾಕ್ 1, East face 30x40, ಇಲವಾಲ ಹತ್ತಿರ, ಮೈಸೂರು.

Mob: 9632023090

ಜಮೀನು ಮಾರಾಟಕ್ಕಿದೆ

ಹಂಪಾಪುರ ಹೋಬಳಿಯಲ್ಲಿ ಹಿರೇನಂದಿ ಗ್ರಾಮದಲ್ಲಿ 35 ಗುಂಟೆ ಹಾಗೂ ಚಿಕ್ಕನಂದಿ ಗ್ರಾಮದಲ್ಲಿ 1 ಎಕರೆ 10 ಗುಂಟೆ ಹಾಗೂ ಕಂಚಮಳ್ಳಿ ಮುಖ್ಯ ರಸ್ತೆಯಲ್ಲಿ 1 ಎಕರೆ 30 ಗುಂಟೆ ಜಮೀನು ಮಾರಾಟಕ್ಕಿದೆ.

Mob: 9945661696

ಕೊಡಗು ಸಹಕಾರ ಸಂಘ ನಿ., ಜಯಲಕ್ಷ್ಮೀಪುರಂ, ಮೈಸೂರು

ಪ್ರಕಟಣೆ

ಈ ಸಂಘದ ಸಭಾಂಗಣ ನೋಡಿಕೊಳ್ಳಲು ಮತ್ತು ಶುಚಿತ್ವ ಕೆಲಸಕ್ಕಾಗಿ ನೌಕರರು ಬೇಕಾಗಿದ್ದಾರೆ. ಇಲ್ಲೇ ಉಳಿದುಕೊಳ್ಳಲು ವಸತಿ ಸೌಲಭ್ಯವನ್ನು, ಮಾಸಿಕ ಸಂಚಿತ ವೇತನ ಮತ್ತು ಶುಚಿತ್ವ ಭತ್ಯೆ ಪಾವತಿಸಲಾಗುವುದು. ಆಸಕ್ತಿವುಳ್ಳವರು ಕೂಡಲೇ ಸಂಘದ ಕಛೇರಿ ದೂರವಾಣಿ ಸಂಖ್ಯೆ 0821-2511987 ನ್ನು ಕಛೇರಿ ದಿವಗಳಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 5ರೊಳಗೆ ಸಂದರ್ಶಿಸುವುದು.

NOT GETTING YOUR

STAR OF MYSORE & ಮೈಸೂರು ಮಿತ್ರ

Call: 98452-96447 99003-82840

ಸೈಟು ಮಾರಾಟಕ್ಕಿದೆ

34x40, E/S Corner, 40 feet road on both side, ಪಾರ್ಕ್ ಎದುರು, ಕಾವೇರಿ ಬಡಾವಣೆ, MUDA ಅನುಮೋದಿತ ಬಡಾವಣೆ, ಹೂಟಗಳ್ಳಿ ಹತ್ತಿರ.

Mob: 7338445401

SITE FOR SALE

20x30 N/F Dream City, Bogadi. Rate: 25 Lakhs. MUDA Approved

Mob: 8861220989

FOR RENT

1500 sq.ft. godown space available for rent in K.N. Agrahara. Location: Behind Govt. School & Gayatri Theatre bus stop. Contact:

Mob: 9845129141

ಮೈಸೂರು ಮಿತ್ರ

46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಪುನರ್ವಸತಿ ಕಲ್ಪಿಸುವಂತೆ ಆಗ್ರಹಿಸಿ ಕೆಂಚನಹಳ್ಳಿ ಗ್ರಾಮದಲ್ಲಿ ದಲಿತ ಕುಟುಂಬಗಳ ಪ್ರತಿಭಟನೆ

ಅನಾರೋಗ್ಯದಿಂದ ಸ್ಥಳಕ್ಕೆ ಬಾರದ ಶಾಸಕ ಅನಿಲ್ ಚಿಕ್ಕಮಾದು

ಶಾಸಕರ ಪತ್ನಿ, ತಾಯಿ ಮನವಿಗೂ ಜಪ್ಪಯ್ಯ ಅನ್ನದ ಪ್ರತಿಭಟನಾಕಾರರು



ಪ್ರತಿಭಟನೆ ಕೈಬಿಡುವಂತೆ ಗ್ರಾಮಸ್ಥರೊಂದಿಗೆ ಶಾಸಕ ಅನಿಲ್ ಚಿಕ್ಕಮಾದು ಅವರ ಪತ್ನಿ ಸೌಮ್ಯ ಹಾಗೂ ಅವರ ತಾಯಿ ನಾಗಮ್ಮ ಮನವೊಲಿಸಲು ಯತ್ನಿಸುತ್ತಿರುವುದು.

ಹೆಚ್.ಡಿ.ಕೋಟೆ, ನ.28– ತಮಗೆ ಪುನರ್ವಸತಿ ಕಲ್ಪಿಸದೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿ ದಲಿತ ಕುಟುಂಬಗಳು 5 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ.

ತಾಲೂಕಿನ ಕೆಂಚನಹಳ್ಳಿಯ ಸರ್ವೆ ನಂಬರ್ 1ರ ಬಳಿ ದಲಿತ ಕುಟುಂಬದವರು, ಮುಖಂಡರು ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದರೂ ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಸಂಸದ ಸುನಿಲ್ ಬೋಸ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಇತ್ತ ಸುಳಿಯದೆ, ನೀಡಿದ ಭರವಸೆ ಯನ್ನೂ ಈಡೇರಿಸದೆ ಇರುವುದರಿಂದ ಹೋರಾಟ ದಿನದಿಂದ ದಿನಕ್ಕೆ ಕಾವೇರುತ್ತಿದೆ.

ಶಾಸಕ ಅನಿಲ್ ಚಿಕ್ಕಮಾದು ಅವರ ಪತ್ನಿ ಸೌಮ್ಯ ಹಾಗೂ ತಾಯಿ ನಾಗಮ್ಮ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು ಅವರ ಪತ್ನಿ ಸೌಮ್ಯ ಹಾಗೂ ಅವರ ತಾಯಿ ನಾಗಮ್ಮ ಭೇಟಿ ನೀಡಿ ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿ, ಶಾಸಕರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಪ್ರತಿಭಟನಾ ಸ್ಥಳಕ್ಕೆ ಅವರು ಬರಲು ಸಾಧ್ಯವಾಗಿಲ್ಲ, ಸೋಮವಾರ ಶಾಸಕರು, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆ ಗೂಡಿ ಆಗಮಿಸಿ ನಿಮ್ಮ ಅಹವಾಲುಗಳನ್ನು ಆಲಿಸಲಿದ್ದಾರೆ. ಆದ್ದರಿಂದ ಪ್ರತಿಭಟನೆ ಕೈ ಬಿಡಿ ಎಂದು ಮನವಿ ಮಾಡಿದರು.

ಆಗ ಪ್ರತಿಭಟನಾಕಾರರು ಶಾಸಕರು ಸ್ಥಳಕ್ಕೆ ಬರುವವರೆಗೂ ನಾವು ಪ್ರತಿಭಟನೆಯನ್ನು ಮುಂದುವರಿಸುತ್ತೇವೆ, ಸೋಮವಾರದವರೆಗೆ ಪ್ರತಿಭಟನೆಯನ್ನು ಮುಂದುವರಿಸಲು ಪೊಲೀಸರಿಂದ ಅನುಮತಿ ಕೊಡಿಸಬೇಕು ಎಂದು ಮನವಿ ಮಾಡಿ ಪ್ರತಿಭಟನೆಯ ಉದ್ದೇಶವನ್ನು ವಿವರಿಸಿದರು.

ಎಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹೋಬಳಿಯ ಮಗ್ಗೆಮಳಲಿ ಗ್ರಾಮದ ಸುಮಾರು 400 ಕುಟುಂಬಗಳನ್ನು 1969ರಲ್ಲಿ ಕಬಿನಿ ಡ್ಯಾಂ ಕಟ್ಟುವಾಗ ರಾತ್ರೋರಾತ್ರಿ ಟಿಪ್ಪರ್‌ನಲ್ಲಿ ತುಂಬಿಕೊಂಡು ಕೆಂಚನಹಳ್ಳಿ ಭಾಗಕ್ಕೆ ತಂದು ಬಿಟ್ಟರು. ಇಂದಿಗೂ ಅನೇಕರಿಗೆ ಭೂಮಿ ಮತ್ತು ಪುನರ್ವಸತಿ ಕಲ್ಪಿಸದೆ ನಿರ್ಗತಿಕರನ್ನಾಗಿ ಮಾಡಿದ ಸರ್ಕಾರದ ನಡೆ ಇಂದಿಗೂ ಜನವಿರೋಧಿಯಾಗಿದೆ.

1969–70ರಲ್ಲಿ ಮನೆ ನಿವೇಶನ, ಭೂಮಿ ಮತ್ತು ಬದುಕನ್ನು ಕಳೆದುಕೊಂಡ ದಲಿತ, ನಿರಾಶ್ರಿತ ಕುಟುಂಬಗಳಿಗೆ ಅಂದಿನ ಸರ್ಕಾರ ಪ್ರತಿ ಕುಟುಂಬಕ್ಕೂ ಸಮಗ್ರ ಪುನರ್ವಸತಿ ಕಲ್ಪಿಸುವ ಸಲುವಾಗಿ ಕೆಂಚನಹಳ್ಳಿ ಗ್ರಾಮದ ಸರ್ವೆ ನಂ.1ರ 961 ಎಕರೆ ಸಾಮಾಜಿಕ ಅರಣ್ಯವನ್ನು, ಕಂದಾಯ ಭೂಮಿಯನ್ನು ಪರಿವರ್ತಿಸಿ ಇದರಲ್ಲಿ 80 ಎಕರೆ ಭೂಮಿಯನ್ನು ನಿವೇಶನಕ್ಕೆ ಹಂಚಿಕೆ ಮಾಡಿ ಉಳಿದ ಭೂಮಿಯಲ್ಲಿ ಕುಟುಂಬಕ್ಕೆ ತಲಾ 2–3 ಎಕರೆ ಭೂಮಿ ವ್ಯವಸಾಯಕ್ಕೆ ಹಂಚಬೇಕು ಎಂದು ಆದೇಶ ಮಾಡಿತ್ತು. ಆದರೆ ಅಂದಿನ ಅಧಿಕಾರಿ ವರ್ಗ ನಮ್ಮ ಪುನರ್ವಸತಿ ಬಗ್ಗೆ ಮುತುವರ್ಜಿ ವಹಿಸದೆ ಜನರನ್ನು ಎತ್ತುವಳಿ ಮಾಡಿದ್ದನ್ನು ಬಿಟ್ಟರೆ ಬೇರಾವ ಕೆಲಸವನ್ನು ಮಾಡದ ಕಾರಣ ಕೂಲಿಯನ್ನೇ ಆಶ್ರಯಿಸಿ ಬದುಕುತ್ತಿದ್ದ ಈ ಜನರು, ಕೂಲಿಗಾಗಿ ಕೆಂಚನಹಳ್ಳಿ ಗ್ರಾಮವನ್ನು ಬಿಟ್ಟು 1975–76ರಲ್ಲಿ ವಲಸೆ ಹೋದರು.

1995–96ರಲ್ಲಿ ಮತ್ತೆ ವಾಪಸ್ ಬಂದು ಸರ್ಕಾರ ಕೊಟ್ಟ ಜಮೀನಿನಲ್ಲಿ ಬದುಕು ಕಟ್ಟಿಕೊಳ್ಳಲು ಮುಂದಾದಾಗ ಅರಣ್ಯ ಇಲಾಖೆಯವರು ಈ ನಿರಾಶ್ರಿತರನ್ನು ಇದು ಅರಣ್ಯ ಇಲಾಖೆಗೆ ಸೇರಿದ್ದು ಎಂದು ತಡೆಹಿಡಿದರು. ಇದು ನಮ್ಮ ಭೂಮಿ, ಸರ್ಕಾರ ನಮಗೆ ನೀಡಿರುವುದು ಎಂದು ಪ್ರತಿಭಟನೆಗೆ ಇಳಿದಾಗ ಅರಣ್ಯ ಇಲಾಖೆ ಮತ್ತು ಪೊಲೀಸ್‌ನವರು ಏಕಾಏಕಿ ಸುಮಾರು 150 ಜನರ ಮೇಲೆ ಪ್ರಕರಣ ದಾಖಲು ಮಾಡಿ 45 ದಿನಗಳ ಕಾಲ ಜೈಲುವಾಸ ಮಾಡಿಸಿದರು ಎಂದು ಪ್ರತಿಭಟನಾಕಾರರು ತಿಳಿಸಿದರು.

ಈ ವಿಚಾರವಾಗಿ ನಾವು ಹೋರಾಟ ಮಾಡುತ್ತಾ ಬರುತ್ತಿದ್ದೇವೆ. ಅಂದಿನಿಂದ ಇಲ್ಲಿಯ ತನಕವೂ ಅಧಿಕಾರಕ್ಕೆ ಬರುವ ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿಗಳು, ಅಧಿಕಾರಿಗಳನ್ನು ನಿರಂತರವಾಗಿ ಸಂಪರ್ಕ ಮಾಡಿ ನಮ್ಮಗಳ ಸಮಸ್ಯೆಯನ್ನು ಹೇಳಿಕೊಳ್ಳುತ್ತಾ ಬರುತ್ತಿದ್ದೇವೆ. ಆದರೂ ನಮಗೆ ಭೂಮಿ ಸಿಗದೇ ಜೀವನ ನಡೆಸಲು ಕಷ್ಟಕರವಾಗಿದೆ. ಈ ಹೋರಾಟವನ್ನು ತಾರ್ಕಿಕ ಹಂತಕ್ಕೆ ತಲುಪಿಸುವ ನಿಟ್ಟಿನಲ್ಲಿ ಇಡೀ ಗ್ರಾಮವೇ ತೀರ್ಮಾನಿಸಿ ನಮಗಾಗಿ ಕಾಯ್ದಿರಿಸಿದ ಸರ್ವೆ ನಂ.1ರಲ್ಲಿಯೇ ಅನಿರ್ದಿಷ್ಟಾವಧಿ ಧರಣಿ, ಪ್ರತಿಭಟನೆ ನಡೆಸುತ್ತಿದ್ದೇವೆ ಎಂದು ಪ್ರತಿಭಟನಾ ನಿರತರು ಅಲವತ್ತು ಕೊಂಡರು.

ಗ್ರಾಮದ ಮುಖಂಡರಾದ ಪುಟ್ಟಸ್ವಾಮಿ, ಸಿದ್ದಯ್ಯ ನಾಗರಾಜ್, ಸೂರಿ, ಸಣ್ಣಪ್ಪ, ಶಿವಣ್ಣ, ಗುರುಸ್ವಾಮಿ, ಮಹದೇವಸ್ವಾಮಿ, ಮಲಾರಾ ಮಹದೇವ, ಶಾಂತರಾಜು, ನರಸಿಂಹಮೂರ್ತಿ, ಜವರಯ್ಯ, ಮಲ್ಲೇಶ್, ಕೆ.ಎಂ.ನಾಗರಾಜು, ಲೋಕೇಶ್, ವಿಜಯ ಕುಮಾರ್, ಇಮ್ರಾನ್, ವೇಣುಗೋಪಾಲ, ಶಂಕರ ಕೆಂಪಯ್ಯ, ಸಿದ್ದಯ್ಯ, ದೊಡ್ಡಯ್ಯ, ಸಿಂಗಯ್ಯ, ಪುಟ್ಟಯ್ಯ, ರಾಜೀವ, ಗುರುಸ್ವಾಮಿ, ಇನ್ನು ಹಲವಾರು ಗ್ರಾಮಸ್ಥರು ಭಾಗವಹಿಸಿದ್ದರು.

ವಾಲ್ಮೀಕಿ ಮಹರ್ಷಿಗಳ ತತ್ವ ಸಿದ್ಧಾಂತಗಳು ಸರ್ವಕಾಲಕ್ಕೂ ಪ್ರಸ್ತುತ



ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

ನಂಜನಗೂಡು, ನ28– ವಾಲ್ಮೀಕಿ ಮಹರ್ಷಿಗಳ ತತ್ವ–ಸಿದ್ಧಾಂತಗಳು ಎಲ್ಲ ಕಾಲಕ್ಕೂ ಆದರ್ಶವಾಗಿವೆ, ಸಹೋದರ ಸಂಬಂಧ, ರಾಜ–ಪ್ರಜೆಗಳ ನಡುವಿನ ವಿಶ್ವಾಸ, ಪ್ರೀತಿ ಇಡೀ ವಿಶ್ವಕ್ಕೆ ಹಲವು ನೀತಿ ಪಾಠಗಳನ್ನು ಕಲಿಸುತ್ತವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಶುಕ್ರವಾರ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯದಂತಹ ಅಮರ ಕಾವ್ಯವನ್ನು ರಚಿಸಿ ಮಾನವೀಯತೆಯಿಂದ ಬದುಕು ಹೇಗೆ ಸಾಗಿಸಬೇಕು ಎಂಬುದಕ್ಕೆ ಇಡಿ ವಿಶ್ವಕ್ಕೆ ಮಾರ್ಗದರ್ಶಕರಾಗಿ ನಿಂತಿದ್ದಾರೆ. ವಾಲ್ಮೀಕಿ ಮಹರ್ಷಿಗಳು ತೋರಿದ ಆದರ್ಶ, ನೀತಿ ಪಾಠಗಳನ್ನು ಯುವ ಜನಾಂಗ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಬದುಕು ಆದರ್ಶಮಯವಾಗುವ ಜೊತೆಗೆ ಮಹರ್ಷಿ ವಾಲ್ಮೀಕಿ ಅವರಿಗೆ ನಿಜವಾದ ಗೌರವ ನೀಡಿದಂತಾಗುತ್ತದೆ, ರಾಮಾಯಣ ಮಹಾಕಾವ್ಯ ಸರ್ವಕಾಲಕ್ಕು ಪ್ರಸ್ತುತವಾಗಿದೆ ಎಂದರಲ್ಲದೆ ನಗರದ ವಾಲ್ಮೀಕಿ ಭವನಕ್ಕೆ ಶ್ರೀನಿವಾಸ ಪ್ರಸಾದ್ ಅವರು ಶಾಸಕರಾಗಿದ್ದಾಗ 20 ಗುಂಟೆ ನಿವೇಶನ ನೀಡಿದ್ದರು, ಕಳಲೆ ಕೇಶವ ಮೂರ್ತಿ, ಹರ್ಷವರ್ಧನ್ ಅವರೂ ಭವನ ನಿರ್ಮಾಣಕ್ಕೆ ಸಾಕಷ್ಟು ಅನುದಾನ ನೀಡಿದ್ದರಿಂದ ಈ ಭವ್ಯ ಕಟ್ಟಡ ಸಾಕಾರಗೊಂಡಿದೆ, 3.75 ಕೋಟಿ ವೆಚ್ಚಮಾಡಿ ಭವನ ನಿರ್ಮಿಸಲಾಗಿದೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು 1 ಕೋಟಿ ಅನುದಾನ ನೀಡಿದ್ದಾರೆ, ಭವನಕ್ಕೆ ಮೂಲ ಸೌಲಭ್ಯ ಕಲ್ಪಿಸಲು ಹೆಚ್ಚಿನ ಅನುದಾನದ ಅವಶ್ಯಕತೆಯಿದೆ, ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ನೀಡಿ, ಭವನವನ್ನು ಅಭಿವೃದ್ಧಿಪಡಿಸಲು ಬದ್ಧನಾಗಿದ್ದೇನೆ ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತಾಡಿ ವಾಲ್ಮೀಕಿ ಮಹರ್ಷಿ ಶ್ರೇಣಿಕೃತ ಸಮಾಜ ವ್ಯವಸ್ಥೆಯನ್ನು ವಿರೋಧಿಸಿದ್ದರು, ಇಂದಿನ ವ್ಯವಸ್ಥೆಯಲ್ಲಿ ಜಾತಿಯನ್ನು ಪ್ರತಿಪಾದಿಸುವವರನ್ನು ಖಂಡಿಸಬೇಕು, ವಾಲ್ಮೀಕಿ ಮಹರ್ಷಿಗಳ ಸಂದೇಶ ಇಡೀ ವಿಶ್ವಕ್ಕೆ ಅನ್ವಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರಾಜನಹಳ್ಳಿ ಗುರು ಪೀಠದ ಡಾ.ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮುಖಂಡರಾದ ರಾಹುಲ್ ಜಾರಕಿಹೊಳಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಕುಮ್ರಹಳ್ಳಿ ಸುಬ್ಬಣ್ಣ ಮಾತನಾಡಿದರು.

ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜು ಆವರಣದಿಂದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿರುವ ವಾಲ್ಮೀಕಿ ಸಮುದಾಯ ಭವನದವರೆಗೆ ಮಹರ್ಷಿ ವಾಲ್ಮೀಕಿ ರವರ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ಮೆರವಣಿಗೆ ನಡೆಸಲಾಯಿತು, ಮೆರವಣಿಗೆಗೆ ಪೂಜಾ ಕುಣಿತ, ಡೊಳ್ಳು ಕುಣಿತ, ನಾದಸ್ವರ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರುಗು ನೀಡಿದವು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಎಚ್.ಸಿ.ಬಸವರಾಜು ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಎಸ್.ಮಹದೇವಯ್ಯ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಎಂ.ರಾಮಪ್ಪ, ಮೂರ್ತಿ, ಕುರಹಟ್ಟಿ ಮಹೇಶ್, ಶ್ರೀಕಂಠ ನಾಯಕ, ಸಿ.ಎಂ. ಶಂಕರ್, ಕೆ.ಮಾರುತಿ, ನಾಗರಾಜು, ಸುಧೀಂದ್ರಕುಮಾರ್, ದೊರೆಸ್ವಾಮಿ ನಾಯಕ, ಸೂರಹಳ್ಳಿ ಲಕ್ಷ್ಮಣ, ನಗರ್ಲೆ ಮಹದೇವಸ್ವಾಮಿ, ಶಿವನಂಜ ನಾಯಕ, ಪ್ರಮೋದ್, ರಮೇಶ್, ರವಿ, ಕಳಲೆ ಮಹೇಶ್, ತಗಡೂರು ನಾಯಕ, ಹೊಣಕಾರನಾಯಕ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್ ಇದ್ದರು.

ಸೇವಾ ಭದ್ರತೆಗೆ ಆಗ್ರಹಿಸಿ ಪತ್ರ ಬರಹಗಾರರ ವೇದಿಕೆ ಆಗ್ರಹ

ತಹಸೀಲ್ದಾರ್ ಮೂಲಕ ಸಿಎಂಗೆ ಮನವಿ ಸಲ್ಲಿಕೆ



ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸುತ್ತಿರುವ ಪತ್ರ ಬರಹಗಾರರು.

ತಿ.ನರಸೀಪುರ, ನ.28–ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಪತ್ರ ಬರಹಗಾರರಿಗೆ ಸೇವಾ ಭದ್ರತೆ ಒದಗಿಸುವಂತೆ ಮೈಸೂರು ಜಿಲ್ಲಾ ಪತ್ರ ಬರಹಗಾರರ ಪ್ರಗತಿಪರ ವೇದಿಕೆಯ ಕೇಂದ್ರ ಸಮಿತಿ ಆಗ್ರಹಿಸಿದೆ.

ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪತ್ರ ಬರಹಗಾರರು ಆಯಾ ಜಿಲ್ಲಾಧಿಕಾರಿ ಮತ್ತು ತಾಲೂಕು ತಹಸೀಲ್ದಾರ್ ಅವರ ಮೂಲಕ ರಾಜ್ಯದ ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಸಚಿವರಿಗೆ ಪತ್ರ ಬರೆದು ಆಗ್ರಹಿಸಬೇಕು ಎಂದು ವೇದಿಕೆ ಮನವಿ ಮಾಡಿದೆ. ತಿ.ನರಸೀಪುರ ತಹಸೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಸೇವಾ ಭದ್ರತೆ ಒದಗಿಸುವಂತೆ ಆಗ್ರಹಿಸಿ ವೇದಿಕೆಯ ಅಧ್ಯಕ್ಷ ಮತ್ತು ಪದಾಧಿಕಾರಿಗಳು ಮನವಿ ಮಾಡಿದ್ದು, ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಕಳುಹಿಸುವಂತೆ ಕೋರಿದ್ದಾರೆ.

ಮನವಿ ಪತ್ರ ಸ್ವೀಕರಿಸಿದ ತಹಸೀಲ್ದಾರ್ ಅವರು ಮನವಿ ಪತ್ರ ಮುಖ್ಯಮಂತ್ರಿಗಳಿಗೆ ತಲುಪಿಸುವುದಾಗಿ ಭರವಸೆ ನೀಡಿದರು.

ಪತ್ರ ಬರಹಗಾರರ ಪ್ರಗತಿಪರ ವೇದಿಕೆಯ ಅಧ್ಯಕ್ಷ ಎಂ.ಶಿವಸ್ವಾಮಿ, ಕಾರ್ಯಾಧ್ಯಕ್ಷ ಲೋಕೇಶ್, ಪ್ರಧಾನ ಕಾರ್ಯದರ್ಶಿ ಎಸ್.ಸುರೇಶ್, ಖಜಾಂಚಿ ಎನ್.ರವಿಶಂಕರ್, ನಿರ್ದೇಶಕರಾದ ಕೆಬ್ಬೆ ನಾಗರಾಜು, ಎ.ಎಂ.ರಮೇಶ್, ಪತ್ರ ಬರಹಗಾರರಾದ ಬಿ.ರೇವಣ್ಣ, ಮಾಲಂಗಿ ಸುರೇಶ್, ಮಂಡ್ಯ ಮಹದೇವಯ್ಯ, ವೆಂಕಟೇಶ್, ಗೌರವಾಧ್ಯಕ್ಷ ಎಸ್.ಶಿವಶಂಕರ್, ಉಪಾಧ್ಯಕ್ಷ ಬಿ.ರಮೇಶ್, ಸಹ ಕಾರ್ಯದರ್ಶಿ ಗವಿ ಸಿದ್ದಯ್ಯ ಅವರುಗಳು ಈ ವೇಳೆ ಉಪಸ್ಥಿತರಿದ್ದರು.

ಹುಣಸೂರಲ್ಲಿ ಸಾಲುಮರದ ತಿಮ್ಮಕ್ಕರಿಗೆ ಶ್ರದ್ಧಾಂಜಲಿ

ಹುಣಸೂರು: ತಾಲೂಕಿನ ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನದಲ್ಲಿ ಸಾಲುಮರದ ತಿಮ್ಮಕ್ಕ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ದಲಿತ ಮಹಿಳಾ ಒಕ್ಕೂಟದ ಜಿಲ್ಲಾ ಸಂಚಾಲಕಿ ಮಹಾದೇವಮ್ಮ, ಸೋಮಣ್ಣ, ಮೋದೂರು ಶಿವರಾಜ್, ಪ್ರಕಾಶ್, ನಂಜುಂಡ, ಹೊನ್ನಿಕುಪ್ಪೆ ಮಹದೇವಪ್ಪ ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ಕೆ.ಟಿ.ರಮೇಶ್ ನಿಧನ



ಕೆ.ಆರ್.ನಗರ, ನ.28– ಪಟ್ಟಣದ ಮೈಸೂರು ಮಿತ್ರ ಪತ್ರಿಕೆಯ ಹಿರಿಯ ವರದಿಗಾರ ಕೆ.ಟಿ.ರಮೇಶ್(72) ಇಂದು ಸ್ವಗೃಹದಲ್ಲಿ ನಿಧನರಾದರು.

ದಿವಂಗತರು ಪತ್ನಿ, ಇಬ್ಬರು ಪುತ್ರಿಯರು, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಕೆ.ಟಿ.ರಮೇಶ್ ಅವರು ಎಂಬತ್ತರ ದಶಕದಿಂದ ಮೈಸೂರು ಮಿತ್ರ ವರದಿಗಾರರಾಗಿ ಹಾಗೂ ತಾಲೂಕು ಪತ್ರಕರ್ತ ಸಂಘದ ಅಧ್ಯಕ್ಷರಾಗಿ ಪಟ್ಟಣದ ವರ್ತಕರ ಸಂಘದ ಅಧ್ಯಕ್ಷರಾಗಿ, ಕಾಲೇಜು ಸಮಿತಿಯ ಸಿಡಿಸಿ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದ್ದರಲ್ಲದೆ ಪಟ್ಟಣದ ಅಭಿವೃದ್ಧಿಗೆ ಸ್ಥಳೀಯ ಶಾಸಕರು, ಪುರಸಭಾ ಸದಸ್ಯರು, ಚುನಾಯಿತ ಪ್ರತಿನಿಧಿಗಳ ಜೊತೆ ಕೈಜೋಡಿಸಿದ್ದರು.

ಇವರ ಅಂತ್ಯಕ್ರಿಯೆಯು ಪಟ್ಟಣದ ಕಂಠೇನಹಳ್ಳಿ ಸಾರ್ವಜನಿಕ ರುದ್ರಭೂಮಿಯಲ್ಲಿ ಕೊಡಗು ಸಂಪ್ರದಾಯದಂತೆ ವಿಧಿ ವಿಧಾನಗಳೊಂದಿಗೆ ನಡೆಯಿತು.

ಇವರ ನಿಧನಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಹಿರಿಯ ಪತ್ರಕರ್ತರಾದ ಸಿ.ಕೆ.ಮಹೇಂದ್ರ, ಎಸ್.ಟಿ.ರವಿಕುಮಾರ್, ಸುಬ್ರಹ್ಮಣ್ಯ, ಕಿರಣ್ ಕುಮಾರ್, ಮೈಸೂರು ಮಿತ್ರ ಪತ್ರಿಕೆಯ ಪ್ರಸರಣಾಧಿಕಾರಿ ಗೋಪಿನಾಥ್, ಕನ್ನಡಪ್ರಭ ಗಣೇಶ್, ತಾಲೂಕು ಪತ್ರಕರ್ತ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು, ಉಪಾಧ್ಯಕ್ಷ ಸಿ.ಸಿ.ಮಹದೇವ, ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್, ಪತ್ರಕರ್ತರಾದ ನಾಗೇಶ್, ಎಂ.ಎಸ್.ರವಿಕುಮಾರ್, ಶಿಲ್ಪ ಶ್ರೀನಿವಾಸ್, ಎಸ್.ಯೋಗಾನಂದ್, ಚುಂಚನಕಟ್ಟೆ ಮಧು, ಮಹಮ್ಮದ್ ಸಬೀರ್, ರಾಮಕೃಷ್ಣೇಗೌಡ, ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮ ಶಂಕರ್, ರೋಟರಿ ಅಧ್ಯಕ್ಷ ಟಿ.ಎನ್.ದಯಾನಂದ್, ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್, ಪುರಸಭೆ ಮಾಜಿ ಸದಸ್ಯೆ ಅಶ್ವಿನಿ ಪುಟ್ಟು, ಸೇರಿದಂತೆ ಅನೇಕರು ಸಂತಾಪ ಸೂಚಿಸಿದ್ದಾರೆ.

ಶ್ರೀಕಂಠ ನಾಯಕ



ಸುತ್ತೂರು: ನಂಜನಗೂಡು ತಾಲೂಕು ಸುತ್ತೂರು ಗ್ರಾಮದ ನಿವೃತ್ತ ಪ್ರಾಂಶುಪಾಲ ಶ್ರೀಕಂಠ ನಾಯಕ(85) ನಿಧನರಾದರು. ದಿವಂಗತರು ಪತ್ನಿ, ಮಕ್ಕಳಾದ ಡಾಕ್ಟರ್ ಸುತ್ತೂರು ಮಾಲಿನಿ ಸೇರಿದಂತೆ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.

ಕೋಟೆ ತಾಲೂಕಿನಲ್ಲಿ ಮತ್ತೆ ಕಾಣಿಸಿಕೊಂಡ ಹುಲಿ

ಸೆರೆಗೆ ಬೋನು ಇರಿಸಿದ ಅರಣ್ಯ ಇಲಾಖೆ



ಹೆಚ್.ಡಿ.ಕೋಟೆ : ಕಳೆದ ಹಲವು ದಿನಗಳಿಂದ ತಾಲೂಕಿನಲ್ಲಿ ಹುಲಿಗಳ ಉಪಟಳ ಹೆಚ್ಚಾಗಿದ್ದು, ಜನ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಹುಲಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಮುಂದಾಗಿದೆ.

ಹೊಸಹೊಳಲು ಗ್ರಾಮದ ಭೈರೇಗೌಡ ಎಂಬುವರ ಜಮೀನಿನಲ್ಲಿ ಅರಣ್ಯ ಇಲಾಖೆಯು ಬೋನನ್ನು ಇರಿಸಿದ್ದು, ಹುಲಿ ಸೆರೆ ಕಾರ್ಯಾಚರಣೆಗೆ ಚಾಲನೆ ನೀಡಿದೆ.

ನಾಗರಹೊಳೆ ಅಭಯಾರಣ್ಯಕ್ಕೆ ಹೊಂದಿಕೊಂಡಂತಿರುವ ಹೊಸಹೊಳಲು ಗ್ರಾಮದಲ್ಲಿ ಹುಲಿ ಕೆಲ ರೈತರಿಗೆ ಕಾಣಿಸಿಕೊಂಡಿತ್ತು, ಅಲ್ಲದೆ ಹುಲಿ ಮೇಕೆ ಮತ್ತು ಎರಡು ಹಸುಗಳನ್ನು ಬಲಿ ಪಡೆದಿತ್ತು. ರೈತರು ಹುಲಿಯನ್ನು ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದ್ದರು. ಮನವಿ ಮೇರೆಗೆ ಅರಣ್ಯ ಇಲಾಖೆಯ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ, ಹುಲಿಯ ಹೆಜ್ಜೆ ಗುರುತುಗಳನ್ನು ಪರಿಶೀಲನೆ ನಡೆಸಿದ್ದರು, ಈ ವೇಳೆ ಹುಲಿಯ ಚಲನ ವಲನಗಳ ಹೆಜ್ಜೆ ಗುರುತುಗಳು ಕಂಡು ಬಂದ ಹಿನ್ನೆಲೆ ಸಾರ್ವಜನಿಕರಿಗೆ ಮತ್ತು ರೈತರಿಗೆ ಅರಣ್ಯ ಇಲಾಖೆಯು ಜಮೀನಿಗೆ ತೆರಳುವ ವೇಳೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಿದ್ದರು. ಅಲ್ಲದೆ ಗ್ರಾಮದ ಭೈರೇಗೌಡ ಎಂಬುವರ ಜಮೀನಿನಲ್ಲಿ ದೊಡ್ಡ ಗಾತ್ರದ ಬೋನೊಂದನ್ನು ಅರಣ್ಯ ಇಲಾಖೆ ಇರಿಸಿದ್ದು, ಅರಣ್ಯ ಸಿಬ್ಬಂದಿಗಳು ಅಕ್ಕಪಕ್ಕದ ಜಮೀನಿನಲ್ಲಿ ಮೊಕ್ಕಾಂ ಹೂಡಿದ್ದಾರೆ.

ಜಮೀನಿನ ಮಾಲೀಕ ಭೈರೇಗೌಡ ಮಾತನಾಡಿ, ನಮ್ಮ ಗ್ರಾಮವು ಕಾಡಂಚಿನ ಗ್ರಾಮವಾಗಿದೆ. ಈ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗಿದೆ, ಇತ್ತೀಚಿನ ದಿನಗಳಲ್ಲಿ ಹುಲಿ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿರುವುದು ಕಂಡುಬಂದಿದೆ. ಆದ್ದರಿಂದ ಅರಣ್ಯ ಇಲಾಖೆಯು ಸಾರ್ವಜನಿಕರಿಗೆ ಮತ್ತು ಈ ಭಾಗದ ರೈತರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು, ನಮ್ಮ ಮನವಿಗೆ ಸ್ಪಂದಿಸಿ ಅರಣ್ಯ ಇಲಾಖೆಯು ಬೋನನ್ನು ಇಟ್ಟಿರುವುದು ಮತ್ತು ನಮ್ಮ ಗ್ರಾಮದ ಸುತ್ತಮುತ್ತ ಅರಣ್ಯ ಇಲಾಖೆಯ ಸಿಬ್ಬಂದಿಗಳು ಸಂಚರಿಸುತ್ತಿರುವುದರಿಂದ ಗ್ರಾಮಸ್ಥರಲ್ಲಿ ಕೊಂಚ ನೆಮ್ಮದಿ ದೊರೆತಿದೆ ಎಂದರು.

ಬೋನನ್ನು ಇಡುವ ವೇಳೆ ಅರಣ್ಯ ಇಲಾಖೆಯ ಎಸಿಎಫ್ ಮಧು, ಅಂತರಸಂತೆ ವಲಯದ ಆರ್‌ಎಫ್‌ಓ ಎಸ್.ಎಸ್. ಸಿದ್ದರಾಜು, ಡಿ.ಆರ್.ಎಫ್.ಓ ವಿನೋದ್, ಸಿಬ್ಬಂದಿಗಳಾದ ದಿನೇಶ್, ವೇಣು, ನರಸಿಂಹ, ಪ್ರಮೋದ್, ಪ್ರಕಾಶ್ ಇದ್ದರು.

ರಾಜ್ಯದಲ್ಲಿ ಸಿಎಂ ಬದಲಾಗುವುದಾದರೆ ಸಚಿವ ಮಹದೇವಪ್ಪರಿಗೆ ಸಿಎಂ ಸ್ಥಾನ ನೀಡಿ

ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಗ್ಗಲಿಪುರ ಮಧುಕುಮಾರ್ ಆಗ್ರಹ

ತಿ.ನರಸೀಪುರ, 28– ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಮಾಡಿದ್ದೇ ಆದಲ್ಲಿ ಆ ಸ್ಥಾನವನ್ನು ದಲಿತ ನಾಯಕರು, ಪ್ರಭಾವಿ ಸಚಿವರೂ ಆದ ಹೆಚ್.ಸಿ.ಮಹದೇವಪ್ಪ ಅವರಿಗೆ ನೀಡುವಂತೆ ಅಖಿಲ ಕರ್ನಾಟಕ ಎಚ್.ಸಿ.ಮಹಾದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಗ್ಗಲಿಪುರ ಕೆ.ಎಂ. ಮಧುಕುಮಾರ್ ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಸ್ತುತ ರಾಜ್ಯ ರಾಜಕಾರಣದಲ್ಲಿ ನವೆಂಬರ್ ಕ್ರಾಂತಿಯಾಗಲಿದೆ ಎಂಬ ಹೇಳಿಕೆಗಳು ಕೇಳಿ ಬರುತ್ತಿದ್ದು, ಮುಖ್ಯಮಂತ್ರಿ ಬದಲಾವಣೆ ವಿಷಯ ಚರ್ಚಿತವಾಗುತ್ತಿದೆ. ಹಾಗೇನಾದರೂ ಮುಖ್ಯಮಂತ್ರಿ ಬದಲಾವಣೆಯಾಗಿದ್ದೇ ಆದಲ್ಲಿ ಆ ಸ್ಥಾನವನ್ನು ನಮ್ಮ ಕ್ಷೇತ್ರದ ಶಾಸಕರೂ ಆದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ನೀಡುವಂತೆ ಆಗ್ರಹಿಸಿದರು.

ಸತತವಾಗಿ ತಿ.ನರಸೀಪುರ ಕ್ಷೇತ್ರವನ್ನು ಪ್ರತಿನಿಧಿಸಿಕೊಂಡು ಬಂದಿದ್ದಾರೆ. ಅಲ್ಲದೇ ವಿವಿಧ ಸಚಿವ ಸ್ಥಾನ ಪಡೆದು ಆ ಸ್ಥಾನದಲ್ಲಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಅಲ್ಲದೇ ಮುಖ್ಯಮಂತ್ರಿ ಸ್ಥಾನದ ಹತ್ತಿರಕ್ಕೆ ಹೋಗಿದ್ದ ಹಿರಿಯ ರಾಜಕಾರಣಿ ಬಿ.ರಾಚಯ್ಯ ಅವರ ಶಿಷ್ಯರಾಗಿರುವ ಮಹದೇವಪ್ಪನವರಿಗೆ ಯಾವುದೇ ಹುದ್ದೆ ಕೊಟ್ಟರೂ ನಿಭಾಯಿಸುವ ಚಾಣಾಕ್ಷತನ ಇರುವುದರಿಂದ ಹೈಕಮಾಂಡ್ ಮುಖ್ಯಮಂತ್ರಿ ಸ್ಥಾನ ಬದಲಾವಣೆ ಮಾಡಿದ್ದೇ ಆದಲ್ಲಿ ಆ ಸ್ಥಾನವನ್ನು ಮಹದೇವಪ್ಪ ಅವರಿಗೆ ನೀಡುವಂತೆ ಒತ್ತಾಯಿಸಿದರು.

ಸಂಪುಟ ಪುನರಚನೆ ಆಗಬೇಕೆಂಬ ಚರ್ಚೆ ನಡೆದಿರುವ ವೇಳೆ ದಲಿತರನ್ನು ಮುಖ್ಯಮಂತ್ರಿ ಮಾಡಬೇಕೆಂಬುದು ಹೇಳಿದ್ದಾರೆ. ನಂತರ ಇಂದಿರಾಗಾಂಧಿ ಅಧಿಕಾರಕ್ಕೆ ಬಂದಾಗಿನಿಂದ 2025ರ ತನಕ ಸುದೀರ್ಘವಾಗಿ 50 ವರ್ಷಗಳ ಕಾಲ ದಲಿತರು ಕಾಂಗ್ರೆಸ್ ಪಕ್ಷ ಬೆಂಬಲಿಸುತ್ತಾ ಬಂದಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ ಒಬ್ಬರೇ ಒಬ್ಬರು ದಲಿತ ಮುಖ್ಯ ಮಂತ್ರಿ ಕಾಣಲು ಸಾಧ್ಯವಾಗದಿರುವುದು ದಲಿತ ಸಮಾಜದ ದೌರ್ಭಾಗ್ಯ ಎಂದರು.

2023ರ ಚುನಾವಣೆಯಲ್ಲಿ ರಾಜ್ಯದ ಶೇ. 20ರಷ್ಟು ದಲಿತರು ಎಲ್ಲಾ ಪಕ್ಷಗಳನ್ನು ಬದಿಗೊತ್ತಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವ ಮೂಲಕ 136 ಸ್ಥಾನ ಗೆಲುವಿಗೆ ಪ್ರಮುಖ ಪಾತ್ರವಹಿಸಿದ್ದಾರೆ. ಈಗ ಎರಡೂವರೆ ವರ್ಷಗಳ ನಂತರ ಅಧಿಕಾರ ಹಸ್ತಾಂತರ ಆಗಬೇಕಿದೆ. ಅದು ಆದದ್ದೇ ಆದಲ್ಲಿ ಕಾಂಗ್ರೆಸ್ ಪಕ್ಷ ದಲಿತರ ಋಣ ತೀರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಹುದ್ದೆಗೆ ಅರ್ಹತೆ ಹೊಂದಿರುವ ಸಚಿವ ಹೆಚ್.ಸಿ.ಮಹದೇವಪ್ಪರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಆಗ್ರಹಿಸಿದರು.

ಕೆ.ಆರ್.ನಗರದಲ್ಲಿ ಬೆಳೆಗಳಿಗೆ ಬೆಂಬಲ ಬೆಲೆ, ಖರೀದಿ ಕೇಂದ್ರ ತೆರೆಯುವಂತೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ



ಪಟ್ಟಣದ ತಾಲೂಕು ಆಡಳಿತ ಕಚೇರಿ ಮುಂದೆ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಹಾಗೂ ಖರೀದಿ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯಿಸಿ ತಾಲೂಕು ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕೆ.ಆರ್.ನಗರ, ನ.28– ರಾಜ್ಯ ಕಾಂಗ್ರೆಸ್ ಸರಕಾರ ರೈತರಿಗೆ ನೀಡಬೇಕಾದ ಸವಲತ್ತುಗಳನ್ನು ನೀಡದೆ ಗ್ಯಾರಂಟಿ ಯೋಜನೆ ಮುಂದಿಟ್ಟುಕೊಂಡು ರೈತರ ಬಾಯಿಗೆ ಮಣ್ಣು ಹಾಕುತ್ತಿದೆ ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಈ. ಶ್ರೀನಿವಾಸಗೌಡ ಆರೋಪಿಸಿದರು.

ಪಟ್ಟಣದ ತಾಲೂಕು ಆಡಳಿತ ಕಚೇರಿ ಮುಂದೆ ಬೆಳೆಗಳಿಗೆ ಬೆಂಬಲ ಬೆಲೆ ಹಾಗೂ ಖರೀದಿ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯಿಸಿ ತಾಲೂಕು ಬಿಜೆಪಿ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿ, ರಾಜ್ಯ ಸರಕಾರದ ಕಾಂಗ್ರೆಸ್ ಮುಖಂಡರು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದು, ರಾಜ್ಯದ ರೈತರ, ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುವಲ್ಲಿ ವಿಫಲವಾಗಿದೆ. ರೈತರನ್ನು ಬಲಿಪಶು ಮಾಡುತ್ತಿರುವುದು ಸರಿಯೆ? ಎಂದು ಪ್ರಶ್ನಿಸಿದರು.

ನರೇಂದ್ರ ಮೋದಿ ಅವರ ಯೋಜನೆಗಳನ್ನು ಜಾರಿಗೆ ತರಲಾಗದ ರಾಜ್ಯದ ಸರ್ಕಾರ 25 ಸಾವಿರ ಇದ್ದ ಟ್ರಾನ್ಸ್‌ಫಾರ್ಮರ್ ಬೆಲೆಯನ್ನು ಈಗ ಮೂರೂವರೆ ಲಕ್ಷ ರೂ.ಗೆ ಏರಿಸಿದೆ. ರೈತರ ಬೆಳೆಗಳಿಗೆ ಬೆಲೆ ಇಲ್ಲದಾಗಿದೆ. ಯಡಿಯೂರಪ್ಪ ಅವರು ರೈತರಿಗೆ ನೀಡುತ್ತಿದ್ದ 4 ಸಾವಿರ ರೂ. ನೀಡುತ್ತಿಲ್ಲ, ಹಾಲಿಗೆ ನೀಡುತ್ತಿದ್ದ ಪ್ರೋತ್ಸಾಹ 4 ರೂ.ಗಳನ್ನು 7 ರೂ. ಮಾಡುವುದಾಗಿ ಹೇಳಿದರು. ಆದರೆ, ಇನ್ನೂ ಮಾಡಿಲ್ಲ. ರೈತರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾನಿಧಿ ನೀಡುತ್ತಿಲ್ಲ. ಬೆಂಬಲ ಬೆಲೆ ಘೋಷಣೆ ಮಾಡಲಾಗಿಲ್ಲ. ರೈತರ ಬೆಳೆನಷ್ಟಕ್ಕೆ ಪರಿಹಾರ ನೀಡಲಾಗಿಲ್ಲ ಎಂದು ಕಿಡಿಕಾರಿದರು.

ಬೆಳೆಗಳಿಗೆ ಬೆಂಬಲ ಬೆಲೆ ನೀಡುವ ಹಾಗೂ ಖರೀದಿ ಕೇಂದ್ರಗಳನ್ನು ಶೀಘ್ರದಲ್ಲಿ ತೆರೆಯಬೇಕು. ತಾಲೂಕಿನ ಪ್ರಮುಖ ಬೆಳೆಗಳಾದ ಭತ್ತ, ರಾಗಿ, ಜೋಳ ಬೆಳೆಗಳ ಖರೀದಿ ಕೇಂದ್ರ ತೆರೆದು ರೈತರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಉಪಾಧ್ಯಕ್ಷ ಜಾಬಗೆರೆ ರಮೇಶ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ಹೊಸೂರು ಅನೀಲ್, ತಾಲೂಕು ರೈತ ಮೋರ್ಚಾ ಮಾಜಿ ಅಧ್ಯಕ್ಷ ಶಿವರಾಮ್, ಕೆ.ಆರ್.ನಗರ ತಾಲೂಕು ಅಧ್ಯಕ್ಷ ಹೊಸೂರು ಧರ್ಮ, ಸಾಲಿಗ್ರಾಮ ಅಧ್ಯಕ್ಷ ಸಾ.ರಾ. ತಿಲಕ್, ನಗರ ಅಧ್ಯಕ್ಷ ಬ್ಯಾಂಕ್ ರಾಘವೇಂದ್ರ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಮೋಹನ್ ಕುಮಾರ್, ಉಮಾಶಂಕರ್ (ಗುಂಡಾ), ದೆಗ್ಗನಹಳ್ಳಿ ರಘು,ತಾಲೂಕು ಉಪಾಧ್ಯಕ್ಷೆ ಬಿ.ನಾಗಶ್ರೀ, ಬಿಜೆಪಿ ಮುಖಂಡರಾದ ಸಿ.ಆರ್.ಜಗದೀಶ್, ಕನುಗನಹಳ್ಳಿ ಕೃಷ್ಣ ಮುರುಳಿ, ಮಾಯಣ್ಣ, ಕೃಷ್ಣಗೌಡ, ಬಾಲಮನೋಹರ, ಸುನೀಲ್, ಪರಶುರಾಮ್, ಮನೋಜ್ ಕುಮಾರ್, ಶೇಖರ್, ಗೋಪಾಲ್ ರಾಜ್, ಧರ್ಮೇಶನಾಯ್ಕ ರಾಘವೇಂದ್ರ, ಮಂಜುನಾಥ್ ಇದ್ದರು.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ವನ್ಯಜೀವಿ ಕಾರಿಡಾರ್ ಕಾಮಗಾರಿ ನೆನೆಗುದಿಗೆ

ಬಲಿಯಾಗುತ್ತಿವೆ ಅಮೂಲ್ಯ ವನ್ಯಜೀವಿಗಳು



ಅಪರಿಚಿತ ವಾಹನಕ್ಕೆ ಸಿಲುಕಿ ಚಿರತೆ ಮೃತಪಟ್ಟಿರುವುದು.



ವನ್ಯಜೀವಿ ಕಾರಿಡಾರ್ ಕಾಮಗಾರಿ ಅಪೂರ್ಣಗೊಂಡಿರುವ ದೃಶ್ಯ.

ಶ್ರೀರಂಗಪಟ್ಟಣ, ನ.28 (ವಿನಯ್ ಕಾರೇಕುರ)– ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಉದ್ಘಾಟನೆಗೊಂಡು ವರ್ಷಗಳೇ ಕಳೆದರೂ ವನ್ಯಜೀವಿಗಳು ಒಂದೆಡೆಯಿಂದ ಮತ್ತೊಂದೆಡೆಗೆ ಸುರಕ್ಷಿತವಾಗಿ ಹಾದು ಹೋಗಲು ನಿರ್ಮಾಣವಾಗಬೇಕಿದ್ದ ವನ್ಯಜೀವಿಗಳ ಅಂಡರ್‌ಪಾಸ್ ಹಾಗೂ ಫ್ಲೈ ಓವರ್ (ಮೇಲ್ಸೇತುವೆ) ಒಳಗೊಂಡ ವನ್ಯಜೀವಿ ಕಾರಿಡಾರ್ ನೆನೆಗುದಿಗೆ ಬಿದ್ದಿದೆ.

ಹೆದ್ದಾರಿ ಗುತ್ತಿಗೆದಾರನಾಗಲಿ, ಹೆದ್ದಾರಿ ಪ್ರಾಧಿಕಾರವಾಗಲಿ ಅಥವಾ ಅರಣ್ಯ ಇಲಾಖೆಯಾಗಲಿ ಇದರ ಬಗ್ಗೆ ತಲೆಕೆಡಿಸಿಕೊಳ್ಳದಿರುವುದು ವನ್ಯಜೀವಿಗಳಿಗೆ ಕಂಟಕವಾಗಿ ಪರಿಣಮಿಸಿದ್ದು, ಗುರುವಾರ ಬೆಳಗ್ಗೆ 6 ವರ್ಷದ ಗಂಡು ಚಿರತೆಯೊಂದು ಎಕ್ಸ್‌ಪ್ರೆಸ್‌ವೇ ದಾಟಲು ಹೋಗಿ ಅಪಘಾತದಲ್ಲಿ ಮೃತಪಟ್ಟಿರುವುದು ಪ್ರಾಣಿಪ್ರಿಯರ ಆಕ್ರೋಶಕ್ಕೆ ಕಾರಣವಾಗಿದೆ.

ಗುರುವಾರ ಮುಂಜಾನೆ ಈ ಘಟನೆ ಸಂಭವಿಸಿದ್ದು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ನಂತರ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ಬಳಿ ಇರುವ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿದ್ದು ತಕ್ಷಣಕ್ಕೆ ಯಾವ ವಾಹನ ಅಪಘಾತ ಮಾಡಿದೆ ಎಂಬ ಮಾಹಿತಿ ಸಿಕ್ಕಿಲ್ಲ. ನಂತರ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಿದ್ದಾರೆ.

ಬೆಂಗಳೂರು-ಮೈಸೂರು ನಡುವಿನ ಪ್ರಯಾಣದ ಅವಧಿಯನ್ನು ಕಡಿಮೆ ಮಾಡಿರುವ ಎಕ್ಸ್‌ಪ್ರೆಸ್ ವೇ ಯೋಜನೆ ವನ್ಯಜೀವಿಗಳ ಪಾಲಿಗೆ ಕಂಟಕವಾಗಬಾರದು ಎಂಬ ಕಾರಣಕ್ಕೆ ಹೆದ್ದಾರಿ ಕಾಮಗಾರಿ ವೇಳೆ ಶ್ರೀರಂಗಪಟ್ಟಣ ತಾಲೂಕಿನ ಕೆ.ಶೆಟ್ಟಹಳ್ಳಿ ಬಳಿ ಇರುವ ಕಿರು ಅರಣ್ಯದಲ್ಲಿ ಪ್ರಾಣಿಗಳು ರಸ್ತೆ ದಾಟಲು ಅನುಕೂಲ ಕಲ್ಪಿಸುವ ಸಲುವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ 8.96 ಕೋಟಿ ವೆಚ್ಚದಲ್ಲಿ ಅಂಡರ್ ಪಾಸ್ ಹಾಗೂ ಫ್ಲೈ ಓವರ್(ಮೇಲ್ಸೇತುವೆ)ಗಳನ್ನು ನಿರ್ಮಾಣ ಮಾಡಲು ಪ್ರಾಧಿಕಾರ ಮುಂದಾಗಿತ್ತು ಶೇ.60 ರಷ್ಟು ಕಾಮಗಾರಿ ನಡೆದಿದ್ದು ವರ್ಷಗಳೇ ಕಳೆದರೂ ಕೂಡ ಇನ್ನೂ ಈ ಕಾಮಗಾರಿ ಪೂರ್ಣವಾಗದೆ ಇರುವುದರಿಂದ ಈ ಭಾಗದ ಕಾಡು ಪ್ರಾಣಿಗಳಿಗೆ ಮಾರಕವಾಗಿದೆ.

ಹಿಂದಿನಿಂದಲೂ ಈ ಭಾಗದಲ್ಲಿ ಪ್ರಾಣಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವ ಸಲುವಾಗಿ ರಸ್ತೆ ದಾಟುತ್ತಿದ್ದವು. ಆದರೆ ಎಕ್ಸ್‌ಪ್ರೆಸ್ ವೇ ಕಾಮಗಾರಿ ಪ್ರಾರಂಭವಾಗಿ ರಸ್ತೆಯ ಎರಡೂ ಬದಿಯಲ್ಲಿ ಬೇಲಿ ನಿರ್ಮಾಣ ಮಾಡಿರುವುದರಿಂದ ಈಗ ಪ್ರಾಣಿಗಳು ವಾಹನ ದಟ್ಟಣೆಯ ನಡುವೆಯೇ ಹೆದ್ದಾರಿಯನ್ನು ದಾಟಲು ಮುಂದಾಗುತ್ತಿವೆ. ಇದರ ಪರಿಣಾಮ ಕೆಲ ಪ್ರಾಣಿಗಳು ವೇಗವಾಗಿ ಚಲಿಸುವ ವಾಹನಗಳಿಗೆ ಸಿಲುಕಿ ಸ್ಥಳದಲ್ಲೇ ಅಸುನೀಗುತ್ತಿರುವುದು ಕಂಡುಬಂದಿದೆ.

ಈ ವನ್ಯಜೀವಿ ಕಾರಿಡಾರ್ ಫ್ಲೈಓವರ್ (ಮೇಲ್ಸೇತುವೆ) ಸುಮಾರು 100 ಮೀಟರ್ ಉದ್ದವಿದ್ದು ಸುಮಾರು 20 ಅಡಿ ಅಗಲವಿದೆ ಹಾಗೂ 30 ಅಡಿ ಅಗಲ 100 ಅಡಿ ಆಗಲದ ಅಂಡರ್‌ಪಾಸ್‌ನಲ್ಲಿ ಚಿರತೆ, ಕರಡಿ, ಜಿಂಕೆ. ಕಾಡು ಹಂದಿ, ಮೊಲ ಸೇರಿದಂತೆ ಇನ್ನಿತರ ಕಾಡು ಪ್ರಾಣಿಗಳು ರಸ್ತೆ ದಾಟಲು ಅನುಕೂಲವಾಗಲಿದೆ.

ಆರಣ್ಯ ಇಲಾಖೆ ಮತ್ತು ಹೆದ್ದಾರಿ ಪ್ರಾಧಿಕಾರದ ನಡುವಿನ ತಿಕ್ಕಾಟವೇ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣ ಎನ್ನಲಾಗಿದೆ. ಅಗತ್ಯವಿರುವ ಭೂಮಿಯನ್ನು ಅರಣ್ಯ ಇಲಾಖೆ ನೀಡುತ್ತಿಲ್ಲ ಎಂಬುದು ಪ್ರಾಧಿಕಾರದವರ ವಾದವಾದರೆ, ಅಗತ್ಯವಿರುವ ಭೂಮಿ ಕೊಟ್ಟಾಗಿದೆ ಎಂದು ಅರಣ್ಯ ಇಲಾಖೆ ಹೇಳುತ್ತಿದೆ.

ಎಕ್ಸ್‌ಪ್ರೆಸ್ ವೇ ಕಾಮಗಾರಿ ಮುಗಿದ ಮೇಲು ಹಲವು ಪ್ರಾಣಿಗಳು ಈ ಭಾಗದಲ್ಲಿ ಸತ್ತಿರುವ ಬಗ್ಗೆ ವರದಿಯಾಗಿವೆ. ಇದರಲ್ಲಿ 2023ರ ಫೆ.6ರಂದು ಚಿರತೆಯೊಂದು ಹೆದ್ದಾರಿಯಲ್ಲಿ ಗೌಡಳ್ಳಿ ಗೇಟ್ ಬಳಿ ವಾಹನಕ್ಕೆ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿತ್ತು. ಇದರ ಜೊತೆ ಮತ್ತಷ್ಟು ವನ್ಯಜೀವಿಗಳ ಸಾವಾಗಿರುವ ಬಗ್ಗೆ ಸ್ಥಳೀಯರು ಮರುಗುತ್ತಿದ್ದಾರೆ.

ಇನ್ನಾದರೂ ಅರಣ್ಯ ಇಲಾಖೆ ಮತ್ತು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಮನ್ವಯ ಸಾಧಿಸಿ ವನ್ಯಜೀವಿ ಕಾರಿಡಾರ್ ಕಾಮಗಾರಿ ಪೂರ್ಣಗೊಳಿಸುವ ಮೂಲಕ ವನ್ಯಜೀವಿಗಳ ರಕ್ಷಿಸುವರೇ ಎಂದು ಕಾದು ನೋಡಬೇಕಿದೆ.



ಶ್ರೀರಂಗಪಟ್ಟಣ ತಾಲೂಕು, ಕೆ.ಶೆಟ್ಟಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳು ಒಂದೆಡೆಯಿಂದ ಮತ್ತೊಂದೆಡೆ ಸಾಗಲು ನಿರ್ಮಾಣಗೊಳ್ಳುತ್ತಿರುವ ವನ್ಯಜೀವಿ ಕಾರಿಡಾರ್ ಯೋಜನೆ ನೆನೆಗುದಿಗೆ ಬಿದ್ದಿದ್ದು, ವನ್ಯಜೀವಿಗಳು ಹೆದ್ದಾರಿ ದಾಟಲು ಯತ್ನಿಸಿ ವಾಹನಗಳಿಗೆ ಬಲಿಯಾಗುತ್ತಿವೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಎಂ.ಎಸ್.ಗೀತ ಪ್ರಸನ್ನರಿಗೆ ಪಿಹೆಚ್.ಡಿ



ಮೈಸೂರು,ನ.28(ಪಿಎಂ)– ಮೈಸೂರು ಪೊಲೀಸ್ ತರಬೇತಿ ಶಾಲೆಯ (ಪಿಟಿಎಸ್) ಪ್ರಾಂಶುಪಾಲರಾದ ಎಂ.ಎಸ್.ಗೀತ ಪ್ರಸನ್ನ ಅವರಿಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಮುಕ್ತ ವಿವಿ) ಪಿಹೆಚ್.ಡಿ ಪದವಿ ನೀಡಿದೆ.

ಮುಕ್ತ ವಿವಿಯ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕ (ನಿವೃತ್ತ) ಪ್ರೊ.ಎ.ರಂಗಸ್ವಾಮಿ ಮಾರ್ಗದರ್ಶನದಲ್ಲಿ ಎಂ.ಎಸ್.ಗೀತ ಪ್ರಸನ್ನ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ 'ಮೈಸೂರು ಜಿಲ್ಲೆಯ ಆರಕ್ಷಕರು ; ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಕನ್ನಡ ವಿಷಯ ಕ್ಷೇತ್ರದಲ್ಲಿ ಪಿಹೆಚ್.ಡಿ ಪದವಿಗಾಗಿ ಮುಕ್ತ ವಿವಿಯಿಂದ ಅಂಗೀಕರಿಸಲಾಗಿದೆ.

ಗೀತ ಪ್ರಸನ್ನ ಅವರು ಈ ಮೊದಲು ಕರ್ನಾಟಕ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಆ ನಂತರ 2020ರಲ್ಲಿ ಇವರು, ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಆ ಬಳಿಕ ಪಿಟಿಎಸ್ ಪ್ರಾಂಶುಪಾಲರಾಗಿ ವರ್ಗಾವಣೆಗೊಂಡರು.

ಅವಧಿಗೂ ಮುನ್ನ ಜನಿಸಿದ ಮಕ್ಕಳಿಗೆ ಕಾಂಗರೂ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ

ಮೈಸೂರು,ನ.28(ಜಿಎ)–ಮೈಸೂರಿನಲ್ಲಿರುವ ಕಾಂಗರೂ ಆಸ್ಪತ್ರೆಯಲ್ಲಿ ಅವಧಿಗೂ ಮುನ್ನ ಜನಿಸಿದ ಮಕ್ಕಳಿಗೆ ವಿಶೇಷ ಸಮಗ್ರ ಚಿಕಿತ್ಸೆ ನೀಡುವ ಉತ್ತಮವಾದ ವ್ಯವಸ್ಥೆ ಇದೆ ಎಂದು ಆಸ್ಪತ್ರೆಯ ಸಿಇಒ ಡಾ.ಶೇಖರ್ ಸುಬ್ಬಯ್ಯ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅವಧಿಪೂರ್ವ ಜನಿಸಿದ ಮಕ್ಕಳು ಸಾಮಾನ್ಯ ರೀತಿಯ ಮಕ್ಕಳಂತೆ ಬೆಳೆದು, ಆರೋಗ್ಯ ಪೂರ್ಣವಾಗಿರಬೇಕಾದಲ್ಲಿ ಹಲವಾರು ಸಕಾಲಿಕ ಚಿಕಿತ್ಸೆ, ಆರೈಕೆಗಳ ಅತ್ಯಗತ್ಯ ಮೈಸೂರಿನ ಯಾವುದೇ ಆಸ್ಪತ್ರೆಯಲ್ಲಿ ಇಲ್ಲದಂತಹ ಅತ್ಯಾಧುನಿಕ ಉಪಕರಣ ಮತ್ತು ನುರಿತ ವೈದ್ಯರ ತಂಡ ಇಲ್ಲಿದೆ. ಅವಧಿಗೂ ಮುನ್ನ ಜನಿಸಿದ ಮಕ್ಕಳಿಗೆ ಎರಡು ವರ್ಷಗಳಾಗೂವರೆಗೂ ನಿಗಾವಹಿಸಿ ಶುಶ್ರೂಶೆ ಮಾಡಲಾಗುತ್ತಿದೆ ಎಂದರು.

Kangaroo Care® It's all about Women and Children

ಮಕ್ಕಳಿಗೆ ದೇಹದಲ್ಲಿ ಉಷ್ಣಾಂಶ ಏರುಪೇರಾದರೂ ಅದನ್ನು ಸರಿಪಡಿಸಲು ಉಪಕರಣವನ್ನು ಅಳವಡಿಸಲಾಗುತ್ತದೆ. ಅಮೇರಿಕಾದಲ್ಲಿ ಬಳಸುವ ಮಕ್ಕಳ ಐಸಿಯು ಘಟಕವನ್ನು ತರಿಸಿರುವುದರಿಂದ ಸಾಕಷ್ಟು ಉಪಯುಕ್ತವಾಗಿದೆ. ಈವರೆಗೂ ಹಲವಾರು ಮಕ್ಕಳು ಎಲ್ಲಾ ರೀತಿ ಚಿಕಿತ್ಸೆ ಪಡೆದುಕೊಂಡು ಸಾಮಾನ್ಯ ಜೀವನ ನಡೆಸುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಶುಭಾ, ಡಾ.ಶ್ರುತಿ, ಡಾ.ಮಂಜುನಾಥ್ ಉಪಸ್ಥಿತರಿದ್ದರು.

ಇಂದು ಲಾ ಗೈಡ್ ಕಾನೂನು ಮಾಸಪತ್ರಿಕೆಯ ಬೆಳ್ಳಿಹಬ್ಬ

ಲಾಗೈಡ್ ಕ್ಯಾಲೆಂಡರ್, ಡೈರಿ ಬಿಡುಗಡೆ ಸಮಾರಂಭ



ಭಾಷ್ಯಂ ಸ್ವಾಮೀಜಿ



ವೆಂಕಟೇಶ್

ಮೈಸೂರು, ನ28– ವಕೀಲರು, ಕಾನೂನು ವಿದ್ಯಾರ್ಥಿಗಳ ಮಾರ್ಗದರ್ಶಿಯಾಗಿರುವ ಲಾ ಗೈಡ್ ಕಾನೂನು ಮಾಸಪತ್ರಿಕೆಯ ಬೆಳ್ಳಿಹಬ್ಬ, ಲಾಗೈಡ್ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ ಸಮಾರಂಭ ಶನಿವಾರ(ನ.29) ನಡೆಯಲಿದೆ.

ನಗರದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಬೆಳಗ್ಗೆ 10.30ಕ್ಕೆ ಆಯೋಜಿಸಿರುವ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಾಧೀಶರಾದ ಎಂ.ಜಿ.ಉಮಾ ಅವರು ಲಾಗೈಡ್ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಮಾಡಲಿದ್ದಾರೆ.

ನಿವೃತ್ತ ಐಜಿಪಿ ಡಿ.ಎನ್.ಮುನಿಕೃಷ್ಣ ಶಾಸಕ ಎ.ಮಂಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಉಪಸ್ಥಿತರಿರುವರು.

ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರುಗಳಾದ ಸಿ.ಜಿ.ಹುನಗುಂದ, ಶಶಿಕಲಾ, ಬಸವರಾಜ್ ಎಸ್.ಸಪ್ಪಣ್ಣನವರ್, ರಾಜಾ ಸೋಮಶೇಖರ್, ಎಸ್.ಹೆಚ್.ಹೊಸಗೌಂಡರ್, ಅಂಗಡಿ ಹಿರೇಮಠ್, ಜೆಎಸ್‌ಎಸ್ ಕಾನೂನು ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅಮನ್ನು ಇದೇ ವೇಳೆ ಸನ್ಮಾನಿಸಲಾಗುವುದು.

ಮಧ್ಯಾಹ್ನ 1 ಗಂಟೆಗೆ ಕಾನೂನು ಮತ್ತು ಮಾಧ್ಯಮ ಕುರಿತು ಮೊದಲ ಕಾರ್ಯಾಗಾರ ನಡೆಯಲಿದ್ದು, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಸ್.ಹೆಚ್. ಹೊಸಗೌಂಡರ್ ಉಪನ್ಯಾಸ ನೀಡಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಸೈಬರ್ ಅಪರಾಧ ಮತ್ತು ಡಿಜಿಟಲ್ ಎವಿಡೆನ್ಸ್ ಕುರಿತು ಡಿವೈಎಸ್ಪಿ ಸಿಐಡಿ(ಸೈಬರ್) ಉಪನ್ಯಾಸ ನೀಡಲಿದ್ದಾರೆ.

ನಂತರ ಡಾ.ಭಾಷ್ಯಂ ಸ್ವಾಮೀಜಿ ಉಪಸ್ಥಿತಿಯಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಪ್ರಾದೇಶಿಕ ಜಂಟಿ ಸಾರಿಗೆ ಆಯುಕ್ತ ವಸಂತ್ ಈಶ್ವರ್ ಚೌಹಾಣ್ ಉಪಸ್ಥಿತರಿರಲಿದ್ದಾರೆ ಎಂದು ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ತಿಳಿಸಿದ್ದಾರೆ.

ವಿಶ್ವದ ಅತ್ಯಂತ ಪುರಾತನ ಭಾಷೆಗಳಲ್ಲಿ ಕನ್ನಡವೂ ಒಂದು

ಕವಿ ಜಯಪ್ಪ ಹೊನ್ನಾಳಿ ವಿವರಣೆ



ಮೈಸೂರು, ನ. 28– ಕನ್ನಡವೆಂದರೆ ಕೇವಲ ಶಬ್ದಕೋಶದಿಂದಾದುದ್ದಲ್ಲ; ಅದು ಕರುನಾಡ ಜನಜೀವನದ ಉತ್ಕೃಷ್ಟ ಭಾವ ಕೋಶದಿಂದಾದದ್ದೂ, ಅದು ಕನ್ನಡಿಗರ ಜೀವಧ್ವನಿಧಾತು, ಕನ್ನಡದ ಹೃನ್ಮನಸ್ಸುಗಳಿಂದೊಡಮೂಡಿದ ಪಂಚಪ್ರಾಣಗಳ ಮಾತು ಎಂದು ಕವಿ, ಮೈಸೂರು ನಗರ ಘಟಕದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ಹೇಳಿದರು.


ಮೈಸೂರು ನಗರದ ಮಹಾಲಕ್ಷ್ಮಿ ಮಹಿಳಾ ಮಂಡಳಿ ಹಮ್ಮಿಕೊಂಡಿದ್ದ 70ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಭಾಷೆಗಳ ಲಿಪಿ ಮೂಲವಾದ ಬ್ರಾಹ್ಮೀಲಿಪಿಯಿಂದ ಕನ್ನಡ ಮೂಡಿ ಬಂದಿದೆ, ಸ್ವಂತ ಅಂಕಿಗಳನ್ನೂ ಅಕ್ಷರಗಳನ್ನೂ ಹೊಂದಿರುವ ನಮ್ಮೀ ಭಾಷೆ ವಿಶ್ವದಲ್ಲೇ ಅತ್ಯಂತ ಪುರಾತನವಾದ ಮೂರು ಭಾಷೆಗಳಲ್ಲಿ ಒಂದಾಗಿದೆ, ಒಂದು ಸಂಸ್ಕೃತ, ಎರಡನೆಯದೇ ಗ್ರೀಕ್, ಮೂರನೆಯದೆ ನಮ್ಮ ಕನ್ನಡ ಎಂದರು.

ಪ್ರಜ್ಞಾಪೂರ್ಣರಾದ ನಮ್ಮ ಹಿರೀಕರು ನಮ್ಮ ಕನ್ನಡವನ್ನು ಅತ್ಯಂತ ವೈಜ್ಞಾನಿಕವಾಗಿ, ತಾರ್ಕಿಕವಾಗಿ ಕಟ್ಟಿದ್ದಾರೆ, ಹಾಗಾಗಿಯೇ ಮಾತಾಡಿದಂತೆಯೇ ಬರೆಯಲು, ಬರೆದಂತೆಯೇ ಓದಲು ನಮಗೆ ಸಾಧ್ಯವಾಗುತ್ತಿದೆ, ಜಾಗತಿಕ ಭಾಷೆಯೆಂಬ ಹೆಗ್ಗಳಿಕೆಯ ಆಂಗ್ಲಕ್ಕಾಗಲಿ, ದೇಶ ಭಾಷೆಯೆಂಬ ಹೆಮ್ಮೆಯ ಹಿಂದಿಗಾಗಲಿ ಸ್ವಂತ ಲಿಪಿಗಳಾಗಲಿ, ಅಂಕಿಗಳಾಗಲೀ ನಮ್ಮ ಕನ್ನಡಕ್ಕೆ ಇದ್ದಂತೆ ಇಲ್ಲ. ಆಂಗ್ಲವನ್ನು ರೋಮನ್ ಲಿಪಿಯಲ್ಲಿಯೂ, ಹಿಂದಿಯನ್ನು ದೇವನಾಗರಿ ಲಿಪಿಯಲ್ಲಿಯೂ ಬರೆಯಲಾಗುತ್ತೆ, ಬಹುಭಾಷಾ ಪ್ರವೀಣ ವಿನೋಬಾ ಭಾವೆ ಹೇಳುವಂತೆ ಕನ್ನಡ ಲಿಪಿಗಳ ರಾಣಿಯಾಗಿದ್ದು, ಪಂಪ, ಬಸವಣ್ಣ, ಕುಮಾರವ್ಯಾಸ, ಕುವೆಂಪು ಅವರ ಕೊಡುಗೆಗಳಿಂದ ಅದು ಅಭಿಜಾತ ಭಾಷೆಯಾಗಿದ್ದು, ಅಕ್ಷರಶಃ ಕನ್ನಡ ಅಮೃತ ಭಾಷೆಯಾಗಿದೆ, ಅದು ಅನನ್ಯವಾದದ್ದೂ ಅಪೂರ್ವವಾದದ್ದೂ ಕೂಡಾ, ಜಗತ್ತಿನಲ್ಲಿ ಭಾಷೆಗಳಿರುವವರೆಗೂ ಅದು ಅಕ್ಷಯವಾಗಿಯೇ ಇರುತ್ತದೆ ಎಂದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ನೂತನ ಅಧ್ಯಕ್ಷರಾದ ಡಾ.ಜಯಪ್ಪ ಹೊನ್ನಾಳಿ ಅವರನ್ನು ಬಳಗದಿಂದ ಸನ್ಮಾನಿಸಲಾಯಿತು.

ಮಹಾಲಕ್ಷ್ಮಿ ಮಹಿಳಾ ಮಂಡಳಿ ಅಧ್ಯಕ್ಷೆ ಕವಯಿತ್ರಿ ಎಂ ಎನ್ ದಿವ್ಯಚೇತನ, ಕಾರ್ಯದರ್ಶಿ ಸುಜಾತ ಕಾಶಿ, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಶೋಭಾರಾಣಿ ಜೈಪ್ರಕಾಶ್ ಹಾಗೂ ವಿವಿಧ ಮಹಿಳಾ ಬಳಗಗಳ ಅಧ್ಯಕ್ಷೆಯರೂ ಉಪಸ್ಥಿತರಿದ್ದರು.

ಹನುಮಂತೋತ್ಸವ



ಮೈಸೂರು, ನ.28– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಡಿ.2ರಂದು ಹನುಮ ಜಯಂತಿ ಪ್ರಯುಕ್ತ ಪಂಚಮುಖಿ ಆಂಜನೇಯ ಸ್ವಾಮಿಗೆ ಬೆಳಿಗ್ಗೆ 9.30ಕ್ಕೆ ಅಭಿಷೇಕ ಮತ್ತು ವಿಶೇಷ ಅಲಂಕಾರ ಪೂಜೆ ನೆರವೇರಿಸಲಾಗುತ್ತದೆ. ಮಧ್ಯಾಹ್ನ 12ಕ್ಕೆ ಮಹಾ ಪೂರ್ಣಾಹುತಿ ಸಂಕಲ್ಪ ಪುಷ್ಪಾರ್ಚನೆ. ಹೆಚ್ಚಿನ ಮಾಹಿತಿಗೆ ವೇಬ್ರಶ್ರೀ ಚೇತನ್ ಶರ್ಮಾ ಅವರನ್ನು ಮೊ. ಸಂಖ್ಯೆ: 9845183392ನಲ್ಲಿ ಸಂಪರ್ಕಿಸಬಹುದು

ಡಿಕೆಶಿ ಸಿಎಂ ಆಗಲೆಂದು ಚಾಮುಂಡಿಬೆಟ್ಟದಲ್ಲಿ ಬೆಳ್ಳಿರಥ ಎಳೆದು ಅಭಿಮಾನಿಗಳ ಪ್ರಾರ್ಥನೆ



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಒದಗಿ ಬರಲೆಂದು ಪ್ರಾರ್ಥಿಸಿ, ಡಿಕೆಶಿ ಅಭಿಮಾನಿಗಳು ಚಾಮುಂಡಿಬೆಟ್ಟದಲ್ಲಿ ಬೆಳ್ಳಿ ರಥ ಎಳೆದು ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು,ನ.28(ಎಂಟಿವೈ)– ಮುಂಬರುವ ಅವಧಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ದೊರಕಲಿ ಎಂದು ಪ್ರಾರ್ಥಿಸಿ, ಚಾಮುಂಡಿಬೆಟ್ಟದಲ್ಲಿ ಡಿ.ಕೆ.ಶಿವಕುಮಾರ್ ಅಭಿಮಾನಿಗಳು ಬೆಳ್ಳಿ ರಥ ಎಳೆದು ವಿಶೇಷ ಪೂಜೆ ಸಲ್ಲಿಸಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದಿದ್ದು, ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಯಶಸ್ವಿಯಾಗಿ ಅಧಿಕಾರ ನಡೆಸಿದ್ದಾರೆ. ಎರಡನೇ ಅವಧಿ ಎರಡೂವರೆ ವರ್ಷ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡ ಬೇಕು ಎಂದು ಪಕ್ಷದ ವರಿಷ್ಠರನ್ನು ಒತ್ತಾಯಿಸಿದ ಡಿ.ಕೆ.ಶಿವಕುಮಾರ್ ಅಭಿಮಾನಿಗಳು, ಡಿಕೆಶಿ ಅವರಿಗೆ ದೈವಬಲ ದೊರಕಲೆಂದು ನಾಡದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.


ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರ ಹಿಡಿದು ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಬೆಳ್ಳಿ ರಥವನ್ನು ದೇವಾಲಯದ ಸುತ್ತಲೂ ಎಳೆದು ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗಲು ದೈವ ಕೃಪೆ ಒದಗಲೆಂದು ಬೇಡಿಕೊಂಡರು.

ಇದೇ ವೇಳೆ ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಕೆಪಿಸಿಸಿ ಸದಸ್ಯ ಜಿ. ಶ್ರೀನಾಥ್ ಬಾಬು ಪತ್ರಕರ್ತರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಡಿ.ಕೆ.ಶಿವಕುಮಾರ್ ಅವರ ಆಡಳಿತ ವೈಖರಿ, ಅಭಿವೃದ್ಧಿ ದೃಷ್ಟಿಕೋನ ಮತ್ತು ಜನಪರ ಕೆಲಸಗಳು ಅವರನ್ನು ಪರಿಣಾಮಕಾರಿ ನಾಯಕನನ್ನಾಗಿ ತೋರಿಸಿವೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ 136 ಸ್ಥಾನಗಳ ಗೆಲುವಿನಲ್ಲಿ ಅವರ ಪರಿಶ್ರಮ ಹೆಚ್ಚಾಗಿತ್ತು. ಪ್ರಸ್ತುತ ಮುಖ್ಯಮಂತ್ರಿ ಬದಲಾವಣೆ ಕುರಿತು ಚರ್ಚೆ ನಡೆಯುತ್ತಿವೆ. ಹೈಕಮಾಂಡ್ ಸಿಎಂ ಬದಲಾವಣೆ ಕುರಿತು ಯಾವುದೇ ನಿರ್ಧಾರ ತೆಗೆದುಕೊಂಡಲ್ಲಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೇ ಮುಖ್ಯಮಂತ್ರಿಯನ್ನಾಗಿ ನೇಮಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಡಿ.ಕೆ. ಶಿವಕುಮಾರ್ ಅಭಿಮಾನಿ ಬಳಗದ ಜಿ. ರಾಘವೇಂದ್ರ, ಹರೀಶ್ ಗೌಡ, ಎಸ್.ಎನ್.ರಾಜೇಶ್, ಶಶಾಂಕ್ ಗೌಡ, ಚಂದ್ರು, ಕಿರಣ್, ಪ್ರಸನ್ನ ಕುಮಾರ್ (ಅಪ್ಪಿ), ದಿನೇಶ್, ವಿನೋದ್, ಮಾಥ್ಯೂಸ್, ಹರೀಶ್ ನಾಯ್ಡು, ಶೈಲಾ, ಶೋಭಾ ರಾವ್, ಸುಜಾತ ಭಟ್, ಆಶಾ, ಸುಂದರಿ, ರವಿ ಕಲಾ, ಗೀತಾ, ದೀಪ ಹಾಗೂ ಹಲವಾರು ಅಭಿಮಾನಿಗಳು ಉಪಸ್ಥಿತರಿದ್ದರು.

ಮರೆವಿನ ಖಾಯಿಲೆಯನ್ನು ಆರಂಭದಲ್ಲೇ ಗುಣಪಡಿಸಬಹುದು

ಆತಂಕ ಬೇಡ ಅಂತಾರೆ ಡಾ. ಬಸವನಗೌಡಪ್ಪ



ಮೈಸೂರಿನ ಜೆಎಸ್‌ಎಸ್ ಕಾಲೇಜಿನ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಶುಕ್ರವಾರ ಆಲ್ಝೈಮರ್ ಮತ್ತು ಸಂಬಂಧಿತ ಅಸ್ವಸ್ಥತೆಗಳ ಸೊಸೈಟಿ ಆಫ್ ಇಂಡಿಯಾದ ಆಯೋಜಿಸಿದ್ದ "ಬುದ್ಧಿಮಾಂದ್ಯತೆ: ನೀತಿ, ಅಭ್ಯಾಸ ಮತ್ತು ಪ್ರಗತಿ" ಕುರಿತ ಅಂತರಾಷ್ಟ್ರೀಯ ಸಮ್ಮೇಳನವನ್ನು ಅಮೇರಿಕಾದ ಬಾರ್ಡ್ ಲಾನ್ಸ್ ಮೆಮೋರಿ ಸೆಂಟರ್ ನ ಡಾ.ಯೋಗೇಶ್ ಶಾ ಉದ್ಘಾಟಿಸಿದರು.

ಅಲ್ಝೈಮರ್ ಖಾಯಿಲೆ (ಮರೆವಿನ ಖಾಯಿಲೆ)ಯು 2027ರ ವೇಳೆಗೆ ಶೇಕಡ 60ರಿಂದ ಶೇಕಡ 71ರಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಮರೆವಿನ ಖಾಯಿಲೆಯು ಬುದ್ಧಿ ಮಾಂದ್ಯತೆಗೆ ಸಂಬಂಧಿಸಿದ್ದಾಗಿದೆ. ಅಸಹಜ ಮೆದುಳಿನ ಅಂಗಾಂಶ ಬದಲಾವಣೆಗಳಿಂದ ಇದು ಉಂಟಾಗುತ್ತದೆ.

ಕಳೆದ 15 ವರ್ಷಗಳಿಂದ ಅಭಿವೃದ್ಧಿಶೀಲಗಳ ರಾಷ್ಟ್ರಗಳ ಜನರಲ್ಲಿ ಈ ಖಾಯಿಲೆ ಹೆಚ್ಚಾಗಿ ಕಂಡು ಬಂದಿದೆ. ವಿಶ್ವದಾದ್ಯಂತ ಈಗ ಶೇಕಡ 60ರಷ್ಟಿರುವ ಈ ಖಾಯಿಲೆ ಪ್ರಮಾಣ 2027ರ ವೇಳೆಗೆ ಶೇಕಡ 71ರಷ್ಟಾಗುತ್ತದೆ. ಮಾನಸಿಕ ಹಾಗೂ ಆರ್ಥಿಕ ಒತ್ತಡಗಳಿಂದ ಈ ರೋಗ ಹೆಚ್ಚಾಗಿ ಬರುವ ಸಾಧ್ಯತೆ ಇದೆ. ಅಲ್ಝೈಮರ್ ಖಾಯಿಲೆ ಕುರಿತಂತೆ ಇಂದಿನಿಂದ ಆರಂಭವಾಗಿರುವ ಎರಡು ದಿನಗಳ ಸಮ್ಮೇಳನದಲ್ಲಿ ವಿಸ್ತೃತ ಚರ್ಚೆಗಳು ನಡೆಯಲಿದೆ.

ಮೈಸೂರು, ನ.28(ಬಿಎಲ್‌ಯು)– ಅಲ್ಝೈಮರ್ ಖಾಯಿಲೆ (ಮರೆವಿನ ಖಾಯಿಲೆ)ಗೆ ಆರಂಭದಲ್ಲೇ ಚಿಕಿತ್ಸೆ ನೀಡಿದರೆ ಗುಣಪಡಿಸಬಹುದು. ಈ ಖಾಯಿಲೆಯ ಗುಣಲಕ್ಷಣದ ಬಗ್ಗೆ ಜಾಗೃತಿ ಇರಬೇಕು ಎಂದು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ರಿಸರ್ಚ್ ಕುಲಪತಿ ಡಾ.ಬಸವನಗೌಡಪ್ಪ ಸಲಹೆ ನೀಡಿದರು.

ಮೈಸೂರಿನ ಅಗ್ರಹಾರದ ಜೆಎಸ್‌ಎಸ್ ಕಾಲೇಜಿನ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಇಂದು ಆಲ್ಝೈಮರ್ ಮತ್ತು ಸಂಬಂಧಿತ ಅಸ್ವಸ್ಥತೆಗಳ ಸೊಸೈಟಿ ಆಫ್ ಇಂಡಿಯಾದ ಆಯೋಜಿಸಿದ್ದ 'ಬುದ್ಧಿಮಾಂದ್ಯತೆ: ನೀತಿ, ಅಭ್ಯಾಸ ಮತ್ತು ಪ್ರಗತಿ' ಕುರಿತ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಮರೆವು ಖಾಯಿಲೆ ಭಾರತ ಮಾತ್ರವಲ್ಲದೆ ವಿಶ್ವದ ಎಲ್ಲಾ ದೇಶಗಳಲ್ಲಿ ಹೆಚ್ಚಾಗುತ್ತಿದೆ ಎಂದರು.

ಮನುಷ್ಯನಿಗೆ 60 ರಿಂದ 70 ವರ್ಷ ಮೇಲ್ಪಟ್ಟು ವಯಸ್ಸಾದಾಗ ಸಹಜವಾಗಿಯೇ ಮರೆವಿನ ಖಾಯಿಲೆ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಿಣಾಮಕಾರಿ ಔಷಧಿ ಪಡೆದರೆ ಇದನ್ನು ಗುಣಪಡಿಸಬಹುದು. ವಯಸ್ಸಾದ ವ್ಯಕ್ತಿಗಳಲ್ಲಿ ಮರೆವಿನ ಖಾಯಿಲೆಯ ರೋಗ ಲಕ್ಷಣಗಳು ಕಂಡು ಬಂದರೆ ಕೂಡಲೇ ಅದಕ್ಕೆ ಔಷಧ ಪಡೆದರೆ ಗುಣಪಡಿಸಬಹುದು ಎಂದರು.

ವೈದ್ಯಕೀಯ ವಿಜ್ಞಾನದಲ್ಲಿ ಬಹಳಷ್ಟು ಸಂಶೋಧನೆ, ಔಷಧಿಗಳ ಆವಿಷ್ಕಾರ ನಡೆದಿದ್ದರೂ ನರ ರೋಗದ ಹಲವು ಸಮಸ್ಯೆಗಳಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ ಎಂದು ಡಾ.ಬಸವನಗೌಡಪ್ಪ ಹೇಳಿದರು.

ಅಮೇರಿಕಾದ ಬಾರ್ಡ್ ಲಾನ್ಸ್ ಮೆಮೋರಿ ಸೆಂಟರ್‌ನ ಡಾ.ಯೋಗೇಶ್ ಶಾ ಸಮ್ಮೇಳನ ಉದ್ಘಾಟಿಸಿದರು. ಸೊಸೈಟಿಯ ಅಧ್ಯಕ್ಷೆ ರೇಣು ವೋರಾ, ಸಂಘಟನಾ ಕಾರ್ಯದರ್ಶಿ ಡಾ.ಪ್ರತಿಭಾ ಪಿರೇರಾ, ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಿನ್ಸಿಪಾಲ್ ಡಾ.ಹನುಮಂತಾಚಾರ್ ಜೋಷಿ, ಜೆಎಸ್‌ಎಸ್ ಆಸ್ಪತ್ರೆಯ ಅಧೀಕ್ಷಕ ಡಾ.ಸಿ.ಪಿ.ಮಧು ವೇದಿಕೆಯಲ್ಲಿ ಉಪಸ್ಥಿತರಿದ್ದರು.

SITES FOR SALE
MUDA Approved
PRAKRUTHI ENCLAVE
Sy.No. 216 & 217 Dadadahalli
Village, JAYAPURA
HOBLI, MYSORE TALUK
9880730690

3ನೇ ವರ್ಷದ ಸವಿನೆನಪು



ಶಿವಲಿಂಗು ಎಂ. ಹೊಸಟ್ಟಿ
ನಿಧನ: 29-11-2022
ಸದಾ ನಿಮ್ಮ ನೆನಪನಲ್ಲಿರುವ ತಂದೆ, ತಾಯಿ, ಅಣ್ಣ, ತಮ್ಮ, ತಂಗಿಯರು, ಹೊಸಟ್ಟಿ ಕುಟುಂಬವರ್ಗದವರು ಬಂಧುಮಿತ್ರರು ಹಾಗೂ ಯರಗನಹಳ್ಳಿ ಗ್ರಾಮಸ್ಥರು

HOUSE FOR SALE IN GATED- COMMUNITY
As Per Your Requirement
Architect Designed Near
St, Joseph School, Mysore
20x40 @ 38.8 lakhs
30x50 @ 72.5 lakhs
8123387555
7259348777

HOUSE FOR SALE IN POLICE LAYOUT
As per your requirement
Architect designed
20x30 House at 57 lakhs
20x40 House at 76 lakhs
30x40 House at 108 lakhs
Call: 9663906675

SITES FOR SALE
30x40 sites in D & E Block
Vijayanagar 3rd Stage
Middle of Vasanth Nagar, in prime location fully developed 20x30, 30x43, 40x50, 40x75, 46x83 MUDA Approved sites.
80% Bank loan available
Contact: 90608 28384
91415 55998



ಹಸಿರು ನಮ್ಮ ಉಸಿರು


WANTED HOUSE FOR RENT
3 BHK, independent house in Vijayanagar 4th Stage and surrounding areas.
Owners contact:
Mob: 99160 96956

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

WANTED
For A Leading Venture Across Vertical
SENIOR / JUNIOR CIVIL ENGINEER
8 to 10 Years' Experience in Layout Works
Land Leveling / Drainage Manhole. Road / STP and Overhead Tanks/ Parks/ Waterlines/ Inerior knowledge. Electrical/ Civil Construction Planing and Development/ Labor and Cost/ Knowledge of UGD
With Good Communications and Computer Skils
Salary as per Industry Standards Intrested Candidates can Call or Whats App
7619272225, 9606031376

ಶೋಭಾ ಪ್ರಾಪರ್ಟೀಸ್
(ಹೊಸ ಬಡಾವಣೆ)
ಪೂರ್ಣ ಅಭಿವೃದ್ಧಿ ಹೊಂದಿದ ಸೈಟ್‌ಗಳು ಮಾರಾಟಕ್ಕಿವೆ @ ಬೋಗಾದಿ ರಸ್ತೆ ಈ ನವೆಂಬರ್ ಅಲ್ಲಿ ನಿಮ್ಮ ಕನಸಿನ ಸೈಟ್ ಅನ್ನು ಬುಕ್‌ಮಾಡಿ (2ಲಕ್ಷ OFF ಆಫರ್) ಪಡೆಯಿರಿ
9740407921

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಮರಿಗೌಡ್ರು
ಇವರು ದಿ. 20-11-2025 ನೇ ಗುರವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ. 30-11-2025 ಭಾನುವಾರ ಬೆಳಗ್ಗೆ ನಮ್ಮ ಸ್ವಗೃಹ ಮೈಸೂರು ಬೋಗಾದಿ ಗ್ರಾಮದಲ್ಲಿ ಉತ್ತರ ಕ್ರಿಯಾದಿ ಕಾರ್ಯವನ್ನು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
ದುಃಖತಪ್ತರು: ಶ್ರೀಮತಿ ನಿಂಗಮ್ಮ, ಮಗ: ಲಾರಿ ಕುಮಾರ್, ಸೊಸೆ, ಮಗಳು, ಮೊಮ್ಮಕ್ಕಳು , ಕುಟುಂಬರ್ಗದವರು ಹಾಗೂ ಗ್ರಾಮಸ್ಥರು
ಭೋಜನ: ಮಧ್ಯಾಹ್ನ 12.30ಕ್ಕೆ, ಹರಿಕಥೆ : ಸಂಜೆ 7.00 ಗಂಟೆಗೆ

District Health and Family Welfare Society
District Project Development Office,
Chamarajanagar District, Chamarajanagar.
#308, 3rd Floor, District Administrative Building, Sri. B. Rachaiah Double Road, Chamarajanagar District-571313
Email ID:rchochamarajanagar@gmail.com ದೂರವಾಣಿ ಸಂಖ್ಯೆ : 08226-355162
15th FC/DPMU/CHN/MH/RFP/03/2025-26 Dated: 26-11-2025

Request for Proposal (RFP)
15th Finance commission

Tender No: DHFWS/2025-26/SE1673/CALL-3 Date: 26-11-2025

Name of the Tender	FT4, TSH & Vitamin 12 Lab services to Pregnant Women under 15th Finance Commission in Chamarajanagar District
Date and time for commencement of downloading of bidding document	Date: 26-11-2025
Last date and time for bid submission/uploading of bid in E-Procurement platform	Date: 10.12.2025
Date and time for opening of Technical Bids	Date: 11.12.2025 The bids will be opened online by the Authorized Officers at the appointed time
Place of opening of bids and address for communication	:District Health & Family Welfare Office, Chamarajanagar

Sd/- Member Secretary
District Health & Family Welfare Society,
Chamarajanagar District, Chamarajanagar.
ಸಂ:ವಾಸಾಸಂಇ:ಚಾನಗರ:518:2025–26

NEW HOUSE FOR SALE
20X30 South Duplex
East Door 3BHK House
Vijayanagar 4th Stage,
2nd Phase, Mysuru
Owner
99024 40554
96325 54795

Exchange your old sofa set to brand new sofa set. Also repair done.
Mob: 9591012944

ಮೈಸೂರು ಮಿತ್ರ
46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಪಿ.ಕೆಂಗೇಗೌಡರು
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನೆಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಪುಟ್ಟಲಕ್ಷ್ಮಮ್ಮ, ನಾಗರಾಜು.ಬಿ.ಕೆ, ಪಾಪೇಗೌಡರ ಕುಟುಂಬ, ಬೋಗಾದಿ, ಮೈಸೂರು

Recognised by DEVELOPMENT COMMISSIONER (HANDICRAFTS)
THE INDIAN ARTISANS HAAT
Recognized by - Government of India, Ministry of Textiles, Office of the Development Commissioner (Handicrafts)
Mysuru Edition
ಪ್ರವೇಶ ಟಿಕೆಟ್ ₹40/-
Handicrafts • Handlooms • Antiques • Artefacts
Handmade • Sustainable Products Expo
ಕೈಮಗ್ಗಗಳು, ಕಲಾಕೃತಿಗಳು, ಪ್ರಾಚೀನ ವಸ್ತುಗಳು ಮುಂತಾದ ದೇಶದ ನಿಪುಣ ಕರಕುಶಲಕರ್ಮಿಗಳ ಪರಿಸರ ಸ್ನೇಹಿ ಮತ್ತು ಸುಸ್ಥಿರವಾದ ಉತ್ಪನ್ನಗಳನ್ನು ನೇರವಾಗಿ ನಿಮಗೆ ತಲುಪಿಸುವ ಪ್ರದರ್ಶನ ಮತ್ತು ಮಾರಾಟ.
ಕರಕುಶಲಕರ್ಮಿಗಳಿಂದ ಲೈವ್ ಡೆಮೋ ಇರುತ್ತದೆ
ನವೆಂಬರ್ 28 ರಿಂದ ಡಿಸೆಂಬರ್ 7 ರವರೆಗೆ ಬೆಳಿಗ್ಗೆ 10:30 ರಿಂದ ರಾತ್ರಿ 8:30 ರವರೆಗೆ
ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆಯ ಡಿಸಿ ಕಚೇರಿಯ ಹಿಂಭಾಗ ಕೆ.ಜಿ. ಕೊಪ್ಪಲ್, ಚಾಮರಾಜಪುರ, ಮೈಸೂರು



ಪಾರ್ಕಿಂಗ್ ಲಭ್ಯವಿದೆ +91 96200 26044 / 9880331685

ಹೊಟೇಲ್ ಮಾರಾಟಕ್ಕಿದೆ
ಮೈಸೂರು ಜೆ.ಪಿ. ನಗರ 40x68 ಅಳತೆಯ ಸಂಪೂರ್ಣ ಫರ್ನಿಶ್ಡ್ ರೆಸ್ಟೋರೆಂಟ್/ಕೆಫೆ ಮಾರಾಟಕ್ಕೆ! ಎಲ್ಲಾ ಸೌಲಭ್ಯಗಳೊಂದಿಗೆ ತಕ್ಷಣ ಚಾಲನೆಗೆ ತಯಾರಾಗಿದೆ. ಆಕರ್ಷಕ ಸ್ಥಳ ಉತ್ತಮ ಹೂಡಿಕೆ ಅವಕಾಶ!
ಹೆಚ್ಚಿನ ಮಾಹಿತಿಗೆ ಕರೆ ಮಾಡಿ:
9591960066 | 9035919366
93535 38383

Invites Land Owners For
JOINT VENTURE / OUTRIGHT PURCHASE (MYSORE)
For LAYOUT DEVELOPMENT
AMACSIndia
Adding value to your property
RERA NO: PRM/KA/RERA/1268/378/AG/221014/003144
Contact : 9980083876 / 9342104203

G9 projects **ನವೆಂಬರ್ ಹಬ್ಬ** Vee2 Developers
ಧನ್ಯವಾದಗಳು ಶೇ.40 ರಷ್ಟು ಮಾರಾಟ
ಪೂರ್ವ ಶೆಲ್ಟರ್ಸ್
20×30 | 30×40 20×40 | 30×50
30 - 11 - 2025 ಆಫರ್ ಕೊನೆಗೊಳ್ಳುತ್ತದೆ
8088-707-707

Reliance
YOUR FAVOURITE ELECTRONICS STORE BM HABITAT MALL, MYSORE IS NOW **BIGGER & BETTER**
digital **BLACK FRIDAY SALE** TILL 01ST DEC
ಅತ್ಯದ್ಭುತ ಆಫರ್ಸ್, ಸೀಮಿತ ಕಾಲಾವಧಿ.
Reliance digital
PERSONALISING TECHNOLOGY
www.reliancedigital.in
₹10000 ತನಕ ಇನ್‌ಸ್ಟೆಂಟ್ ಡಿಸ್ಕೌಂಟ್*
AU SMALL FINANCE BANK | AXIS BANK | BOBCARD | IDFC FIRST Bank | kotak
₹21000 ತನಕ ಕ್ಯಾಶ್‌ಬ್ಯಾಕ್* ಕನ್ಸೂಮರ್ ಡುರೆಬಲ್ ಲೋನ್ ಗಳ ಮೇಲೆ
HDB FINANCIAL SERVICES

TELEVISIONS
SAMSUNG 190 CM (75) 4K UHD TV now at ₹67990* — Grab it before it's too late
Image simulated for representational purposes only. *T&C apply.
TOSHIBA QLED 109 CM (43) M450RP — 2 Year Warranty — OLD PRICE ~~₹26990~~ NEW PRICE ₹22990*
TCL 139 CM (55) 55P6K ULTRA HD — 2 Year Warranty — OLD PRICE ~~₹31990~~ NEW PRICE ₹28990*

LAPTOP PRICES RISING SOON - BUY NOW!

AMD LAPTOPS		INTEL LAPTOPS		MacBook Air Powered by M4 Chip
AMD R3 7000 16 GB	AMD R5 7000 16 GB	Intel Core 3 16 GB	Intel Core 5 16 GB	Built for Apple Intelligence.
~~₹46990~~ ₹29999*	~~₹52990~~ ₹37999*	~~₹56999~~ ₹37999*	~~₹70499~~ ₹49999*	~~₹99900~~ ₹79900*

*Prices inclusive of all offers

SMARTPHONES
iPhone 16 128 GB ₹59990* | OPPO FIND X9 ₹67490* EMIs of ₹3125* | ONEPLUS 15 ₹68999*
*Prices inclusive of bank offer

INVERTER ACs
BUY SELECT GODREJ 1T ACs & GET FREE BAJAJ MIXER GRINDER WORTH ₹5199*
1T Starting From ₹17990* | 1.5T Starting From ₹18990*
*Prices inclusive of bank offer & exchange

REFRIGERATORS
RANGE AVAILABLE FROM 45L TO 809L
SINGLE DOOR Starting From ₹9990*
DOUBLE DOOR Starting From ₹19490*
SIDE BY SIDE Starting From ₹48990*
CLEARANCE SALE
BOTTOM MOUNT Starting From ₹19990*
380L TOP MOUNT Starting From ₹32990*
LATEST MODELS | CONVERTIBLE | AI-ENABLED Wi-Fi & SMARTPHONE CONTROL

WASHING MACHINES

SEMI-AUTOMATIC		TOP LOAD	FRONT LOAD	
KELVINATOR 8 Kg	WHIRLPOOL 8 Kg	SAMSUNG 9 Kg	LG 10 Kg	SAMSUNG 12 Kg
~~₹17990~~ ₹10990*	~~₹16350~~ ₹12490*	~~₹31500~~ ₹22990*	~~₹60990~~ ₹39990*	~~₹60990~~ ₹45990*

*Prices inclusive of all offers

NOISE Endeavour 2 ~~₹5999~~ ₹5259* | Pro 6 Max ~~₹7999~~ ₹7009*
EUREKA FORBES Smart Robotic Vacuum Cleaner — 65% OFF • Up to 5 Hrs Battery Life • Dry & Wet Mopping • Strong Suction Power ~~₹39999~~ ₹13999* — BENEFITS GET ASSURED FREEBIES WORTH UP TO ₹3055*
AirPods Pro 2nd Gen ~~₹24900~~ ₹18900* EMIs of ₹829*

SCAN TO VISIT WEBSITE OR STORE
FREE DELIVERY & FASTEST INSTALLATION* | WIDEST RANGE OF LATEST TECH | EXPERT ADVICE* | EXTENDED WARRANTY* | EASY EMIs
ALSO SHOP AT: SHOP ANY ELECTRONICS AT MY JIO STORE Jio DIGITAL LIFE